ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 8

ಫೆಬ್ರವರಿ 20, 2011

ಕನ್ನಡ ವಾರಪತ್ರಿಕೆ


ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com



ಈಜಿಪ್ಟ್: ಇತಿಹಾಸ ನಿರ್ಮಿಸುತ್ತಿರುವ ಜನತೆ



ಸಾಹಿತ್ಯ ಸಮ್ಮೇಳನ: ಆಳುವವರ ತುಳಿತಕ್ಕೆ ಸಿಲುಕಿರುವ ಕನ್ನಡ



ಚಿನ್ನದ ಗಣಿ ಪುನಶ್ಚೇತನಕ್ಕೆ ಸಂಘರ್ಷದ ನವಚೇತನ



'ಕೃಷಿ ಬಜೆಟ್' ಎಂಬ ಗಿಮಿಕ್

ಉದ್ಯೋಗ ಖಾತ್ರಿ ಯೋಜನೆ: ಕೂಲಿ ಹೆಚ್ಚಬೇಕೇಕೆ?



ಬೆಲೆ ಏರಿಕೆ ವಿರೋಧಿಸಿ ಆಂದೋಲನ

ಜನಶಕ್ತಿ
ಕನ್ನಡ ವಾರಪತ್ರಿಕೆ

ಉದ್ಯೋಗ ಖಾತ್ರಿಯೋಜನೆ ನಮ್ಮ ಪ್ರಸ್ತುತ ಸಂದರ್ಭದ ಒಂದು ಅತ್ಯಂತ ಮಹತ್ವದ ಯೋಜನೆ. ಆದರೆ ಕೇಂದ್ರ - ರಾಜ್ಯ ಸರ್ಕಾರಗಳ ವರ್ಗ ರಾಜಕೀಯ, ವರ್ಗ ಹಿತಾಸಕ್ತಿಗಳ ಫಲವಾಗಿ ಯೋಜನೆಯ ಜಾರಿ ಸರಿಯಾಗಿ ಆಗದೇ ಹೋಗುವುದನ್ನು ಬಹಳಷ್ಟು ಕಡೆ ನೋಡಬೇಕಾಗಿದೆ. ನ್ಯಾಯಬದ್ಧ ಕೂಲಿ ನೀಡದಿರುವುದು ಯೋಜನೆಯನ್ನು ಮೂಲೆಗುಂಪು ಮಾಡುವ ಆಳುವ ಜನರ ಕುತಂತ್ರಗಳಲ್ಲಿ ಒಂದು. ಈಗ ಕೂಲಿ ಹೆಚ್ಚಬೇಕಿದೆ. ಅದು ಹೆಚ್ಚಾಗಬೇಕಾದ ತೀವ್ರ ಅಗತ್ಯವೇನು? ಅದರ ಹಿಂದಿನ ತರ್ಕ, ಕಾರಣ ಏನು? ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳ ಲೇಖನ

ಉದ್ಯೋಗ ಖಾತ್ರಿ ಯೋಜನೆ

ಯಾಕೆ ಕೂಲಿ ಹೆಚ್ಚಿಸಬೇಕು ?

ಜಿ.ಸಿ. ಬಯ್ಯಾರೆಡ್ಡಿ

ಮೊದಲಿಗೆ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬರಬೇಕಾದ ಅಗತ್ಯವೇನು ಎಂಬುದನ್ನು ಗಮನಿಸಬೇಕು. 2004 ರಲ್ಲಿ ಯುಪಿಎ -1 ಸರ್ಕಾರ ಬಂದಾಗ ಪ್ರಧಾನ ಪ್ರಶ್ನೆ ಇದ್ದದ್ದು ಕೃಷಿ ಬಿಕ್ಕಟ್ಟಿನ ವಿಷಯ.

ಆ ಕೃಷಿ ಬಿಕ್ಕಟ್ಟನ್ನು ಎನ್.ಡಿ.ಎ. ಸರಿಯಾಗಿ ನಿರ್ವಹಿಸಲಿಲ್ಲ. ಹೆಚ್ಚಿಸಿತು ಎಂಬ ಕಾರಣಕ್ಕಾಗಿಯೇ ಅವರು 'ಭಾರತ ಪ್ರಕಾಶಿಸುತ್ತಿದೆ' ಎಂದೆಲ್ಲಾ ಜೋರು ಪ್ರಚಾರ ಮಾಡಿದರೂ ಎನ್.ಡಿ.ಎ. ಗೆ ಜನ ಮತ ನೀಡಲಿಲ್ಲ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಹೆಚ್ಚಿನ ಸ್ಥಾನಗಳನ್ನು ಗಳಿಸಿದವು. ಆ ಸಂದರ್ಭದಲ್ಲಾಗಲೇ 1.5 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಸಾವಿರಾರು ಹಸಿವಿನ ಸಾವುಗಳು ವರದಿಯಾಗುತ್ತಿದ್ದವು. ಇದರ ಜೊತೆಗೆ ಬಾರಿ ದೊಡ್ಡ ಸಮಸ್ಯೆ ಇದ್ದದ್ದು ಗ್ರಾಮೀಣ ಬಡವರ, ಕೂಲಿಕಾರರ ವಲಸೆ ಪ್ರಶ್ನೆ. ಅವರು ತಾವು ವಾಸ ಮಾಡುವ ಪ್ರದೇಶಗಳಲ್ಲಿ ಕೆಲಸ ಸಿಗದೆ ದೂರದ ಊರುಗಳಿಗೆ ತಿಂಗಳಾನುಗಟ್ಟಲೆ ವಲಸೆ ಹೋಗಬೇಕಾದ ಪರಿಸ್ಥಿತಿಯಿತ್ತು. ಈ ಸಮಸ್ಯೆಗಳನ್ನು ನಿವಾರಿಸುವಲ್ಲಿನ ವೈಫಲ್ಯವೇ ಎನ್.ಡಿ.ಎ ಸೋಲಿಗೆ ಕಾರಣ. ಯುಪಿಎ ಅಧಿಕಾರಕ್ಕೆ ಬರಲು ಕಾರಣ. ಎಡಪಕ್ಷಗಳ ಬೆಂಬಲ ಅಗತ್ಯವಾದ ಹಿನ್ನೆಲೆಯಲ್ಲಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಸಿ.ಎಂ.ಪಿ. ಎಂಬುದನ್ನು ರೂಪಿಸಲಾಯಿತು. ಹಣಕಾಸು ಕ್ಷೇತ್ರವನ್ನು ಖಾಸಗೀಕರಿಸಬಾರದು. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಬಾರದು. ಕೃಷಿ ಬಿಕ್ಕಟ್ಟನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಕೃಷಿ ಕ್ಷೇತ್ರದಲ್ಲಿ ಸರ್ಕಾರ ಹೆಚ್ಚು ಬಂಡವಾಳ ಹೂಡಿಕೆ ಮಾಡಬೇಕೆಂಬ ಅಂಶ ಪ್ರಧಾನವಾದ ವಿಚಾರ. ಇದರ ಭಾಗವಾಗಿ ಒಂದು ಕಡೆ ಕೃಷಿಗೆ ದೊಡ್ಡ ಪ್ರಮಾಣದಲ್ಲಿ ಬ್ಯಾಂಕ್ ಸಾಲ ಕೊಡಬೇಕೆನ್ನುವುದು, ಕನಿಷ್ಟ ಉದ್ಯೋಗದ ದಿನಗಳನ್ನು ಖಾತ್ರಿ ನೀಡುವ ಯೋಜನೆ ಈ ಕಾರ್ಯಕ್ರಮದ ಭಾಗವಾಗಿ ಬಂತು.

ಅಂದಿನ ಸರ್ಕಾರಿ ಅಂಕಿಸಂಖ್ಯೆ ಯಂತೆ ದೇಶದಲ್ಲಿ ವರ್ಷಕ್ಕೆ ಸರಾಸರಿ 365 ದಿನಗಳಲ್ಲಿ ಕೇವಲ 60 ರಿಂದ 63 ದಿನಗಳು ಮಾತ್ರ ಕೂಲಿಕಾರರಿಗೆ ಕೆಲಸ ಸಿಗುತ್ತಿತ್ತು. ಉಳಿದ ಸುಮಾರು 300 ಕ್ಕೂ ಹೆಚ್ಚು ದಿನಗಳ ಕಾಲ ಕೂಲಿಕಾರರ ಬದುಕು ಹೇಗೆ ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಯೋಜನೆ ಬಂತು. ಗಂಡು ಹೆಣ್ಣಿಗೆ ಸಮಾನ ಕೂಲಿ ಕೊಡುವ ಅಂಶವನ್ನು ಒಳಗೊಂಡು ಯೋಜನೆ ಬಂತು.

ಒಂದು ಹೆಜ್ಜೆ ಮುಂದಕ್ಕೆ

ತಾತ್ವಿಕವಾಗಿ ಹೇಳುವುದಾದರೆ ಜಗತ್ತಿನಲ್ಲಿ ವಿವಿಧ ಸರ್ಕಾರಗಳು ಸಾಮಾಜಿಕ ಭದ್ರತಾ ಯೋಜನೆಗಳನ್ನು ವಾಪಸ್ ತೆಗೆದುಕೊಂಡು ಎಲ್ಲವನ್ನೂ 'ಮಾರುಕಟ್ಟೆ'ಗೆ ಬಿಡುವ ಪ್ರವೃತ್ತಿ ತೀವ್ರವಾಗಿದ್ದಾಗ, ಉದ್ಯೋಗ ಖಾತ್ರಿ ಯೋಜನೆಗಾಗಿ ಸರ್ಕಾರ ಬದ್ಧತೆ ತೋರಬೇಕಾದ ಪರಿಸ್ಥಿತಿ ಬಂದಿದ್ದು ವಿಶೇಷವಾದ ಅಂಶವಾಗಿತ್ತು.

ದೇಶದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಶಾಸನಬದ್ಧವಾಗಿ ಇಷ್ಟು ದಿನ ಕೂಲಿ, ಇಷ್ಟು ದಿನ ಕೆಲಸ ಕೊಡಬೇಕೆಂಬ ಯೋಜನೆ ಜಾರಿಗೆ ಬಂದಿತು. ಹಿಂದೆಲ್ಲಾ ಯೋಜನೆಗಳು ಸ್ಕೀಂಗಳಿದ್ದವು. ಅವು ಇರುವವರೆಗಷ್ಟೇ. ಆದರೆ ಉದ್ಯೋಗ ಖಾತ್ರಿ ಯೋಜನೆ ಕಾನೂನು ಜಾರಿಯಾಗದಿದ್ದರೆ ಅದು ಶಿಕ್ಷಾರ್ಹ ಅಪರಾಧ.

ಯೋಜನೆ ಗ್ರಾಮೀಣ ಉದ್ಯೋಗ ಖಾತ್ರಿ ಮಾತ್ರವಲ್ಲ. ನಗರ ಪ್ರದೇಶಗಳೂ ಒಳಗೊಂಡು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಆಗಬೇಕು ಎಂಬುದು ಎಡಪಕ್ಷದ ಒತ್ತಾಯವಾಗಿತ್ತು. ಅದಕ್ಕೆ ಯುಪಿಎ ಸಿದ್ಧವಿಲ್ಲದಿದ್ದ ಹಿನ್ನೆಲೆಯಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಯೋಜನೆ ಬಿಕ್ಕಟ್ಟು ತೀವ್ರವಾಗಿದ್ದರಿಂದ ಅಂತಿಮವಾಗಿ ಮೊದಲಿಗೆ ಗ್ರಾಮೀಣ ಪ್ರದೇಶಗಳಲ್ಲಿ ಯೋಜನೆ ಜಾರಿಗೆ ತರಲು ಎಡಪಕ್ಷಗಳೂ ಒಪ್ಪಿಕೊಂಡು ಯೋಜನೆ ಜಾರಿಗೆ ಬಂತು. ನಾಲ್ಕೈದು ವರ್ಷದ ಯೋಜನೆ ಜಾರಿಯ ಅನುಭವ ನೋಡುವುದಾದರೆ ಯಾವ ಉದ್ದೇಶದಿಂದ ಯೋಜನೆಯನ್ನು ತರಲಾಯಿತೋ ಅದು ಸಂಪೂರ್ಣವಾಗಿ ಸಾಕಾರವಾಗಿಲ್ಲ. ಆದರೆ ಈ ಕಾಯ್ದೆಯಿಂದ ಕೆಲವು ರಾಜ್ಯಗಳಲ್ಲಾದರೂ ವಲಸೆ ತಡೆಯುವಂತಹ, ಒಂದಷ್ಟು ಉದ್ಯೋಗದ ಖಾತ್ರಿ ನೀಡುವಂತಹ ಕೆಲಸ ಆಗಿದೆ. ಈ ಯೋಜನೆಯಿಂದ ಜನರಿಗೆ ಕನಿಷ್ಟ ಜೀವನಾಧಾರ ಸಿಕ್ಕಿದೆ. ಜೊತೆಗೆ



ಸಾಮಾನ್ಯ ಕೂಲಿಯ ದರವೂ ಇದರಿಂದ ಹೆಚ್ಚಿದೆ. ಹೀಗಾಗಿ ಸ್ವಲ್ಪಮಟ್ಟಿಗೆ ಜೀವನಮಟ್ಟ ಸುಧಾರಣೆಯಾಗಿದೆ.

ವಿಶೇಷವಾಗಿ ಎಡ ಚಿಂತನೆಯ ಸಂಘಟನೆಗಳು ಎಲ್ಲಿ ಮುತುವರ್ಜಿ ವಹಿಸುಸಿವೆಯೋ ಅಲ್ಲಿ ಉತ್ತಮ ಪ್ರಗತಿ ಸಾಧ್ಯವಾಗಿದೆ. ಉದಾಹರಣೆಗೆ ತ್ರಿಪುರ ರಾಜ್ಯ.

ಒಟ್ಟಾರೆ ಸುಮಾರು 40 ರಿಂದ 45 ಸಾವಿರ ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಕೇಂದ್ರ ಸರ್ಕಾರ ನೀಡುತ್ತಿದೆ. ಆ ದೇಶದಲ್ಲಿ ಜಾಬ್‌ಕಾರ್ಡ್ ಮಾಡಿಕೊಂಡಿರುವ ಎಲ್ಲ ಕೂಲಿಕಾರರಿಗೆ ವರ್ಷಕ್ಕೆ 100 ದಿನಗಳು ಕೂಲಿಕೊಟ್ಟರೆ ಈಗ ಸರ್ಕಾರ ನೀಡಿರುವ ಹಣದ ಮೂರು ಪಟ್ಟು ಹಣ ಬೇಕಾಗುತ್ತದೆ. ಮತ್ತೊಂದೆಡೆ ಸರ್ಕಾರ ಈಗ ನೀಡಿರುವ ಹಣ ಕೂಡ ಪೂರ್ಣವಾಗಿ ಬಳಕೆಯಾಗುತ್ತಿಲ್ಲ.

ಏನು ತಡೆ?

ಯಾಕೆ ಯೋಜನೆ ಪೂರ್ಣವಾಗಿ ಜಾರಿಗೆ ಬರುತ್ತಿಲ್ಲ ಎಂದು ನೋಡಿದರೆ ಮೊದಲ ಕಾರಣ ವಿಪರೀತವಾದ ಬೆಲೆ ಏರಿಕೆ. ಆಹಾರವಸ್ತುಗಳ ಹಣದುಬ್ಬರವು ಶೇ.18ಕ್ಕಿಂತಲೂ ಹೆಚ್ಚಿದೆ. ಅದಕ್ಕೆ ಅನುಗುಣವಾಗಿ ಕೂಲಿಯನ್ನು ಹೆಚ್ಚಿಸದಿರುವುದರಿಂದ ಯೋಜನೆ ಪೂರ್ಣ ಜಾರಿಯಾಗುತ್ತಿಲ್ಲ.

ಎರಡನೆಯದು, ಕಾನೂನಿನಂತೆ ಅರ್ಜಿ ಕೊಟ್ಟ 15 ದಿನದೊಳಗಾಗಿ ಕೆಲಸ ಕೊಡದ ಅಧಿಕಾರಶಾಹಿ ಮತ್ತು ಪಟ್ಟಭದ್ರರ ನಿರ್ಲಕ್ಷ್ಯ, ಕೆಲಸ ಮಾಡಿದಂತಹ ಕೂಲಿಯನ್ನು ಕಾನೂನಿನಂತೆ 15 ದಿನಕ್ಕೊಮ್ಮೆ ಕೊಡದೇ ತಿಂಗಳಾನುಗಟ್ಟಲೆ ವಿಳಂಬ ಮಾಡುವ ಪಟ್ಟಭದ್ರರ ಧೋರಣೆ ಯೋಜನೆಯನ್ನು ಸರಿಯಾಗಿ ಜಾರಿ ಮಾಡಲೇಬೇಕೆಂಬ ಬದ್ಧತೆಯಿಲ್ಲದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮೂರನೇ ಕಾರಣ.

ಕೂಲಿ ಕಡಿಮೆ ಇರುವಂತಿಲ್ಲ ಎನ್ನುತ್ತದೆ ಕಾನೂನು

ಕೂಲಿಗೆ ಸಂಬಂಧಿಸಿ ಉದ್ಯೋಗ ಖಾತ್ರಿ ಕಾನೂನಿನಲ್ಲೇ ಸ್ಪಷ್ಟವಾಗಿ ಇದೆ. ರಾಜ್ಯ ಸರ್ಕಾರಗಳು ಕೃಷಿ ಕೂಲಿಕಾರರಿಗೆ ನಿಗದಿಪಡಿಸಿರುವ ಕೂಲಿಗಿಂತ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಡಿಮೆ ಇರಬಾರದೆಂಬ ಅಂಶ ಕಾನೂನಿಯಲ್ಲೇ ಇದೆ. ಆದರೆ ನಮ್ಮ ರಾಜ್ಯವೂ ಸೇರಿದಂತೆ ಹಲವಾರು ಕಡೆ ಜಾರಿಯಲ್ಲಿ ಇಲ್ಲ.

ಈ ಅಂಶ ಜಾರಿಯಾಗಿಲ್ಲ. ಜಾರಿಯಾಗಬೇಕೆಂದು ಹೋರಾಟ ನಡೆದಿದೆ. ರಾಜ್ಯ ಸರ್ಕಾರಗಳ ವಿರುದ್ಧ ಹಲವು ರಾಜ್ಯಗಳಲ್ಲಿ ಮೊಕದ್ದಮೆ ಹೂಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಈ ಮೊಕದ್ದಮೆ ಹೂಡಿ ಆದರಿಂದ ಭಾಗಶ: ಫಲ ಸಿಕ್ಕಿದೆ.

ರಾಜ್ಯ ಸರ್ಕಾರವು ರಾಜ್ಯದಲ್ಲಿ ಕನಿಷ್ಟ ದಿನಗೂಲಿಯನ್ನು 100 ರೂ.ಗೆ ನಿಗದಿ ಮಾಡಿದೆ. ಅದು ಕೂಡ ಹೆಚ್ಚಳವಾಗಬೇಕು. 150 ರೂ. ಆಗಬೇಕೆಂದು ರೈತಸಂಘ ಆಗ್ರಹಿಸುತ್ತದೆ.

ಉದ್ಯೋಗ ಖಾತ್ರಿ ಕಾನೂನಿನಲ್ಲಿ 10 ಕುಟುಂಬಗಳು ಅಥವಾ ಅದಕ್ಕಿಂತ ಹೆಚ್ಚು ಕುಟುಂಬಗಳು ಸೇರಿ ಕೆಲಸ ಬೇಕೆಂದು ಫಾರಂ 6 ಕೊಟ್ಟರೆ ಅವರಿಗೆ ಅವರ ಊರಿನ ಎಲ್ಲಾ ಗ್ರಾಮಸ್ಥರೇ ಸೇರಿ ತೀರ್ಮಾನ ಮಾಡಿದ ಕಾಮಗಾರಿಗಳಲ್ಲಿ ಕೆಲಸ ಕೊಡಬೇಕೆಂಬ ಕಾನೂನಿದೆ. 15 ದಿನಗಳೊಳಗಾಗಿ ಕೆಲಸ ಕೊಡದಿದ್ದರೆ ಹಂತಹಂತವಾಗಿ ನಿರುದ್ಯೋಗ ಭತ್ಯೆ ಕೊಡಬೇಕೆಂದೂ ಕಾನೂನಿದೆ. ಇದನ್ನು ಗ್ರಾಮ ಪಂಚಾಯ್ತಿಗಳು ಜಾರಿ ಮಾಡಬೇಕಿದೆ. ಅರ್ಜಿ ಕೊಟ್ಟು 2 ರಿಂದ 3 ತಿಂಗಳಾದರೂ ಕೆಲಸ ಕೊಡುತ್ತಿಲ್ಲ.

ಆದರೆ ಅದೇ ಸಮಯದಲ್ಲಿ ಕಾಂಟ್ರಾಕ್ಟುದಾರರು, ಯಂತ್ರೋಪಕರಣ ಬಳಸಿ ಕೆಲಸ ಮಾಡುವವರಿಗೆ ಯೋಜನೆ ಕೊಟ್ಟು ಲಕ್ಷಾಂತರ ರೂಪಾಯಿಗಳ ಹಣವನ್ನು ಪಾವತಿ ಮಾಡುತ್ತಿದ್ದಾರೆ.

1 ರಿಂದ 5 ದಿನಗಳೊಳಗೆ ಕೆಲಸ ಕೊಡದಿದ್ದರೆ ನಿರುದ್ಯೋಗ ಭತ್ಯೆ ಕೊಡಬೇಕೆಂಬುದು ಮಾತ್ರವಲ್ಲದೇ ಕೆಲಸ ನಿರಾಕರಿಸಿದವರ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಲು ಬೇಕಾದ ಕಾನೂನು ಬದಲಾವಣೆ ಕೂಡ ಬರಬೇಕೆಂಬುದು ನಮ್ಮ ಒತ್ತಾಯ. ಕೂಲಿಕಾರರಿಗೆ ನಿರುದ್ಯೋಗ ಭತ್ಯೆ ತ್ವರಿತವಾಗಿ ಪಡೆದುಕೊಳ್ಳಲು ಆಗುವಂತಹ ಕ್ರಮಗಳ ಸರಳೀಕರಣ ಆಗಬೇಕಿದೆ.

ಹೋರಾಟದ ಮೂಲಕವೇ ಕೆಲಸ ಪಡೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಅದನ್ನು ಮುಂದುವರಿಸಬೇಕಾಗಿದೆ.

ಅಂತಿಮವಾಗಿ ಮಾಡಿದ ಕೆಲಸಕ್ಕೆ ಕೂಲಿ ಕೊಡಬೇಕೆನ್ನುವುದು. ನಿಗದಿತ ಕೂಲಿ ಕಾನೂನಿನಲ್ಲಿ ಇರುವ ಅಂಶ. ವಾರದೊಳಗೆ ಕೊಡಬೇಕು ಎಂದು ಅದು ಈಗ ಬದಲಾಗಿದೆ. ಆದರೆ ಇಡೀ ದೇಶದಲ್ಲಿ ಎಲ್ಲಿಯೂ ಕಾನೂನಿನಂತೆ ಕೂಲಿ ಸಿಗುತ್ತಿಲ್ಲ.

ಉದ್ಯೋಗ ಖಾತ್ರಿ ಕೆಲಸಕ್ಕೆ ಹೋದರೆ 2 ರಿಂದ 3 ತಿಂಗಳಾದರೂ ಕೂಲಿ ಸಿಗುವುದಿಲ್ಲ ಎಂಬ ಪರಿಸ್ಥಿತಿ ಇದೆ.

ಹೀಗಾಗಿ ಅಕ್ರಮಗಳಿಗೆ ಪ್ರೇರಣೆ ನೀಡಿ ವೇತನ ವಿಳಂಬ ಮಾಡಿ ಕೆಲಸ ಕೊಡದೇ ಯೋಜನೆಯನ್ನೇ ಹಾಳು ಮಾಡಲಾಗುತ್ತಿದೆ.

ಹಣ ಬಳಕೆಯೇ ಆಗಿಲ್ಲ

ಕರ್ನಾಟಕಕ್ಕೆ ಕೇಂದ್ರದಿಂದ ಈ ವರ್ಷ ಉದ್ಯೋಗ

ಪುಟ 15 ಕ್ಕೆ

ಸರಸ್ವಾದಕ್ಕೊಂದು- ‘ಕೃಷಿ ಬಜೆಟ್’ನ ಗಿಮಿಕ್

ರೈತನ ಮಗನಾಗಿ ಹುಟ್ಟಿ ಬಿಟ್ಟಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಸಾಮಾನ್ಯ ಬಜೆಟ್ ಜೊತೆಯಲ್ಲೇ ಪ್ರತ್ಯೇಕವಾಗ ಕೃಷಿ ಬಜೆಟ್ ಮಂಡಿಸುವುದಾಗಿ ಹೇಳುತ್ತಿರುವುದು ವರ್ಣಮಯ ಕಾಮನಬಿಲ್ಲು ಸೃಷ್ಟಿಸುವ ಪ್ರಯತ್ನವೇ ಆಗಿದೆ. ಈಗಾಗಲೇ ವ್ಯಕ್ತಿತ್ವ, ಸರ್ಕಾರದ ಆಡಳಿತ ಎಲ್ಲವೂ ಶಿಥಿಲಗೊಂಡು ಕುಖ್ಯಾತಯಿಂದ ನೆಲಕಚ್ಚುತ್ತಿರುವಾಗ ಗ್ರಾಮಾಂತರದ ಜನರನ್ನು ಯಾಮಾರಿಸಲು ಕಂಡುಕೊಂಡ ದಾರಿ ಇದು ಎಂಬುದರಲ್ಲಿ ಅನುಮಾನವೇ ಇಲ್ಲ. ಯಾಕೆಂದರೆ ಕೃಷಿಯನ್ನು, ಕೃಷಿಕರನ್ನು ಉಳಿಸುವ ಒಂದೇ ಒಂದು ಪ್ರಯತ್ನವನ್ನು ಮಾಡದ, ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿರುವ, ಗೋಲಿಬಾರ್ ನಡೆಸಿ ಕೊಂದು ಅವರನ್ನು ರೈತರೇ ಅಲ್ಲವೆಂದ ಈ ಸರ್ಕಾರ, ಮುಖ್ಯಮಂತ್ರಿಗಳು ಮಂಡಿಸುವ ಬಜೆಟ್ ಹೇಗಿರಬೇಕು? ಅದು ಕಾರ್ಷಿಕ ರಂಗವನ್ನು ಎಷ್ಟರಮಟ್ಟಿಗೆ ಉಳಿಸೀತು ಎಂಬ ಪ್ರಶ್ನೆ ತೀರಾ ಸಹಜವಾಗಿದೆ.

ಮೊದಲನೆಯದಾಗಿ ಬಿಜೆಪಿ ಸರ್ಕಾರಕ್ಕೆ ಕೃಷಿಯನ್ನು, ಕೃಷಿಕರನ್ನು ಉಳಿಸಲೇಬೇಕೆಂಬ ಯಾವ ಇಚ್ಛೆಯಾಗಲೀ, ಬದ್ಧತೆಯಾಗಲೀ ಇಲ್ಲ. ಅದಕ್ಕೆ ಅನುಗುಣವಾದ ನೀತಿಗಳೂ ಇಲ್ಲ ಎಂಬುದು ಸಾಬೀತಾಗಿದೆ. ಬದಲಾಗಿ ಇಡೀ ಕೃಷಿ ರಂಗವನ್ನೇ ನಾಶಗೊಳಿಸುತ್ತಿರುವ, ಲಕ್ಷಾಂತರ ರೈತರು, ಕೂಲಿಕಾರರು ಆತ್ಮಹತ್ಯೆಗೀಡಾಗಲು ಕಾರಣವಾಗಿರುವ ಜಾಗತೀಕರಣ, ಉದಾರೀಕರಣದ ಆರ್ಥಿಕ ನೀತಿಯನ್ನೇ ಯಥಾವತ್ತಾಗಿ, ಹಲವು ಬಾರಿ ಇನ್ನಷ್ಟು ಆಕ್ರಮಣಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಬೀಜ, ಗೊಬ್ಬರ ಮುಂತಾದ ಕೃಷಿಯ ಸಾಧನಗಳು, ಅತ್ಯಂತ ದುಬಾರಿಯಾಗಿ, ಬೆಳೆದ ಫಸಲಿಗೆ ಬೆಂಬಲ ಬೆಲೆಯೂ ಇಲ್ಲದೇ, ಮಾಡಿದ ಸಾಲವನ್ನು ತೀರಿಸಲಾಗದೇ ರೈತರ ಆತ್ಮಹತ್ಯೆಯೆಂಬ ಕಗ್ಗೊಲೆಗಳ ಸರಣಿಯೇ ನಿತ್ಯವೂ ನಡೆದೇ ಇದೆ. ಇಷ್ಟೊಂದು ಧಾರುಣ ಸನ್ನಿವೇಶ ಸೃಷ್ಟಿಯಾಗಿದ್ದರೂ, ನಡೆದಾಡುವ ನೆಲದಲ್ಲಿ ಹೆಣಗಳ ರಾಶಿಯನ್ನೂ ದಾಟಿ ಹೋಗುತ್ತಿದ್ದರೂ ಇದನ್ನು ತಡೆಯುವ ಕಿಂಚಿತ್ತೂ ಪರಿಹಾರದ ಕ್ರಮಗಳೇ ಈ ಸರ್ಕಾರದಲ್ಲಿ ಇಲ್ಲ. ಈ ಬಗ್ಗೆ ವಿಧಾನಸಭೆಯಲ್ಲಿ ಆಡಳಿತಪಕ್ಷವಾಗಲೀ, ಅಧಿಕೃತ ವಿರೋಧ ಪಕ್ಷಗಳಾಗಲೀ ಒಂದು ದಿನವಾದರೂ ಪ್ರಾಮಾಣಿಕತೆ, ಕಾಳಜಿಯಿಂದ ಗಂಭೀರವಾಗಿ ಚರ್ಚಿಸಿ ಅಗತ್ಯವಿರುವ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡಿದ್ದೇ ಇಲ್ಲ.

ಇನ್ನೂ ಯಡಿಯೂರಪ್ಪನವರಿಗೆ ಕೃಷಿ-ಕೃಷಿಕರು ನೆನಪಾಗುವುದು ಚುನಾವಣೆಗಳು ಎದುರಾದಾಗಲೇ. ರೈತರೆಂದರೆ ಕೇವಲ ಓಟುಗಳು ಎಂದಷ್ಟೇ ಕಣ್ಣಿಗೆ ಕಾಣುವುದು. ಹಸಿರು ಶಾಲು ಹೊದ್ದು, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ, ಅದ್ದೂರಿ ಪ್ರಚಾರ-ವ್ಯವಸ್ಥೆಯಲ್ಲಿ ಸಾವಯವ ಕೃಷಿಕನ ಮನೆಯಲ್ಲಿ ಭೂರಿಭೋಜನ ಮಾಡಿದರೆ, ಸಾಕೆಂದೇ ನಂಬಿಸುತ್ತಿದ್ದಾರೆ.

ಇನ್ನೂ ನಮ್ಮ ಮುಖ್ಯಮಂತ್ರಿಗಳಿಗೆ ಕೃಷಿ-ಜಮೀನು ನೆನಪಾಗುವುದು ಎರಡು ಬಾರಿ. ಭ್ರಷ್ಟಾಚಾರದ ಕಣವಾಗಿರುವ ಭೂ ಕಬಳಿಕೆಯ ಹುನ್ನಾರಗಳು... ಒಮ್ಮೆ ಇನ್ನೊಮ್ಮೆ ಜಾಗತಿಕ-ದೇಶೀಯ ಬಂಡವಾಳಗಾರರಿಗೆ, ಕಾರ್ಪೋರೇಟ್ ಕಂಪನಿಗಳಿಗೆ ಹೂಡಿಕೆ ಮಾಡಿಸುವ ‘ಡೀಲ್’ ಗಳು ನಿಗದಿಯಾದಾಗ ಭೂ ವಶ ಮಾಡುವ ಸಂದರ್ಭದಲ್ಲಿ ಮತ್ತೊಮ್ಮೆ ಅಂತಹ ಕಾರ್ಪೋರೇಟ್ ಕಂಪನಿಗಳಿಗೆ ಪರಭಾರೆ ಮಾಡಲೆಂದೇ, ಸ್ಥಾಪಿಸಿರುವ ಭೂ ಬ್ಯಾಂಕ್ ರಾಜ್ಯದಲ್ಲಿ ಕೃಷಿಯೋಗ್ಯ 9 ಲಕ್ಷ ಎಕರೆ ಭೂಮಿಯನ್ನು ರೈತರ ಕೈಯಿಂದ ಕಿತ್ತು, ಕೃಷಿ ನಾಶ ಮಾಡಿ ವಶಪಡಿಸಿಕೊಳ್ಳುತ್ತಿದೆ. ಈಗಲೂ ‘ಕೃಷಿ ಬಜೆಟ್’ ಮಂಡಿಸುವೆನ್ನುವಾಗಲೂ 2012 ರಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸುವುದಾಗಿಯೂ, ಈ ಕೂಡಲೇ ಒಂದು ಲಕ್ಷ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುವುದಾಗಿ ಸಾರಿರುವುದು ಈ ಸರ್ಕಾರದ ನಿಜವಾದ ಉದ್ದೇಶವನ್ನು ಬಟ್ಟಬಯಲುಗೊಳಿಸಿದೆ. ಹೀಗೆ ರೈತರನ್ನು ನಾಶಗೊಳಿಸುವ ದುಷ್ಟ ಯೋಜನೆಯಿರಿಸಿಕೊಂಡೇ ಕಣ್ಣಿಗೆ ಮಣ್ಣೆರಚಲು ಕೃಷಿ ಬಜೆಟ್‌ನ ಮೋಸದ ಆಟ ಆಡಲಾಗುತ್ತಿದೆ. ಇಷ್ಟೆಲ್ಲಾ ಅನಾಹುತ ಸೃಷ್ಟಿಸಿದ್ದರೂ ಈಗಲೂ ಕೇಂದ್ರ-ರಾಜ್ಯ ಸರ್ಕಾರಗಳು ಕೃಷಿಯೇ ದೇಶದ ಜೀವಾಳ ಎಂಬ ಕಪಟ ಮಾತುಗಳನ್ನು ನಾಟಕೀಯವಾಗಿ ಹೇಳುತ್ತಿವೆ. ಆದರೆ ಕೃತಿಯಲ್ಲಿ ಒಂದೇ ಒಂದು ಕ್ರಮಗಳಿಲ್ಲ.

ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರವು ಪ್ರಗತಿ ಸಾಧಿಸಬೇಕಾದಲ್ಲಿ ಕೈಗಾರಿಕೆಗಳ ಬೆಳವಣಿಗೆ ಖಂಡಿತಕ್ಕೆ ಅಗತ್ಯವಾದುದು. ಆದ್ದರಿಂದಲೇ ಕೃಷಿ ಪ್ರಧಾನವಾಗಿರುವ ಭಾರತದಲ್ಲಿ ಕೃಷಿಯನ್ನು ಉಳಿಸಲು, ಇನ್ನಷ್ಟು ಬಲಗೊಳಿಸುವ ಸಂಬಂಧಿತ ಕೈಗಾರಿಕೆಗಳು ಬೆಳೆಯಬೇಕಿದೆ. ಅಂತಹ ಕೃಷಿ ಕೈಗಾರಿಕಾ ಬೆಳವಣಿಗೆಯು ಉದ್ಯೋಗ ಸೃಷ್ಟಿಸಿ, ಸಾಮಾನ್ಯ ಜನತೆಯ ಜೀವನಮಟ್ಟ ಸುಧಾರಿಸಬಲ್ಲದು. ಆದರೆ ಇಂದಿನ ಸರ್ಕಾರಗಳ ನೀತಿಗಳು ತದ್ವಿರುದ್ಧ ಪರಿಣಾಮಗಳನ್ನೇ ಬೀರುತ್ತಿವೆ. ಎಲ್ಲಾ ಹಂತಗಳಲ್ಲಿಯೂ ಕೃಷಿಯನ್ನು ದಿವಾಳಿಯೆಬ್ಬಿಸಿ ಬೆಂಗಾಡಾಗಿಸುತ್ತಿದೆ ಇಂತಹ ಹತಾಶ ಸ್ಥಿತಿಗೆ ಹೊಂಚು ಹಾಕಿ ಕುಳಿತಿರುವ ಉದ್ದಿಮೆ-ಹೂಡಿಕೆದಾರರೆಂಬ ತೋಳಗಳ ಮನಸೋ ಇಚ್ಛೆಯಂತೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಭೂ ದಂಧೆಗೆ ಇಳಿದಿವೆ. ಆಳುವ ವರ್ಗಗಳ ಪಕ್ಷಗಳಿಗೂ ಇದರಲ್ಲಿ ಪಾಲಿರುವುದರಿಂದ ಜನತೆ ಕೊಟ್ಟ ಅಧಿಕಾರವನ್ನೇ ಅವರ ವಿರುದ್ಧ ಪ್ರಯೋಗಿಸಿ, ದುರುಪಯೋಗ ಮಾಡುತ್ತವೆ.

ಕೃಷಿ ಬಜೆಟ್ ದೇಶದಲ್ಲೇ ಮೊದಲು ಎಂದೆಲ್ಲಾ ಪ್ರಚಾರಿಸಲಾಗುತ್ತಿರುವ ಈ ಬಜೆಟ್ ನಿಜಕ್ಕೂ ತನ್ನದೇ ವೈಶಿಷ್ಠತೆ, ಭಿನ್ನ ಅಸ್ತಿತ್ವವನ್ನು ಹೊಂದಿರಲು ಸಾಧ್ಯವೇ? ಅದು ಸಾಧ್ಯವಿಲ್ಲ. ಯಾಕೆಂದರೆ ಕೃಷಿ ರಂಗದ ಜೀವಾಳವಾಗಿರುವ ನೀರಾವರಿ, ವಿದ್ಯುತ್, ಸಾಲ ರಿಯಾಯಿತಿ, ಮಾರುಕಟ್ಟೆಯಂತಹ


ಪುಟ 10 ಕ್ಕೆ

ಸಿ.ಎಂ. ಆಸ್ತಿ ವಿವರ : ವಂಚನೆಯ ವರಸೆ

ಮುಖ್ಯಮಂತ್ರಿ ಯಡಿಯೂರಪ್ಪ ನವರು ತಮ್ಮ ಆಸ್ತಿಯನ್ನು ದಿಢೀರನೆ ‘ಬಹಿರಂಗ’ಪಡಿಸುವುದಕ್ಕೆ ಸ್ಫೂರ್ತಿಯಾದರೂ ಯಾವುದು? ಹೈಕಮಾಂಡ್‌ನ ನಡೆಯೋ? ಅಥವಾ ವಿರೋಧ ಪಕ್ಷಗಳ ಒತ್ತಡವೋ? ವಿರೋಧ ಪಕ್ಷಗಳ ಒತ್ತಡವೋ? ತಮ್ಮ ಆಸ್ತಿಯನ್ನು ಸಾರ್ವಜನಿಕಗೊಳಿಸಿದ ಎಲ್.ಕೆ.ಅದ್ವಾನಿಯವರು ಬಿ.ಜೆ.ಪಿಯ ಎಲ್ಲಾ ಮುಖ್ಯಮಂತ್ರಿಗಳು ತಮ್ಮ ಆಸ್ತಿಯ ವಿವರಗಳನ್ನು ಬಹಿರಂಗಗೊಳಿಸಿ ಎಂಬ ಕರೆಯೊಂದೇ ಅವರನ್ನು ಪ್ರೇರೇಪಿಸಿದೆ ಎಂದರೆ ನಂಬುವುದು ಕಷ್ಟ. ಯಾಕೆಂದರೆ ಅಧಿಕಾರ ಬಿಡಿ, ‘ನಮ್ಮ ಮಾನ ಮರ್ಯಾದೆ ಕಾಪಾಡಿ’ ಎಂದು ಹೈಕಮಾಂಡ್ ದುಂಬಾಲು ಬಿದ್ದರೂ ಅದನ್ನು ಕೇರ್ ಮಾಡದವರು ತಮ್ಮ ನಿಜ ಆಸ್ತಿ (ಅಕ್ರಮ ಸಕ್ರಮ) ಬಹಿರಂಗಪಡಿಸಿ ಸಾರ್ವಜನಿಕ ಜೀವನದಲ್ಲಿ ನಿಷ್ಕಳಂಕಿತರಾಗಲು ಸಾಧ್ಯವೇ?

ಬಚಾವೋ ಮಾರ್ಗ

ಅದೇ ಹೊತ್ತಿನಲ್ಲಿ ಇಡೀ ದೇಶವೇ ಮುಖ್ಯಮಂತ್ರಿ ಹಾಗೂ ಕುಟುಂಬ (ಸಚಿವ ಸಂಪುಟದ) ಕೆಲಸ ಸಚಿವರು/ ಹಲವಾರು ಅಕ್ರಮ, ಹಗರಣಗಳಲ್ಲಿ ಮುಳುಗೇಳುತ್ತ ಅಪಾರವಾದ ಭ್ರಷ್ಟ ಹಣ, ಆಸ್ತಿಗೆ ಒಡೆಯರಾಗಿ ಕರ್ನಾಟಕ ನಂ.1 ಅಭಿವೃದ್ಧಿ ಸ್ಥಾನ ಪಡೆದಿರುವುದನ್ನು ಕಂಡಿದೆ. ರಾಜ್ಯದ ಜನತೆ ಹಾಗೂ ವಿರೋಧ ಪಕ್ಷಗಳು ಸತತವಾಗಿ ನುಂಗಿದ್ದೆಷ್ಟು ಎಂದು ಒತ್ತಡ ಹಾಕುತ್ತಲೇ ಬಂದಿವೆ. ಜೆಡಿ(ಎಸ್)ನ ನಾಯಕರು ಕಷ್ಟ ಏನಿಲ್ಲವೆಂದರೂ ಸಿ.ಎಂ. ಅವರದ್ದೇ ಒಂದು ಸಾವಿರ ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಇದೆ ಎಂದು ಅದನ್ನು ಬಹಿರಂಗಪಡಿಸಲು ಒತ್ತಾಯಿಸಿದ್ದಾರೆ. ಪ್ರತಿನಿತ್ಯವೂ ಹೊರಬರುತ್ತಿರುವ ಭ್ರಷ್ಟ ಪ್ರಕರಣಗಳಿಂದಾಗಿ ಕಳೆದುಹೋಗುತ್ತಿರುವ ಮಾನವನ್ನು, ಭ್ರಷ್ಟ ಮುಖವನ್ನು ಬಚಾವಾಗಿಸಿಕೊಳ್ಳಲು ನಡೆಸಿದ ಒಂದು ಸಾಮಾನ್ಯ ಪ್ರಯತ್ನವೇ ಈ ಆಸ್ತಿ ಬಹಿರಂಗ.



ಸಿ.ಎಂ. ಪ್ರಕಟಿಸಿದಂತೆ ಅವರ ಬಳಿ ಕಾರಿಲ್ಲ. 2.5 ಕೆ.ಜಿ ಬಂಗಾರವಿದೆ! 18.23 ಎಕರೆ ಕೃಷಿ, 9.12 ಎಕರೆ ಕೈಗಾರಿಕಾ ಭೂಮಿ, 3 ಮನೆ, 2.6 ಕೆ.ಜಿ ಬಂಗಾರ, 76 ಕೆ.ಜಿ. ಬೆಳ್ಳಿ, ಉಳಿತಾಯ ಖಾತೆಯಲ್ಲಿ 25.65 ಲಕ್ಷ ರೂ. ಹಣ ಇದೆ. ವಿಶೇಷವೆಂದರೆ ಇವರ ಕುಟುಂಬದ ಸದಸ್ಯರ ಹೆಸರಿನಲ್ಲಿರುವುದಾವುದನ್ನೂ ನಮೂದಿಸಿಲ್ಲ. ‘ಮಕ್ಕಳು ತಮ್ಮಿಂದ ದೂರ, ಅವರದ್ದೇ ಆಸ್ತಿ ಹೊತ್ತ ಭಾರ ಎಂದು ಹೇಳಿದ್ದಾರೆ. ಇದು ಒಂದು ವಿಚಿತ್ರ, ಇವರ ಮಕ್ಕಳು ಹಾಗೂ ಸಿ.ಎಂ. ಒಳಗೊಂಡ ಹಗರಣಗಳು ಹೊರಬಂದಿವೆ. ಬೇನಾಮಿ ಆಸ್ತಿ ಇದೆಯೆಂಬ ಆರೋಪವಿದೆ. ಸಂಬಂಧಿಗಳ ಆಸ್ತಿ ಬೆಳವಣಿಗೆ ಎಷ್ಟೆಂದು ಹೇಳಿದ್ದರೆ ಸಿ.ಎಂ.ಸ್ಥಾನ ದುರ್ಬಳಕೆಯಾಗಿದೆಯೋ ಆಗಿಲ್ಲವೋ ಎಂಬುದು ಒಂದು ಸಮಜಾಯಿಷಿ, ಸಾಕ್ಷಿಯಾದರೂ ಸಿಗುತ್ತಿತ್ತು ಆದರೆ ಅದರತ್ತ ಒಂದು ಕಿರು ಬೆರಳನ್ನು ಇಟ್ಟಿಲ್ಲ 2008 ರಿಂದ 2010 ರ ಅವಧಿಯಲ್ಲಿ ಸುಮಾರು ಒಂದು ಕೆ.ಜಿ.ಯಷ್ಟು ಚಿನ್ನ, ಬೆಳ್ಳಿ ಹೆಚ್ಚಳ ಹೇಗೆಂದು ನಿಖರ ತಿಳಿಸಿಲ್ಲ. ಅದೆಲ್ಲಾ ಕೊಡುಗೆಗಳಿಂದ ಬಂದಿದೆ



ಎಂದಿದ್ದಾರೆ. ಆದರೆ ಅಧಿಕಾರದಲ್ಲಿ ಸಿ.ಎಂ ಆಗಿರುವಾಗ ದೊರೆತ ಕೊಡುಗೆಗಳು ರಾಜ್ಯದ ಸ್ವತ್ತಾಗಬೇಕು. ತಮ್ಮಲ್ಲೇಕೆ ಉಳಿಸಿಕೊಂಡರು ಉಳಿದಂತೆ ಸಂಪತ್ತಿನ ಮಾರುಕಟ್ಟೆ ಮೌಲ್ಯವನ್ನೇ ನಿಗದಿಪಡಿಸಿಲ್ಲ ಯಾಕೆ? ವಿಚಿತ್ರವೆಂದರೆ ಇದರಲ್ಲಿ ಹೊಸತೇನಿಲ್ಲ. ಹಿಂದೆ ಲೋಕಾಯುಕ್ತರು, ಚುನಾವಣಾ ಆಯೋಗಕ್ಕೆ ತೆರಿಗೆ ಇಲಾಖೆಗೆ ಸಲ್ಲಿಸಿದ ವಿವರಗಳನ್ನೇ ಮರುಮುದ್ರಿಸಿ ನೀಡಿರುವುದು.

ಇಲ್ಲವಾದ ಪಾರದರ್ಶಕತೆ


ಹೀಗಾಗಿ ಅವರು ನೀಡಿರುವ ಆಸ್ತಿಯ ವಿವರಗಳು ಆರೋಪಗಳಿಗೆ ನೀಡಿದ ಉತ್ತರವಲ್ಲ, ಇದರಿಂದ ಸಾರ್ವಜನಿಕರೆದುರು ಅವರ ಜೀವನ ಪಾರದರ್ಶಕವಾಗಿ ತೆರೆದುಕೊಳ್ಳುವುದು ಇಲ್ಲ. ಇದೂ ಬಲಪಂಥೀಯ ಪಕ್ಷಗಳ ‘ಚುನಾವಣಾ ವೆಚ್ಚ’ದ ಲೆಕ್ಕ ನೀಡಿದಂತೆ ಅಷ್ಟೆ. ಆದರೆ ಅದೇ ಹೊತ್ತಿನಲ್ಲಿ ಯಡಿಯೂರಪ್ಪ ಹಾಗೂ ಅವರ ಸಂಪುಟ ಅರ್ಥ ಮಾಡಿಕೊಳ್ಳಬೇಕಾದ ಸಂಗತಿಯೆಂದರೆ ಇಂತಹ ಯಾವುದೇ ಷೋಗಳು ಭ್ರಷ್ಟತೆಯ ಕಳಂಕದಿಂದ ಅವರನ್ನೆಲ್ಲಾ ಮುಕ್ತ ಮಾಡುವುದಿಲ್ಲ. ಅಧಿಕಾರ ಇರುವುದೇ ದೋಚಲು ಎಂಬ ನೀತಿಯನ್ನು ಧ್ಯೇಯನಿಷ್ಠ ಸಂಘ ಪರಿವಾರವೇ ಅಂಗೀಕರಿಸಿರುವಾಗ ಈ ತೇಪೆಗಳು ಮಾನ ಮುಚ್ಚಬಲ್ಲವೇ? ಹೀಗಾಗಿ ಇದು ಒಂದು ವಂಚನೆಯ ವರಸೆ ಅಷ್ಟೆ. ಆದ್ದರಿಂದ ಅವರ ಕುಟುಂಬದ ಆಸ್ತಿ ಬಗ್ಗೆ ಇನ್ನಷ್ಟು ಆಳವಾಗಿ ತನಿಖೆಯಾಗಬೇಕಾದ ಅನಿವಾರ್ಯತೆಯಿದೆ.

"ಅಲ್ಲೇ ಕುಂತವರೇ"

ಮಾನವ ಅಭಿವೃದ್ಧಿ ವರದಿಯಲ್ಲಿ ಭಾರತದ ಸ್ಥಿತಿ

ವಿಶ್ವ ಸಂಸ್ಥೆಯಿಂದ ಪ್ರತಿವರ್ಷ ಹೊರತರಲಾಗುವ ಬಹು ನಿರೀಕ್ಷಿತ ಮಾನವ ಅಭಿವೃದ್ಧಿ ಸೂಚಿಕೆ Human develpent Index ಬಿಡುಗಡೆಯಾಗಿದೆ. ಪ್ರತಿವರ್ಷದಂತೆ ಈ ಬಾರಿಯೂ ಭಾರತವು ಮೊದಲ ನೂರು ದೇಶಗಳ ಪಟ್ಟಿಯಲ್ಲಿಲ್ಲ. ಹಾಗೂ 2010 ಸಾಲಿನಲ್ಲೂ ಮಧ್ಯಮ ಕ್ರಮಾಂಕದ ದೇಶಗಳ ಪಟ್ಟಿಯಲ್ಲಿ ಭಾರತವು ಸ್ಥಾನ ಪಡೆದುಕೊಂಡಿದೆ. ಈ ವರ್ಷದ ಅಭಿವೃದ್ಧಿ ಸೂಚಿಕೆಯಲ್ಲಿ ಭಾರತವು 19ನೇ ಸ್ಥಾನದಲ್ಲಿದೆ. ಹಿಂದಿನ ವರ್ಷದೊಂದಿಗೆ ತುಲನೆ ಮಾಡಿದರೆ ಭಾರತವು 134ನೇ ಸ್ಥಾನದಿಂದ 119 ನೇ ಸ್ಥಾನಕ್ಕೆ ಏರಿರುವುದು ಪ್ರಗತಿಯಂತೆ ಕಂಡರೂ ಅನೇಕ ರಂಗಗಳಲ್ಲಿ ಭಾರತವು ನಿರೀಕ್ಷಿತ ಪ್ರಗತಿ ಸಾಧಿಸದೇ ಇರುವುದು ಆಡಳಿತ ನಡೆಸುವವರ ಕರ್ತವ್ಯ ಪ್ರಜ್ಞೆಗೆ ಹಿಡಿದ ಕೈಗನ್ನಡಿ.

2009ನೆ ಸಾಲಿನಲ್ಲಿ ಭಾರತದ ತಲಾದಾಯ 2,753 ರೂಗಳು. ಆದರೆ 2010 ನೇ ಸಾಲಿನಲ್ಲಿ ತಲಾದಾಯ 3,337 ರೂ.ಗಳು ಆಗಿದೆ. ಭಾರತದ ಅಭಿವೃದ್ಧಿಯ ತಲಾದಾಯಲ್ಲಿ ಪ್ರಗತಿಯಾಗಿದೆ ಎಂಬಂತೆ ಕಂಡಿದ್ದರೂ ಇದ್ಯಾವುದೂ ಸಾಮಾನ್ಯ ಜನಗಳಿಂದ ಆದದ್ದು ಅಲ್ಲ. ಬಂಡವಾಳಶಾಹಿಗಳ ಬೆಳವಣಿಗೆಯ ಸೂಚಕ ಇದು. ತಲಾದಾಯದ ಲೆಕ್ಕಾಚಾರದಲ್ಲಿ ಬಂಡವಾಳಶಾಹಿಗಳ ಅಭಿವೃದ್ಧಿಯ ಕೊಡುಗೆಯು



ಹೆಚ್ಚೇ ವಿನಃ ತಲಾದಾಯದಲ್ಲಿ ಮಧ್ಯಮ ಹಾಗೂ ಬಡವರ್ಗಗಳ ಕೊಡುಗೆ ಗೌಣವೇ ಸರಿ.

ರಾಷ್ಟ್ರೀಯ ತಲಾದಾಯಲ್ಲಿ ಏರಿಕೆ, ಸರಾಸರಿ ಜೀವಿತಾವಧಿಯಲ್ಲಿ Life expectancy ಏರಿಕೆ, ಭಾರತದ ಅಭಿವೃದ್ಧಿಯ ಕ್ರಮಾಂಕದಲ್ಲಿ 134 ನೇ ಸ್ಥಾನದಿಂದ 119 ನೇ ಸ್ಥಾನಕ್ಕೆ ಮೇಲೇರಿದ್ದರೂ, ಇಂದಿಗೂ ದೇಶವನ್ನು ಬಡತನ, ನಿರುದ್ಯೋಗ ಅಶುಚಿತ್ವ, ಶೈಕ್ಷಣಿಕ ಸವಾಲುಗಳು ಕಾಡುತ್ತಿವೆ. 2010ರ ಮಾನವ ಅಭಿವೃದ್ಧಿಯ ವರದಿಯಂತೆ ದೇಶದ ಶೇ. 12 ಜನರಿಗೆ ಜೀವನಾವಶ್ಯಕವಾದ ಉತ್ತಮ ಗುಣಮಟ್ಟದ ಕುಡಿಯುವ ನೀರಿನ ಪೂರೈಕೆ ಸಾಧ್ಯವಾಗಿಲ್ಲ. ಇದಕ್ಕಿಂತಲೂ ನಾಚಿಕೆಗೇಡಿನ ವಿಷಯವೆಂದರೆ ದೇಶದ ಒಟ್ಟು ಜನಸಂಖ್ಯೆಯ 69ಶೇ. ಜನರಿಗೆ ಶೌಚಾಲಯ ವ್ಯವಸ್ಥೆ ಇರದಿರುವುದು ಈ ವರದಿಯ ಮುಖ್ಯವಾದ ವಿಷಯ.

> **ಭಾರತದ ಅಭಿವೃದ್ಧಿಯ ತಲಾದಾಯಲ್ಲಿ ಪ್ರಗತಿ ಕಂಡಿದ್ದರೂ ಇದ್ಯಾವುದೂ ಸಾಮಾನ್ಯ ಜನಗಳಿಂದ ಆದದ್ದು ಅಲ್ಲ. ಬಂಡವಾಳಶಾಹಿಗಳ ಬೆಳವಣಿಗೆಯ ಸೂಚಕ ಇದು.**

ಜಿ. ನರಸಿಂಹನ್

ಹಾಗೂ ದೇಶದ ಶೇ. 58.5 ಜನರ ಜೀವನದ ಗುಣಮಟ್ಟ 'Standard of living' ನಿರೀಕ್ಷಿತ ಮಟ್ಟದಷ್ಟು ಇಲ್ಲದಿರುವುದು ದೇಶದ ಆರ್ಥಿಕತೆ, ಸಾಮಾಜಿಕ ಕ್ಷೇತ್ರ ಎತ್ತ ಸಾಗುತ್ತಿದೆ ಎಂದು ಕಳ-ಕಳಿಯಿಂದ ಅವಲೋಕಿಸಬೇಕು. ಈ ಶೇ. 58.5 ದಲ್ಲೂ ಶೇ. 16.1 ದಷ್ಟು ಜನರು ಅನೇಕ ಪರಿಮಾಣದ ಬಡತನ 'Multi-dimensional poverty' ದಲ್ಲಿ ಇರುವುದು ಆರ್ಥಿಕ ವಲಯದ ಬೆಳವಣಿಗೆ ಎತ್ತ ಸಾಗಿದೆ ಎಂದು ತಿಳಿಸುತ್ತದೆ. 2009ರಲ್ಲಿ ನಿರುದ್ಯೋಗ 5.9 ರಷ್ಟಿದ್ದರೆ ಈಗ ಅದು 6.1 ಆಗಿರುವುದು ಗಾಯದ ಮೇಲೆ ಬರೆ ಎಳೆದಂತೆ ಆಗಿದೆ.

ದೇಶದ ಒಟ್ಟು ಜನಸಂಖ್ಯೆಯ ಶೇ. 37.5 ದಷ್ಟು ಜನ ಶಿಕ್ಷಣದಿಂದ ವಂಚಿತರಾಗಿರಾಗಿದ್ದಾರೆ ಎಂದು ಹೇಳುತ್ತದೆ ಈ ವರದಿ'. ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಸಾರುವ ಸರ್ಕಾರಗಳು ಹಾಗೂ ಕೋಟ್ಯಂತರ ರೂಪಾಯಿಗಳು ಖರ್ಚು ಮಾಡುವ ಸರ್ಕಾರಗಳು ಎಷ್ಟರ ಮಟ್ಟಿಗಿನ ಬದ್ಧತೆಯನ್ನು ಪ್ರದರ್ಶಿಸುತ್ತಿವೆಂಬುದು ಇದರಿಂದ ವೇದ್ಯವಾಗುತ್ತದೆ. ಉನ್ನತ ಶಿಕ್ಷಣದಲ್ಲಿ ನೊಂದಣಿ ಕುಸಿತ ಕಂಡಿರುವುದು ದೇಶದ ಭವಿಷ್ಯದ ಕುರಿತು ಅನೇಕ ಸವಾಲುಗಳನ್ನು ಹೇರುತ್ತವೆ. ಪ್ರಾಥಮಿಕ ಶಾಲೆಯ ಮಕ್ಕಳ ನೊಂದಣಿ 113ರಷ್ಟು ಇದ್ದರೆ, ಮಾಧ್ಯಮಿಕ ಶಾಲೆಯ ನೊಂದಣಿ 89.8 ,ಆದರೆ ಉನ್ನತ ಶಿಕ್ಷಣದ ನೊಂದಣಿ ಕೇವಲ ಶೇ.57 ಮಾತ್ರ ಆಗಿರುವುದು ಇದಕ್ಕೆ ಸಾಕ್ಷಿ.

ಹೀಗೆ ಮುಂದೆ ಸಾಗುವ ಈ ವರದಿಯಲ್ಲಿ ದೇಶದ ಸಾಮಾಜಿಕ, ಆರ್ಥಿಕ ಚಿತ್ರಣವು ಬಯಲಾಗುತ್ತಾ ದೇಶದ ಪರಿಸ್ಥಿತಿ ಚಿತ್ತಲೆಯಾಗುತ್ತಾ ಸಾಗಿದೆ.

'ಕ್ವನಿಗೂ ಚಿದಾನಂದಮೂರ್ತಿಗೆ ಡಾಕ್ಟ್ರ ಕ್ಯಾಲ್ಸ ಸಿಕ್ತು'

ಈ. ಬಸವರಾಜು ಮಲ್ಲೇನಹಳ್ಳಿ

ಯಣ್ಣ, ಕ್ವನಿಗೂ ಚಿದಾನಂದಮೂರ್ತಿಗೆ ಡಾಕ್ಟ್ರ ಕ್ಯಲ್ಸ ಸಿಕ್ತಂತೆ, ಇನ್ನ ಡಾಕ್ಟ ಶಾಪ್ ತಗೀಬೌದೇನೊ. ನಾನೂ ಒಂದಿನ ಓಗಿ ತೋರಿಸ್ಕಬರನ ಅಂತ ಇದ್ದಿನಿ. ಎಷ್ಟೇ ಆದ್ರೂ ಹಿರೀ ಮನ್ಸ, ಚನ್ನಾಗಿ ನೋಡ್ತೌದು.

ಅದು ನೀನೇಳ ಡಾಕ್ಟ್ರಲ್ಲ ಕಣಣ್ಣ, ಇದೇ ಬ್ಯಾರೆ.

ಇದೇನಿಂಗಂತಿಯ, ಡಾಕ್ಟ್ರುಗಳೂ ಬ್ಯಾರೆ ಬ್ಯಾರೆ ತರ ಇದ್ದರೆ?

ನಂಗೊತ್ತಿರಂಗೆ ಐದ್ ತರ ಡಾಕ್ಟ್ರುಗಳವ್ರೆ.

ನೀನ್ಯಾಕೊ ಯದ್ರಿಸಂಗ್ ಕಾಣ್ತಾ ಇದ್ದೀಯ. ಅದೇನೇಳಣ್ಣ.

ಮದಲ್ನೇರು ಎಂಬಿಬಿಎಸ್ ಡಾಕ್ಟ್ರು. ಯಳ್ಡನೇರು ಪಿಎಚ್ಡಿ ಡಾಕ್ಟ್ರು, ಮೂರ್ನೇರು ಗೌರವ ಡಾಕ್ಟ್ರು, ನಾಲ್ಕನೇರು ಆರ್‌ಎಂಪಿ ಡಾಕ್ಟ್ರು ಆಮ್ಯಾಲೆ ಡೂಪ್ಲಿಕೇಟ್ ಡಾಕ್ಟ್ರು

ಇದ್ರಲ್ಲಿ ಔಸ್ತಿ ಕೊಡ ಡಾಕ್ಟ್ರು ಯಾರಣ್ಣ?

ಸರ್ಯಾಗಿ ಏಳ್ಬೇಕು ಅಂದ್ರೆ ಎಂಬಿಬಿಎಸ್ ಡಾಕಟ್ರು. ಇನ್ನ ಸಣ್ಣಮಟ್ಟ ಕಾಯ್ಲೆಗೆ ಆರ್‌ಎಂಪಿ ನವ್ರತ್ರ ಹೋಗ್ತೌದು. ಡೂಪ್ಲಿಕೇಟ್ ಡಾಕ್ಟ್ರು ಅಂದ್ರೆ ಅವ್ರು ಸ್ವಲ್ಪ ದಿನ ಎಂಬಿಬಿಎಸ್ ಡಾಕ್ಟ್ರುಗಳತ್ರ ಕ್ಯಲ್ಸ ಮಾಡಿ ಸಣ್ಣಮಟ್ಟದ್ ತಿಳ್ಕಂಡು ಹಳ್ಳಿಲಿ, ಗಲ್ಲಿಲಿ ಡಾಕ್ಟ್ರು ಅಂತ ಬೋರ್ಡ್ ಆಕ್ಕಂಡು ಕ್ಯಲ್ಸ ಮಾಡ್ತರೆ. ಒಂದೊಂದ್ಸತಿ ನಡಿತದೆ. ಆದ್ರೆ ಒಂದೊಂದ್ಸತಿ ಇವ್ರು ಜೀವನೆ ತಗ್ದು ಕದ್ದೋಯ್ತರೆ.

ಪಿಎಚ್ಡಿ ಡಾಕ್ಟ್ರು ಅಂದ್ರೆ ಅವ್ರೇನೋದಿರ್ತರೆ? ಏನ್ಮಾಡ್ತರೆ?

ಅವ್ರು ಒಂದ್ ವಿಷ್ಯ ತಗಂಡು ಅದರ ಮ್ಯಾಲೆ ನಾಕೈದ್ ವರ್ಷ ಕ್ಯಲ್ಸ ಮಾಡಿ ಒಂದ್ ದಪ್ ಪುಸ್ತಕ ಬರೀತರೆ. ಅವ್ರು ಯಸ್ರಿಗೆ ಮದ್ಲು ಡಾ. ಅಂತ ಆಕ್ಕಬೌದು. ಮದ್ಲು ಅವ್ರು ಇದ್ಕೆ ವಬ್ರು ಗುರುಗಳ್ನ ಇಡೀಬೇಕು, ಅಮ್ಯಾಲೆ ಅವ್ರು ಒಂದ್ ವಿಷ್ಯ ಕೊಡ್ತರೆ. ಈಗ ಕರ್ನಾಟಕದಲ್ಲಿ ರೈತರ ಆತ್ಮ ಹತ್ಯೆ ಅನ್ನೊ ವಿಷ್ಯ ತಗಬೌದು. ಅದ್ರು ಬಗ್ಗೆ ಚನ್ನಾಗಿ ತಿಳ್ಕಂಡು, ಓದಿ ಒಂದ್ ದ್ವಡ್ ಪುಸ್ತಕ ಮಾಡ್ಬೇಕು. ಗುರುಗಳು ಅದು ಸರಿ ಅಂದ್ ಮ್ಯಾಲೆ ಸರ್ಟಾಫಿಕೇಟ್ ಕೊಡ್ತರೆ. ಅಮ್ಯಾಲೆ ಅವ್ರು ಯಸ್ರಿಗಿಂತ ಮದ್ಲು ಡಾ. ಅಂತ ಆಕ್ಕಬೌದು. ಅವ್ರು ಔಸ್ದಿ ಕೊಡದಿಲ್ಲ. ಬುದ್ವಂತ್ರಾಗಿರ್ತರಲ, ಜನಗಳಿಗೆ ತಿಳ್ವಳ್ಕೆ ಏಳ್ತರೆ, ಅವ್ರೂ ಒಂತರ ಡಾಕ್ಟ್ರಿದ್ದಂಗೆ.

ಮತ್ತೆ ಚಿದಾನಂದಮೂರ್ತಿ ಯಂತ ಡಾಕ್ಟ್ರು?

ಅವ್ರು ಗೌರವ ಡಾಕ್ಟ್ರು ಅಂತವ. ಇದ ಯಾವ್ದಾದ್ರೂ ಯೂನಿವರ್ಸಿಟಿಯವ್ರು ಕರ್ದು ಕೊಡ್ತರೆ. ಯಡೂರಪ್ಪುಂಗೂ ಯಾರೋ ಕೊಟ್ಟಿದ್ರಲ! ಅಂಗೆ. ವರ್ಸುಕ್ಕೆ ಇಷ್ಟ್ ಜನುಕ್ಕೆ ಕೊಡ್ಬೇಕು ಅಂತ ಇರ್ತದೆ. ಆಗ ವಳ್ಳೆ ಕ್ಯಲ್ಸ್ ಮಾಡಿರರ್ನ ಉಡ್ಕಿ, ಅವ್ರ ಯಸ್ರ ಯೂನಿವರ್ಸಿಟಿಯವ್ರು ರಾಜಪಾಲ್ರಿಗೆ ಕಳುಸ್ತರೆ, ಅವ್ರಿಗೆ ಪರ್ವಾಗಿಲ್ಲ ಅನಿಸಿದ್ರೆ ಕೊಡಿ ಅಂತರೆ.

ಮತ್ತೆ ರಾಜಪಾಲ್ರು ಯಾಕೆ ಕೊಡ್ ಕೂಡ್ದು ಅಂದಿದ್ರಂತಲ ಯಾಕೆ?

ಅವ್ರು ಕೊಡ್‌ಬ್ಯಾಡಿ ಅಂದಿತ್ತಿಲ್ವಂತೆ. ಚಿದಾನಂದಮೂರ್ತಿ ಜನಗಳಿಗೆ ಔಸ್ತಿ ಕೊಡ್ತರೆ, ಅವ್ರು ಕೊಡ ಔಸ್ತಿ ಕುಡ್ದರು ಮೈಮ್ಯಾಲೆ ದೆವ್ವ ಬಂದಂಗೆ ಬ್ಯಾರೆ ದರ್ಮದವ್ರ ಮ್ಯಾಲೆ ಬೀಳ್ತರೆ, ಅದೇನ್ ನೋಡನ ಸ್ವಲ್ಪ ಅಂಗೆ ಮಡ್ಗಿರಿ ಅಂದಿದ್ರಂತೆ, ಅಷ್ಟೊತ್ತಿಗೆ ಗಲಾಟೆ ಸುರ್ವಾಯ್ತು.

ಈಗ ಕೊಡ್ತಿನಿ ಅಂತ ಏಳ್ಯವ್ರಲ್ಲ ಮತ್ತೆ?

ಹಿರೀಮನ್ಸ, ಹಿಂದೆ ಸಾಕಷ್ಟು ಸಂಸೋದನೆ ಮಾಡೌರೆ ಅದ್ನ ನೋಡ್ಕಂಡ್ ಕೊಡಿ ಅಂತ ಯಲ್ಲ ಏಳಿದ್ಕೆ ಕೊಟ್ಟವ್ರೆ.

ಈಗ ಅವ್ರು ಡಾ.ಚಿದಾನಂದಮೂರ್ತಿ ಅಂತ ಆಕ್ಕಬೌದೊ?

ಸರ್ಯಾಗಿ ಏಳ್ಬೇಕಾದ್ರೆ ಆಕ್ಕಳಂಗಿಲ್ವಂತೆ. ಆಕ್ಕಂಡ್ರೂ ಯಾರೂ ಯಾಕೆ ಅಂತ ಕೇಳಕೋಗದಿಲ್ಲ.

ಅಷ್ಟ್ ಆಕ್ಕಳಕೆ ಇಷ್ಟೊಂದ್ ಕಷ್ಟ ಪಟ್ಟು ಈಸ್ಕಬೇಕೆ? ಮುಂದಿನ್ ಸತಿ ನನ್ನೇನಾರ ಕೇಳಿದ್ರೆ ಮದ್ಲೆ ಬ್ಯಾಡ ಅಂದ್ಬುಡ್ತಿನಿ ಕಣಪ್ಪ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೋಲಾರ ಚಿನ್ನದ ಗಣಿ ಪುನಶ್ಚೇತನ ಸಂಘರ್ಷಕ್ಕೆ ನವಚೇತನ

ಬೀದಿಗಳಲ್ಲಿ, ಸಂಸತ್ತಿನಲ್ಲೂ ಹೋರಾಡುವ ಪಣ

ಜಾಗೃತಿ ಸಮಾವೇಶ

ಚಿತ್ರಗಳು ಮತ್ತು ವರದಿ: **ವಿಶ್ವ**

ಕನ್ನಡ ನಾಡು ಶ್ರೀಗಂಧದ ಬೀಡು ಚಿನ್ನದ ನಾಡು' ಎಂಬ ವಿಶೇಷಣದೊಂದಿಗೆ ಕವಿಗಳ ಹಾಡುಗಳ ಸಾಲಿನಲ್ಲಿ ಮೆರೆಯುತ್ತಿದೆ. ಚಿನ್ನದ ನಾಡು ಎಂಬ ವಿಶೇಷಣದ ಗರಿಮೆ ಬರಲು ಕಾರಣ ಕೋಲಾರ ಜಿಲ್ಲೆಯಲ್ಲಿರುವ ಚಿನ್ನದ ಗಣಿಗಳು (ಕೆ.ಜಿ.ಎಫ್).

ಸರ್.ಎಂ.ವಿಶ್ವೇಶ್ವರಯ್ಯನವರ ಅಸಾಮಾನ್ಯ ಪ್ರತಿಭೆಯ ಜತೆಯಲ್ಲಿ ಅವಿಭಜಿತ ಕೋಲಾರ ಜಿಲ್ಲೆಯ ಹೆಸರನ್ನು ಜಗತ್ತಿನ ಭೂಪಟದಲ್ಲಿ ಹೊನ್ನಿನಂತೆ ಮಿರುಗಿಸಿದ್ದು ಈ ಚಿನ್ನದ ಗಣಿಗಳು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಆಡಳಿತದಿಂದ ಬಿಡಿದು ಆಗಿನ ಮೈಸೂರು ರಾಜ್ಯ ಮತ್ತು ತದನಂತರ ಭಾರತ ಸರಕಾರದ ಒಡೆತನದಲ್ಲಿ ಚಿನ್ನದ ಗಣಿಗಳು ಕಾರ್ಯ ನಿರ್ವಹಿಸಿ ಖಾಸಗಿಯವರಿಗೂ ಸರಕಾರದ ಬೊಕ್ಕಸಕ್ಕೂ ಅಪಾರ ಆದಾಯ ತಂದುಕೊಟ್ಟವು. ಆದರೆ ಅವುಗಳಲ್ಲಿ ದುಡಿದ ಶ್ರಮಿಕರ ಬಾಳು ಮಾತ್ರ ಚಿನ್ನ ಹೋಗಲಿ ಬಿಡಿ ಹೂವಿನ ಹಾಸಿಗೆಯೂ ಆಗಿರಲಿಲ್ಲ ಎನ್ನುವುದು ಐತಿಹಾಸಿಕ ಸತ್ಯ. ಈ ರೀತಿಯ ಸಂಕಷ್ಟದ ಜೀವನಕ್ಕೂ, ಹತ್ತಾರು ಸಾವಿರ ಕಾರ್ಮಿಕರು ಹಾಗೂ ಅವರ ಕುಟುಂಬ ವರ್ಗದ ತುತ್ತಿನ ಚೀಲಕ್ಕೂ ಸಂಚಕಾರ ತಂದಿತು ನಮ್ಮನ್ನಾಳುವ ವರ್ಗಗಳು. ಖಾಸಗಿಯವರಿಗೆ ಆಗದ ಲಾಭ ದೇಶಕ್ಕೂ ಬೇಡ, ಜನತೆಗೂ ಬೇಡ' ಎಂಬಂಥ ಎಡಬಿಡಂಗಿ ನೀತಿಯ ಫಲವಾಗಿ 2001 ರಲ್ಲಿ ಜನತೆಯ ತೀವ್ರ ಪ್ರತಿರೋಧದ ನಡುವೆ ಗಣಿ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಯಿತು.

ಆದಾಗಿ ಈಗ ಒಂದು ದಶಕವೇ ಕಳೆದಿದೆ. ಈ ಅವಧಿಯಲ್ಲಿ ಸಿಐಟಿಯು ನೇತೃತ್ವದಲ್ಲಿ ಗಣಿ ಕಾರ್ಮಿಕರು, ಅವರಿಗೆ ಬೆಂಬಲವಾಗಿ ಸಿಪಿಐ(ಎಂ) ಮತ್ತಿತರ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳು ಗಣಿ ಪುನರಾರಂಭಕ್ಕೆ ಸತತ ಬೀದಿ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಕಾನೂನು ಸಮರವನ್ನು ನಡೆಸಲಾಯಿತು. 2010 ಫೆಬ್ರವರಿ ಒಂದರಂದು ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠವು ಈ ಸಂಬಂಧ ನೀಡಿದ ತೀರ್ಪು ಐತಿಹಾಸಿಕವಾಗಿದ್ದು ಆಶಾವಾದದ ಬೆಳ್ಳಿ ಕಿರಣವಾಗಿ ಹೊರಹೊಮ್ಮಿದೆ. ಬಿಜಿಎಂಎಲ್ (ಭಾರತ ಗೋಲ್ಡ್ ಮೈನ್ಸ್ ಲಿ.) ಮುಚ್ಚಬಾರದು ಹಾಗೂ ಗಣಿ ಚಟುವಟಿಕೆಗಳನ್ನು ಪುನರಾರಂಭಿಸಬೇಕು ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಸ್ಪಷ್ಟವಾಗಿ ತಿಳಿಸಿದ್ದು ಗಣಿಯನ್ನು ಖಾಸಗೀಕರಿಸುವ ವಿದೇಶಿ ಕಂಪನಿಗಳಿಗೆ ಒಪ್ಪಿಸುವ ಕೇಂದ್ರ ಸರಕಾರದ ಹುನ್ನಾರವನ್ನು ಕಟುವಾಗಿ ಟೀಕಿಸಿದೆ.

ಈ ಹಿನ್ನೆಲೆಯಲ್ಲಿ ಗಣಿ ಪುನಶ್ಚೇತನಕ್ಕೆ ಆಗ್ರಹಿಸಿ ಸಿಐಟಿಯು ಮತ್ತು ಡಿವೈಎಫ್ಐ ಕೋಲಾರ ಜಿಲ್ಲಾ ಘಟಕಗಳು 2011 ಫೆಬ್ರವರಿ 2 ರಂದು ಕೋಲಾರದಲ್ಲಿ ಜಿಲ್ಲಾಮಟ್ಟದ ಜಾಗೃತಿ ಸಮಾವೇಶವನ್ನು ವ್ಯವಸ್ಥೆಗೊಳಿಸಿದ್ದವು. ರಾಜ್ಯಸಭೆ ಸದಸ್ಯರೂ ಆದ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ ಯೆಚೂರಿ ಸಮಾವೇಶವನ್ನು ಉದ್ಘಾಟಿಸಲು ಸಭಾ ಭವನದ ಬಳಿ ಬರುತ್ತಲೇ ನೆರೆದಿದ್ದ ಕಾರ್ಮಿಕರು, ಕೃಷಿ ಕೂಲಿಕಾರರು ಅವರಿಗೆ ಕ್ರಾಂತಿಕಾರಿ ಸ್ವಾಗತ ಕೋರಿದರು.

"ಐತಿಹಾಸಿಕ ಪರಂಪರೆಯಿರುವ ಕೋಲಾರ ಚಿನ್ನದ ಗಣಿಯನ್ನು ಪುನಶ್ಚೇತನಗೊಳಿಸುವ ಸಂಬಂಧದಲ್ಲಿ ಸಂಸತ್ತಿನಲ್ಲಿ ಸಿಪಿಐ(ಎಂ) ಪ್ರಸ್ತಾಪಿಸಲಿದೆ" ಎಂದು ಸಭಿಕರ ಹರ್ಷೋದ್ಗಾರ ಮತ್ತು ಚಪ್ಪಾಳೆಯ ನಡುವೆ ಕಾಮ್ರೇಡ್ ಯೆಚೂರಿ ಘೋಷಿಸಿದರು. ಈ ಸಂಬಂಧ ಇತರ ಎಡಪಕ್ಷಗಳ ಸಹಕಾರವನ್ನು ಪಡೆಯಲಾಗುವುದು ಎಂದ ಯೆಚೂರಿ, 'ರಾಜ್ಯಸಭೆಯಲ್ಲಿ ಸ್ವತ: ನಾನೇ ವಿಷಯವನ್ನು ಪ್ರಸ್ತಾಪಿಸುತ್ತೇನೆ' ಎಂದು ನುಡಿದರು. ಜನತೆಗೆ ಉದ್ಯೋಗ ಸಿಗುವುದರಿಂದ ಪ್ರದೇಶದ ಅಭಿವೃದ್ಧಿ ಸಾಧಿಸಲು ಆಗುತ್ತದೆ ಎಂದರು. ಬಿಜಿಎಂಎಲ್ ಖಾಸಗೀಕರಿಸುವ ಯಾವುದೇ ನಡೆಯನ್ನು ಸಿಪಿಐ(ಎಂ) ಉಗ್ರವಾಗಿ ಖಂಡಿಸುತ್ತದೆ. ದೇಶದ ಅನೇಕ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಸರಕಾರಗಳು ಸಮಾನವಾಗಿ ಕಾರಣವಾಗಿವೆ ಎಂದವರು ಟೀಕಿಸಿದರು.

ಅತ್ತ ಸಂಸತ್ತಿನಲ್ಲಿ ಹೋರಾಟ ನಡೆಯುತ್ತಿದ್ದರೆ ಇತ್ತ ಜನರು ಬೀದಿಗಿಳಿದು ಪ್ರಬಲವಾದ ಹೋರಾಟ ನಡೆಸುವುದು ಅಗತ್ಯ ಎಂದು ಸಿಪಿಐ(ಎಂ) ಮುಖಂಡರು ಪ್ರತಿಪಾದಿಸಿದರು. ಚಿನ್ನದ ಗಣಿ ಪುನಶ್ಚೇತನ ಹೋರಾಟದಲ್ಲಿ ದುಡಿಯುವ ವರ್ಗದ ಪಕ್ಷ ಸಿಪಿಐ(ಎಂ) ಸದಾ ಜತೆಗಿರುತ್ತದೆ ಎಂದ ಯೆಚೂರಿ ಘೋಷಣೆ ಇನ್ನೊಂದು ಸುತ್ತಿನ ಹೋರಾಟಕ್ಕೆ ಸಜ್ಜಾಗಿರುವ ಜನತೆಯಲ್ಲಿ ನವಚೇತನವನ್ನೇ ಸ್ಫೋಟಿಸಿತು.



ವೇದಿಕೆಯಲ್ಲಿ ಸಂಗಾತಿಗಳಾದ ವಿ.ಜೆ.ಕೆ.ನಾಯರ್, ಗಾಂಧಿನಗರ ನಾರಾಯಣಸ್ವಾಮಿ, ಸೀತಾರಾಂ ಯೆಚೂರಿ, ಜಿ.ವಿ.ಶ್ರೀರಾಮರೆಡ್ಡಿ



ವಂಚಕ ಮುನಿಯಪ್ಪ

ಮಾಜಿ ಶಾಸಕ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ವಿ.ಶ್ರೀರಾಮರೆಡ್ಡಿ, ಕೋಲಾರ ಲೋಕಸಭೆ ಕ್ಷೇತ್ರವನ್ನು ಸತತ ಆರು ಅವಧಿಯಿಂದ ಪ್ರತಿನಿಧಿಸುತ್ತಿರುವ ಕೆ.ಎಚ್.ಮುನಿಯಪ್ಪ ಇವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ನಯವಂಚಕತನದ ರಾಜಕಾರಣವನ್ನೇ ತನ್ನ ಜಾಯಮಾನವಾಗಿರಿಸಿ ಕೊಂಡಿರುವ ಮುನಿಯಪ್ಪ ಚಿನ್ನದ ಗಣಿ ವಿಚಾರದಲ್ಲಿ ಜನತೆಯನ್ನು ದಿಕ್ಕು ತಪ್ಪಿಸುತ್ತಲೇ ಬಂದಿದ್ದಾರೆ ಎಂದು ಹೇಳಿದರು. ಇದುವರೆಗೆ ವಿದೇಶಿ ಕಂಪನಿಗಳಿಗೆ, ಖಾಸಗಿಯವರಿಗೆ ಗಣಿ ಮಾರಾಟ ಮಾಡಲು ಹುನ್ನಾರ ನಡೆಸುತ್ತಿದ್ದ ಮುನಿಯಪ್ಪ ಇದೀಗ ಜಾಗೃತಿ ಸಮಾವೇಶ ನಡೆಯಲಿರುವುದನ್ನು ಕಂಡು ಗಾಬರಿಯಾಗಿ ಗಣಿ ರಕ್ಷಿಸುವಂತೆ ಕೇಂದ್ರ ಗಣಿ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ ಎಂದು ಲೇವಡಿ ಮಾಡಿದರು.

ಗಣಿ ಪುನಶ್ಚೇತನ ಹೋರಾಟದಲ್ಲಿ ರಾಜಕೀಯ ಬೆರೆಸಬೇಡಿ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಮನವಿ ಮಾಡಿದರು. ಹೋರಾಟವನ್ನು ಎಡಶಕ್ತಿಗಳು ಆರಂಭಿಸಿವೆ ಎಂದೂ ಹಿಂಜರಿಯಬೇಡಿ. ಯಾರು ಬೇಕಾದರು ಹೋರಾಟ ನಡೆಸಲಿ. ನಾವು ಜೊತೆಯಾಗುತ್ತೇವೆ. ಇಲ್ಲವಾದಲ್ಲಿ ಬೇರೆಯವರು ನಮ್ಮ ಜತೆ ಕೈ ಜೋಡಿಸಲಿ ಎಂದು ಅವರು ಮನವಿ ಮಾಡಿದರು.

ಕೇಂದ್ರ ಸಚಿವ ಮುನಿಯಪ್ಪರಿಗೆ ತಮ್ಮ ಕ್ಷೇತ್ರ ಜನತೆ ಹಾಗೂ ಗಣಿ ಕಾರ್ಮಿಕರ ಹಿತದ ಬಗ್ಗೆ ಕಾಳಜಿ ಇದ್ದದ್ದೇ ಆದಲ್ಲಿ ಹೋರಾಟಕ್ಕೆ ಸೇರಿಕೊಳ್ಳಲಿ ಎಂದು ತಿಳಿಸಿದರು.

ಚಿನ್ನ ಇಲ್ಲವೆಂಬುದು ಸುಳ್ಳೇ ಸುಳ್ಳು

ಸಿಐಟಿಯು ರಾಜ್ಯಾಧ್ಯಕ್ಷ ಹಾಗೂ ಗಣಿ ಕಾರ್ಮಿಕರ ಹೋರಾಟಕ್ಕೆ ಮಾರ್ಗದರ್ಶನ ನೀಡುತ್ತಿರುವ ಹಿರಿಯ ನೇತಾರ ವಿ.ಜೆ.ಕೆ.ನಾಯರ್ ಮಾತನಾಡಿ, ಗಣಿಯಲ್ಲಿ ಚಿನ್ನ ಇಲ್ಲ ಎಂಬ ಮಾತು ಸುಳ್ಳೇ ಸುಳ್ಳು ಎಂದು ಹೇಳಿ, ಗಣಿಯನ್ನು ಲಾಭದಾಯಕವಾಗಿ ನಡೆಸಲು ಸಾಧ್ಯತೆಯಿರುವ ತಜ್ಞರ ವರದಿಗಳು ತಮ್ಮ ಬಳಿ ಇವೆ ಎಂದು ನುಡಿದರು. ಚಿನ್ನದ ಗಣಿ ಪುನರಾರಂಭವಾದ ಮೊದಲ ಐದು ವಾರ್ಡ್‌ಗಳಲ್ಲೇ ಹತ್ತರಿಂದ ಹದಿನೈದು ಸಾವಿರ ಜನರಿಗೆ ಉದ್ಯೋಗ ನೀಡಲು ಸಾಧ್ಯವಾಗುತ್ತದೆ ಎಂದು ಪ್ರತಿಪಾದಿಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

2 ಲಕ್ಷ ಸಹಿ ಸಂಗ್ರಹ ಪಾರ್ಲಿಮೆಂಟ್ ಚಲೋ

ಗಣಿ ಪುನಶ್ಚೇತನಕ್ಕೆ ಆಗ್ರಹಿಸಿ ಚಳುವಳಿಯನ್ನು ರೂಪಿಸಲು ಬಿಜಿಎಂಎಲ್ ಉಳಿಸಿ ಹೋರಾಟ ಸಮಿತಿಯನ್ನು ಸಮಾವೇಶದಲ್ಲಿ ರೂಪಿಸಲಾಯಿತು. ಸಮಿತಿಯ ಗೌರವಾಧ್ಯಕ್ಷರಾಗಿ ವಿ.ಜೆ.ಕೆ.ನಾಯರ್ ಅಧ್ಯಕ್ಷರಾಗಿ ಜೆ.ಅರ್ಜುನನ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಗಾಂಧಿನಗರ ನಾರಾಯಣಸ್ವಾಮಿ ಆಯ್ಕೆಯಾದರು. ಬಿ.ವಿ.ಸಂಪಂಗಿ ಖಜಾಂಚಿ.

ಬೇಡಿಕೆಗೆ ಬೆಂಬಲವಾಗಿ ಎರಡು ಲಕ್ಷ ಜನರಿಂದ ಸಹಿ ಸಂಗ್ರಹಿಸಿ ಫೆಬ್ರವರಿ 24 ರಂದು ಪಾರ್ಲಿಮೆಂಟ್ ಚಲೋ ನಡೆಸಿ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸುವ ಗೊತ್ತುವಳಿಯನ್ನು ಸಮಾವೇಶ ಅಂಗೀಕರಿಸಿತು.

ಕರಾವಳಿಯಲ್ಲೂ ಅಕ್ಷರದಾಸೋಹ, ಬೀಡಿ ಕಾರ್ಮಿಕರ ಪ್ರತಿಭಟನೆಗಗಳು

ಮಂಗಳೂರು ಮತ್ತು ಉಡುಪಿಯಲ್ಲಿ ಬಿಸಿಯೂಟ ನೌಕರರ ಪ್ರತಿಭಟನೆ:

ರಾಜ್ಯಾದ್ಯಂತ ಬಿಸಿಯೂಟ ನೌಕರರ ಸಂಘ(ಸಿಐಟಿಯು) ನೀಡಿದ ಕರೆಯ ಮೇರೆಗೆ ಫೆಬ್ರವರಿ ...ರಂದು ಮಂಗಳೂರು ಮತ್ತು ಉಡುಪಿಗಳಲ್ಲಿ ಈ ಎರಡೂ ಜಿಲ್ಲೆಗಳ ಬಿಸಿಯೂಟ ನೌಕರರು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು.



ಬಿಸಿಯೂಟ ಯೋಜನೆಯಲ್ಲಿ ಕನಿಷ್ಠ ವೇತನ, ಸೇವಾ ಸೌಲಭ್ಯಗಳು ಇಲ್ಲದೆ ಒಂದು ಲಕ್ಷಕ್ಕೂ ಹೆಚ್ಚು ಮಹಿಳೆಯರು ದಿನಕ್ಕೆ 6-7ಗಂಟೆ ದುಡಿಯುತ್ತಾರೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಅಡುಗೆ ಸಿಬ್ಬಂದಿಯನ್ನು ಕೈಬಿಡುವ ಪ್ರಕ್ರಿಯೆಯೂ ನಡೆದಿದೆ. ಬೇರೆ ಸಮಸ್ಯೆ ಉಂಟಾದರೆ ಅದಕ್ಕೆ ನೇರವಾಗಿ ಅಡುಗೆಯವರನ್ನು ಹೊಣೆ ಮಾಡಲಾಗುತ್ತಿದೆ; ಹೆಚ್ಚಿನವರು ಕೆಲಸ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ. ಬಿಸಿಯೂಟ ನೌಕರರನ್ನು ಕಾಯಂಗೊಳಿಸಬೇಕು, ಮಾಸಿಕ ಕನಿಷ್ಠ ವೇತನ ರೂ.6000ಕ್ಕೆ ಏರಿಸಬೇಕು; ಅಗತ್ಯ ಸೇವಾ ಸೌಲಭ್ಯ ನೀಡಬೇಕು; ತಿಂಗಳ ಮೊದಲೇ ವಾರವೇ ವೇತನ ನೀಡಬೇಕು; ಖಾಸಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಈ ಯೋಜನೆ ನೀಡುವುದನ್ನು ಕೈಬಿಡಬೇಕಾದ ಮೊದಲಾದ ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಪ್ರತಿಭಟನೆಗಳನ್ನು ನಡೆಸ ಲಾಗಿತ್ತು.

ಮಂಗಳೂರು ಜಿಲ್ಲಾ ಪಂಚಾಯಿತಿ ಎದುರು ನಡೆದ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಮಿಕ ಮುಖಂಡರಾದ ಬಿ.ಎಂ. ಭಟ್, ಸುನೀಲ್ ಕುಮಾರ್ ಬಜಾಲ್, ಎಲ್.ಟಿ. ಸುವರ್ಣ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕೆ.ಯಾದವಶೆಟ್ಟಿ, ಅಕ್ಷರ ದಾಸೋಹ ನೌಕರರ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷ ಗಿರಿಜ ನಾಮಂಜೂರು ಮಾತನಾಡಿದರು. ಶಶಿಕಲಾ ಎಡಪದವು, ವಸಂತ ಕುಪ್ಪೆಪದವು, ಯಶೋಧ, ಶಾಂತಾ ಮುತ್ತೂರು, ವಿಜಯ ಬಂಗಾಡಿ, ವಿನೋದ ಚಾಮುಣ್ಣ, ಹೇಮಾವಳಿ ಸುಳ್ಯ ಮೊದಲಾದ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಬಳಿಕ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.



ವರದಿ : ವಾ.ಉ

★

ಮೆಸ್ಕಾಂ ವಿರುದ್ಧ ಪಂಜಮೊಗರು ಡಿವೈಎಫ್ಐ ಪ್ರತಿಭಟನೆ:

ಸಾವಿರಾರು ರೂಪಾಯಿಗಳನ್ನು ವ್ಯಯಿಸಿ ಹೆಚ್ಚುವರಿ ಲೋಡ್‌ನ ವಿದ್ಯುತ್ ಸಂಪರ್ಕ ಪಡೆಯಬೇಕೆಂಬ ಮೆಸ್ಕಾಂ ಆದೇಶವನ್ನು ವಿರೋಧಿಸಿ ಡಿವೈಎಫ್ಐ ಪಂಜಿಗ ಮೊಗರು ಘಟಕದ ನೇತೃತ್ವದ ಸ್ಥಳೀಯರು ಫೆಬ್ರವರಿ 7ರಂದು ಮಂಗಳೂರಿನ ಕಾವೂರು ಮೆಸ್ಕಾ ಕಛೇರಿಯೆದುರು ಪ್ರತಿಭಟನೆ ನಡೆಸಿದರು. ಅವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ನಿಗದಿಸುವ ದಂಡವನ್ನು ಬಿಲ್ಲಿನಲ್ಲಿ ಸೇರಿಸಿ ಕಳುಹಿಸಿರುವುದನ್ನು, ದಂಡ ಪಾವತಿಸದೆ ವಿದ್ಯುತ್ ಬಿಲ್ಲು ಪಾವತಿಸಲು ಅವಕಾಶ ಕೊಡದಿರುವುದನ್ನು ಪ್ರತಿಭಟನೆಕಾರರು ವಿರೋಧಿಸಿದರು.

ಕಾವೂರು ಜಂಕ್ಷನ್ನಿನಿಂದ ಮೆರವಣಿಗೆಯಲ್ಲಿ ತೆರಳಿ ಮೆಸ್ಕಾಂ ಕಛೇರಿ ಎದುರು ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು ಮೆಸ್ಕಾಂ ನೀತಿಯ ವಿರುದ್ಧ ಘೋಷಣೆ ಹಾಕಿದರು. ಬಳಿಕ ಗುತ್ತಿಗೆದಾರರ ಮೂಲಕ ಹೆಚ್ಚುವರಿ ಲೋಡ್ ಸಕ್ರಮಗೊಳಿಸುವ ನೀತಿಯನ್ನು ಕೈಬಿಡಲು ಆಗ್ರಹಿಸಿ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರ ಒತ್ತಡಕ್ಕೆ ಮಣಿದ ಮೆಸ್ಕಾಂಅಧಿಕಾರಿಗಳು ದಂಡ ಪಾವತಿಸದೆ, ವಿದ್ಯುತ್ ಬಿಲ್ಲು ಮತ್ತು ಮೊತ್ತ ಪಾವತಿಸಲು ಅನುಮತಿ ನೀಡಿದರು; ದಂಡ ಮತ್ತು ಗುತ್ತಿಗೆದಾರರ ಸಮಸ್ಯೆಗಳ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸುವ ಭರವಸೆ ನೀಡಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳಿ, ಕಾರ್ಯದರ್ಶಿ ದಯಾನಂದಶೆಟ್ಟಿ, ಡಿವೈಎಫ್ಐ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸಂತೋಷಕುಮಾರ್ ಬಜಾಲ್ ಮಾತನಾಡಿದರು. ಸ್ಥಳೀಯ ಮುಖಂಡರಾದ ನೌಶಾದ್ ಬಾವು, ಅನಿಲ್ ಡಿ'ಸೋಜ, ಖಲೀಲ್, ಮುಸ್ತಾಫಾ, ಕ್ಲೆವರ್, ಡಿಸೋಜ, ರುಕ್ಮಿಣಿ, ಸೌಮ್ಯ, ಮಹಮ್ಮದಾಲಿ, ಆಗ್ನೇಸ್, ಸಂತೋಷ್, ರಿಯಾಜ್, ಜಯಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.



★

ಮೂಡಬಿದರೆಯಲ್ಲಿ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಮಾವೇಶ:

"ಬೆಲೆಯೇರಿಕೆ ಹಾಗೂ ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣವನ್ನು ವಿರೋಧಿಸಿ ಸಿಐಟಿಯು ವತಿಯಿಂದ ಫೆಬ್ರವರಿ 28ರಂದು ದೆಹಲಿ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಫೆಬ್ರವರಿ 23ರಂದು ಸಿಐಟಿಯು ಬೃಹತ್ ಸಮ್ಮೇಳನ ದೆಹಲಿಯಲ್ಲಿ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಈ ಸಮಾವೇಶದಲ್ಲಿ ಪಾಲ್ಗೊಳ್ಳಬೇಕು" ಎಂದು ಸಿಐಟಿಯು ಸಂಯೋಜಿತ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ದ.ಕ.ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಕರೆ ನೀಡಿದರು.

ಅವರು ಮೂಡಬಿದರೆಯಲ್ಲಿ ಫೆಬ್ರವರಿ 6 ರಂದು ನಡೆದ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ವಲಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಸಮಾವೇಶವನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ಪುರಸಭಾ ಉಪಾಧ್ಯಕ್ಷ ಹಾಗೂ ಕಾರ್ಮಿಕ ಮುಖಂಡ ರಮಣಿ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ವಲಯ ಅಧ್ಯಕ್ಷರಾದ ಶಂಕರ, ಕಾರ್ಯದರ್ಶಿ ರತ್ನಾಕರ ಮೊದಲಾದವರು ಉಪಸ್ಥಿತರಿದ್ದರು.

★

ಕರಾವಳಿಯಲ್ಲಿ ಅಲ್ಲಲ್ಲಿ ಬೀಡಿ ಕಾರ್ಮಿಕರ ಸಂಘದಿಂದ ಪ್ರತಿಭಟನೆಗಳು:

ಸಾವಿರ ಬೀಡಿಗೆ ಕನಿಷ್ಠ ಕೂಲಿ ರೂ.125 ಹಾಗೂ ತುಟ್ಟಿಭತ್ಯೆಯನ್ನು ನೀಡಬೇಕು. ಗುತ್ತಿಗೆ ಪದ್ಧತಿ, ಉಪ ಗುತ್ತಿಗೆ ಪದ್ಧತಿಗಳನ್ನು ರದ್ದುಗೊಳಿಸಿ ಬೀಡಿ ಕಾರ್ಮಿಕರಿಗೆ ಮೂಲ ಮಾಲರಕನ್ನು ಹೊಣೆ ಮಾಡಬೇಕು. ತಿಂಗಳಲ್ಲಿ ಕನಿಷ್ಠ 26 ದಿನಗಳಲ್ಲಿ ಕನಿಷ್ಠ 1000 ಬೀಡಿಗೆ

ಪುಟ 12 ಕ್ಕೆ

ಭ್ರಷ್ಟಾಚಾರ ತಡೆಗೆ ಮಾಹಿತಿ ಹಕ್ಕನ್ನು ಬಳಸಲು ಪಿ.ಮಹಮ್ಮದ್ ಕರೆ

ಸಮಾಜದಲ್ಲಿ ವ್ಯಾಪಕವಾಗುತ್ತಿರುವ ಭ್ರಷ್ಟಾಚಾರ ತಡೆಗೆ ಮಾಹಿತಿ ಹಕ್ಕು ಕಾಯ್ದೆಯನ್ನು ಪ್ರಬಲ ಸಾಧನವಾಗಿ ಜನರು ಬಳಸಬೇಕು ಎಂದು ಖ್ಯಾತ ವ್ಯಂಗ್ಯ ಚಿತ್ರಕಾರ ಪಿ.ಮಹಮ್ಮದ್ ತಿಳಿಸಿದ್ದಾರೆ. ಅವರು ಫೆಬ್ರವರಿ 6ರಂದು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯ ವತಿಯಿಂದ ತೊಕ್ಕೊಟ್ಟಿನಲ್ಲಿ ಏರ್ಪಡಿಸಿದ್ದ ದಿ: ರಮೇಶ್‌ಕುಮಾರ್ ಅದ್ಯಪಾಡಿ ಸ್ಮರಣಾರ್ಥ "ಭ್ರಷ್ಟಾಚಾರ ಮತ್ತು ಯುವಜನತೆ" ವಿಚಾರಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ರಾಜಕೀಯ ಕ್ಷೇತ್ರದೊಂದಿಗೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಸೇರ್ಪಡೆಯಾಗಿದೆ. ಮಾಧ್ಯಮಗಳು ಭ್ರಷ್ಟಾಚಾರಗಳನ್ನು ಹೊರತರಲು ಮಹತ್ವದ ಪಾತ್ರ ವಹಿಸಿವೆ. ರಾಜಕೀಯದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಲು ಇಂದಿನ ಚುನಾವಣಾ ವ್ಯವಸ್ಥೆಯ ಲೋಪದೋಷಗಳು ಪ್ರಮುಖ ಕಾರಣ ಎಂದು ಪಿ.ಮಹಮ್ಮದ್ ತಿಳಿಸಿದರು.

ಪ್ರೊ: ನಾಗಪ್ಪಗೌಡ ಮಾತನಾಡಿ, "ದೇಶದಲ್ಲಿ ಬೆಳೆಯುತ್ತಿರುವ ಭ್ರಷ್ಟಾಚಾರ ಸಾಮಾನ್ಯ ಸಂಗತಿ ಎಂಬಂತೆ ಬಿಂಬಿತವಾಗುತ್ತಿರುವುದು ವಿಷಾದನೀಯ. ಸ್ವಾರ್ಥ, ಹಣ ಸಂಪಾದಿಸಲು ಸಿಗುತ್ತಿರುವ ಈಗಿನ ಶಿಕ್ಷಣದಿಂದಾಗಿ ವಿದ್ಯಾವಂತರಿಗಿಂತ ಹೆಚ್ಚು ನ್ಯಾಯನಿಷ್ಠೆ ಅವಿದ್ಯಾವಂತರಲ್ಲಿದೆ. ಈ ನಿಟ್ಟಿನಲ್ಲಿ ಮೌಲ್ಯ, ಸಾಮಾಜಿಕ ಕಾಳಜಿ ಮೂಡಿಸುವಂತಹ ವ್ಯವಸ್ಥೆ ಶೈಕ್ಷಣಿಕ ರಂಗದಲ್ಲಿ ಆಗಬೇಕಿದೆ. ಈ ರೀತಿಯ ಶಿಕ್ಷಣದಿಂದ ಮಾತ್ರ ಸಮಾಜ ಪರಿವರ್ತನೆಗೊಳ್ಳಲು ಸಾಧ್ಯ" ಎಂದು ಹೇಳಿದರು.

ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷ ಮುನೀರ್ ಕಾಟಿಪಳ್ಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ , ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಮಹಾಬಲ ದೆಪ್ಪಲಿಮಾರ್, ಯುವತಿಯರ ಉಪಸಮಿತಿ ಅಧ್ಯಕ್ಷ ವಾಣಿ ಕೊಂಡಾಣ ಮತ್ತಿತರರು ಉಪಸ್ಥಿತರಿದ್ದರು. ಮುನ್ನೂರಷ್ಟು ಯುವಜನರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.




ಮಾತನಾಡುತ್ತಿರುವವರು ಪ್ರೊ. ನಾಗಪ್ಪಗೌಡ

77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಆಳುವ ವರ್ಗದ ತುಳಿತಕ್ಕೆ ಸಿಲುಕಿರುವ ಕನ್ನಡದ ಕುರಿತು ಆತಂಕ

ಬಹುಭಾಷಿಕ ದುಡಿಯುವ ಜನತೆ ನೆಲೆಸಿರುವ ಬೆಂಗಳೂರು ನಗರದಲ್ಲಿ ಜರುಗಿದ 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ವಿಶಿಷ್ಟ ಹಬ್ಬದ ಮೆರುಗನ್ನು ಪಡೆದುಕೊಂಡಿತ್ತು. ಕಿಕ್ಕಿರಿದು ನೆರೆದ ಅಪಾರ ಜನಸಂದಣಿ, ಅದಲು ಬದಲಾದ ಸಂಚಾರ ಮಾರ್ಗಗಳು, ನೆಚ್ಚಿನ ಕವಿ, ಲೇಖಕರನ್ನು ನೋಡಲು ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಮತ್ತು ನೆಚ್ಚಿನ ಪುಸ್ತಕಗಳನ್ನು ಕೊಂಡುಕೊಳ್ಳು ಜನರ ನೂಕುನುಗ್ಗಲು.

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 77ರ ಸಂಭ್ರಮ ವಿದ್ದರೂ, ಅದರ ಒಡಲಿನ ನೋವುಗಳೆಂದರೆ ತನ್ನ ಇದುವರೆಗಿನ ನಿರ್ಣಯಗಳಲ್ಲಿ ಬಹುತೇಕವನ್ನು ಆಳುವ ವರ್ಗಗಳು ಜಾರಿಗೊಳಿಸುತ್ತಿಲ್ಲ ಎನ್ನುವುದು ಇದಕ್ಕೆ ಉತ್ತಮ ಉದಾಹರಣೆಯೆಂದರೆ ಇಂದಿಗೂ ಕೂಡ ಕನ್ನಡವನ್ನು ಒಳಗೊಂಡು ಮಾತೃಭಾಷೆಯ ಶಿಕ್ಷಣ ಜಾರಿ ಮಾಡುವುದಾಗಲಿ ಅಥವಾ ಆಡಳಿತ ಭಾಷೆಯನ್ನಾಗಿ ಕನ್ನಡವನ್ನು ಎಲ್ಲ ಸ್ತರದಲ್ಲೂ ಬಳಕೆ ಮಾಡುವುದಾಗಲಿ ಅಥವಾ ಕರ್ನಾಟಕ ಜನತೆಗೆ ಉದ್ಯೋಗ ಒದಗಿಸುವುದಾಗಲಿ ಬರೇ ನಿರ್ಣಯ ಗಳಾಗಿ ಉಳಿಯುವಲ್ಲಿ ಆಳುವ ವರ್ಗ ಮತ್ತು ಅಧಿಕಾರಶಾಹಿ ಯಶಸ್ವಿ ಯಾಗಿರುವುದು.



ಸಮ್ಮೇಳನದ ಅಧ್ಯಕ್ಷೀಯ ಭಾಷಣ

ನಿಘಂಟುತಜ್ಞ ಮತ್ತು ಹಿರಿಯರಾದ ಜಿ.ವೆಂಕಟ ಸುಬ್ಬಯ್ಯನವರನ್ನು ಈ ಸಲದ ಸಾಹಿತ್ಯ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ಎಲ್ಲ ವಿಭಾಗದ ಜನತೆಯ ಗೌರವ ಮತ್ತು ಪ್ರಶಂಸೆಗಳಿಗೆ ಕಾರಣವಾಯಿತು. ಆದರೆ ಕರ್ನಾಟಕ ರಾಜ್ಯದ ಜನತೆ ಇವತ್ತಿನ ಮಟ್ಟಿಗೆ ಎದುರಿಸುತ್ತಿರುವ ಹಲವು ಸಮಸ್ಯೆಗಳತ್ತ ಬೊಟ್ಟು ತೋರುವಂತೆ ಮೂಡಿಬಂದ ಸಮ್ಮೇಳನಾಧ್ಯಕ್ಷರ ಭಾಷಣ ಸಾಹಿತ್ಯಾಸಕ್ತರಿಗೆ ಹೊಸ ಹುರುಪು, ಹುಮ್ಮಸ್ಸು ತುಂಬುವಂತಾಗಲಿ ಅಥವಾ ನಾಡಿನ ದುಡಿಯುವ ಜನತೆಯ ಅಂತರ್ಯದಿಂದ ಮೂಡಿಬಂದ ಚಾಟಿಯೇಟಿನಂತಾಗಲಿ ಇರಲಿಲ್ಲ. ಆದರೆ ಅತ್ಯಂತ ಭ್ರಷ್ಟರಾಜ್ಯ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಪಕ್ಕದಲ್ಲಿಯೇ ಕುಳಿತು ನಿರ್ಧಾಕ್ಷಿಣ್ಯವಾಗಿಯೇ ಕುಟುಕಿದರು. (ಈ ಮಾತನ್ನು ಆಡುವಾಗ ಯಡಿಯೂರಪ್ಪನವರು ಮುಖಮರೆ ಮಾಡಿಕೊಂಡು ಹಿಂದಿಕ್ಕೆ ತಿರುಗಿದರಂತೆ).

ಕರ್ನಾಟಕ ಜನರ ಬದುಕಿನ ಹಲವು ಗಂಭೀರ ಪ್ರಶ್ನೆಗಳು ಚರ್ಚೆಗೆ ಬಾರದೇ ಹೋದದ್ದು, ಭ್ರಷ್ಟಾಚಾರದ ವಿರುದ್ಧ, ಆಡಳಿತದಲ್ಲಿ ಕನ್ನಡ ಜಾರಿ ಇತ್ಯಾದಿ ಬಿಟ್ಟರೆ, ಅಂತಹ ಜನಮತವನ್ನು ಸೆಳೆಯದ ಸಮ್ಮೇಳನಾಧ್ಯಕ್ಷರ ಭಾಷಣ, ಗಂಭೀರ, ಆಳ ಚರ್ಚೆಗೆ ಅವಕಾಶವಾಗದ ಜಾತ್ರೆಯಂತಹ ವಾತಾವರಣ ಇಂತಹ ಹಲವು ಕೊರತೆಗಳ ನಡುವೆಯೂ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಜನ ಸಾಮಾನ್ಯರ ಉತ್ಸಾಹ, ಸಂಭ್ರಮ, ಪುಸ್ತಕಗಳ ಉತ್ತಮ ವ್ಯಾಪಾರ ಗಮನ ಸೆಳೆಯುವ ಅಂಶ.

ಕನ್ನಡ ಸಾಹಿತ್ಯ ಸಂಭ್ರಮ



ಕಳಾಹೀನ ಚಾರಗೋಷ್ಠಿಗಳು, ಆಕರ್ಷಿಸಿದ ಕವಿಗೋಷ್ಠಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು :

ಕನ್ನಡ ರಂಗ ಚಳುವಳಿಗಳು, ಕನ್ನಡದಲ್ಲಿ ಅನುವಾದ ಸಾಹಿತ್ಯ, ಮಕ್ಕಳ ಸಾಹಿತ್ಯ ಇಂತಹ ಎರಡು ಮೂರು ಗೋಷ್ಠಿಗಳನ್ನು ಹೊರತುಪಡಿಸಿದರೆ ಬಹುತೇಕ ವಿಚಾರಗೋಷ್ಠಿಗಳಲ್ಲಿ ವಿಚಾರದ ಆಳ, ಹರವು, ಸಮಗ್ರತೆ ಏನೊಂದೂ ಇರಲಿಲ್ಲ ಆದರೆ ಸಂಗೀತದೊಂದಿಗೆ ಮೂಡಿಬಂದ ಕವನಗಳು ಹಾಗೂ ರಂಗಗೀತೆಗಳು ಸುಗಮ ಸಂಗೀತ ಮತ್ತು ಜಾನಪದ ಗೀತೆಗಳು ಜನರನ್ನು ಮುದಗೊಳಿಸಿದವು.

ಮನಸೆಳೆದ ಶೂದ್ರತಪಸ್ವಿ

ಸಾಹಿತ್ಯ ಸಮ್ಮೇಳನದ ಮೊದಲ ದಿನ ಜರುಗಿದ ರಂಗಕರ್ಮಿ ಬಸವಲಿಂಗಯ್ಯ ನವರು ನಿರ್ದೇಶಿಸಿದ್ದ ಕುವೆಂಪು ರಚಿತ ನಾಟಕ 'ಶೂದ್ರ ತಪಸ್ವಿ' ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರ ವಾಯಿತು. ಹಳಗನ್ನಡದಲ್ಲಿದ್ದರೂ ಅರ್ಥವಾಗುವ ಶೈಲಿಯಲ್ಲಿದ್ದು ನಾಟಕದ ಹಲವು ದೃಶ್ಯಗಳು ಮನೋಜ್ಞವಾಗಿದ್ದು ವೈಚಾರಿಕವಾಗಿ ಮೂಡಿಬಂದು ನೋಡುಗರು ಚಪ್ಪಾಳೆ, ಶಿಳ್ಳೆ ಹೊಡೆದು ಮನದುಂಬಿ ಸಂಭ್ರಮಿಸಿದರು.

ಪುಸ್ತಕ ಮೇಳದ ಯಶಸ್ಸು ಮತ್ತು ಹಲವು ಪರದಾಟಗಳು :

ಹಿಂದಿನ ಎಲ್ಲ ಸಾಹಿತ್ಯ ಸಮ್ಮೇಳನಗಳಿಗಿಂತ ಅತಿ ಹೆಚ್ಚು ಪುಸ್ತಕಗಳು ಈ ಸಮ್ಮೇಳನದಲ್ಲಿ ಬಿಕರಿಯಾಗಿರುವುದು ಕನ್ನಡ ಪ್ರಕಾಶಕರು ಮತ್ತು ಮಾರಾಟಗಾರರನ್ನು ಮತ್ತಷ್ಟು ಉತ್ತೇಜಿಸಿದೆ. ಸುಮಾರು ರೂ.7 ಕೋಟಿ ಬೆಲೆಯ ಪುಸ್ತಕಗಳು ಮಾರಾಟಗೊಂಡಿದ್ದು ಹಲವಾರು ಮೌಲ್ಯಿಕ ಕೃತಿಗಳ ಲಭ್ಯತೆ ಹಾಗೂ ಒಳ್ಳೆಯ ರಿಯಾಯಿತಿ ನೀಡಿದ್ದು ಒಂದು ಕಾರಣ. ಗೋಷ್ಠಿಗಳ ಹತ್ತಿರ ಸುಳಿಯದಿದ್ದರೂ ಜನಜಂಗುಳಿ ಮಾತ್ರ ಸದಾ ಪುಸ್ತಕ ಪ್ರದರ್ಶನದ ಬಳಿ ನೆರೆದಿತ್ತು. ಪುಸ್ತಕ ಮೇಳಕ್ಕೆ ನೀಡಿದ್ದ ಜಾಗ ಬಹಳ ಕಿರಿದಾಗಿತ್ತು ಹಾಗೂ ಮೇಳವನ್ನು ಇನ್ನೆರಡು ದಿನಗಳ ವಿಸ್ತರಿಸಲಾಗಿದೆ ಎಂದು ಸಂಘಟಕರು ಕೊನೆಯ ದಿನ ತಡವಾಗಿ ಘೋಷಿಸಿದ್ದು ಸಂಘಟಕರ ಅವ್ಯವಸ್ಥೆಯ ಆಗರಗಳಿಗೆ ಕನ್ನಡಿ ಹಿಡಿದಂತಿತ್ತು. ಅಷ್ಟರದಲ್ಲಿ ಬಹುತೇಕ ಮಳಿಗೆಯವರು ತಮ್ಮ ಗಂಟುಮೂಟೆ ಕಟ್ಟಿಯಾಗಿತ್ತು. ಅಂತಹುದೇ ಅವ್ಯವಸ್ಥೆ ಊಟದ ಏರ್ಪಾಟಿನ ವಿಷಯದಲ್ಲಿಯೂ ಆಗಿತ್ತು. ಊಟ ಮತ್ತು ನೀರಿಗಾಗಿ ಪರದಾಡುವಂತಾಯಿತು.



ಕುವೆಂಪು ಮಾತುಗಳಲ್ಲಿ ಸಾಹಿತ್ಯದ ಪ್ರಾಮುಖ್ಯತೆ

39ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (1957) ಕುವೆಂಪು ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಬುದ್ಧಿಯನ್ನು ಎಚ್ಚರಿಸಿ, ಸೂಕ್ಷ್ಮಗೊಳಿಸಿ, ನಾನಾ ರೂಪದ ಪ್ರಾಚೀನ ಮತ್ತು ನವೀನ ಮೌಢ್ಯಗಳಿಂದ ಅದನ್ನು ಪಾರು ಮಾಡಿ ವಿಚಾರಪರತೆಯನ್ನು ವೈಜ್ಞಾನಿಕ ದೃಷ್ಟಿಯನ್ನು ನೆಲೆಗೊಳಿಸಿ ಜನತೆಯನ್ನು ಸಮನ್ವಯ, ಸರ್ವೋದಯ ಮತ್ತು ಪೂರ್ಣ ದೃಷ್ಟಿಗಳ ಕಡೆಗೆ ತಿರುಗಿಸುವ ಹೊಣೆ ಎರಡೂ ಕತ್ತಿ ಕುಡುಗೋಲು ಗಳಿಗಿಂತಲೂ ಲೇಖನಿಯ ಮೇಲೆ ಬೀಳುತ್ತದೆ. ಬುದ್ಧಿಯಷ್ಟೇ ಅಥವಾ ಅದಕ್ಕಿಂತಲೂ ಮಿಗಿಲಾಗಿಯೇ ಹೃದಯ ಪರಿವರ್ತನೆ ಅತ್ಯಗತ್ಯ. ಈ ಕೆಲಸ ವಿವಿಧ ಮತಧರ್ಮಗಳು ನೆಲೆಸಿರುವ ನಮ್ಮ ದೇಶದಲ್ಲಿ ಸಾಹಿತ್ಯದಿಂದಲೇ ಸಾಧ್ಯವಾಗಬೇಕಿದೆ" ಎಂದಿದ್ದರು.

ಕರ್ನಾಟಕ ರಾಜ್ಯದ ದುಡಿಯುವ ಜನರ ಸಂಕಷ್ಟಗಳ ಕುರಿತು ಆಮೂಲಾಗ್ರವಾಗಿ ಚರ್ಚಿಸುವುದಕ್ಕಾಗಲಿ, ದುಡಿಯುವ ಜನತೆಯ ಜೀವನದ ಮೂಸೆಯಿಂದ ಸಾಹಿತ್ಯ ಇನ್ನಷ್ಟು ವಿಸ್ತಾರವಾಗುವ ಮೂಲಕ ಸಮೃದ್ಧತೆ ಪಡೆದುಕೊಳ್ಳುವ ಕುರಿತಾಗಲಿ ಚರ್ಚಿಸಲು ಸಾಹಿತ್ಯ ಸಮ್ಮೇಳನ ಇನ್ನೂ ಸಮರ್ಥ ವೇದಿಕೆಯಾಗದೇ ಇದ್ದರೂ ಕೂಡ ಲಕ್ಷಾಂತರ ಸಾಹಿತ್ಯಾಭಿಮಾನಿಗಳು ಒಂದೆಡೆ ಸೇರಿ ಜಾತ್ರೆ ಅಥವಾ ಹಬ್ಬದಂತೆ ಭಾಗವಹಿಸುವುದಕ್ಕಂತೂ ವೇದಿಕೆ ಒದಗಿಸಿದೆ ಎನ್ನಬಹುದು.

ಗೌರವ ಡಾಕ್ಟರೇಟ್ ಪ್ರಕರಣ

ರಾಜ್ಯಪಾಲ ಎಚ್.ಆರ್ ಭಾರಧ್ವಾಜ್ ಅವರು ಹಿರಿಯ ಸಂಶೋಧಕ ಚಿದಾನಂದಮೂರ್ತಿಯವರಿಗೆ ಬೆಂಗಳೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡುವುದಕ್ಕೆ ತಡೆ ನೀಡಿದ್ದಕ್ಕೆ ಅಚ್ಚರಿಯ ಸ್ಪಂದನೆಗಳನ್ನು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಇಡೀ ಸಾರಸ್ವತ ಲೋಕ ಒಕ್ಕೊರಲಿನಿಂದ ಹೊರಡಿಸಿತು ಎನ್ನಬಹುದು. ಚಿದಾನಂದಮೂರ್ತಿಯವರೂ ಸಹ ಎಸ್.ಎಲ್.ಭೈರಪ್ಪನವರಂತೆ ಕೋಮುವಾದಿ ಮತ್ತು ಫ್ಯಾಸಿಸ್ಟ್ ಸಿದ್ಧಾಂತದ ಬಿಜೆಪಿ ಮತ್ತು ಸಂಘ ಪರಿವಾರಗಳ ಸೈದ್ಧಾಂತಿಕ ಪ್ರತಿನಿಧಿಯಂತೆ ಅಲ್ಪಸಂಖ್ಯಾತ ವಿರೋಧಿ ನೆಲೆಗಟ್ಟಿನಲ್ಲಿ, ಇತ್ತೀಚಿನ ದಿನಗಳಲ್ಲಿ ತಮ್ಮ ಸಂಶೋಧನೆಯನ್ನೇ ವಿರೂಪ ಗೊಳಿಸುವ ಮಟ್ಟಿಗೆ ಕಾರ್ಯ ನಿರ್ವಹಿಸುತ್ತಿರುವ ಕುರಿತು ಇಡೀ ನಾಡಿನ ಪ್ರಗತಿಪರರು ಮತ್ತು ಸಾಹಿತಿಗಳು ಚಿದಾನಂದ ಮೂರ್ತಿಯವರನ್ನು ಟೀಕಿಸುತ್ತಾ ಬಂದಿದ್ದಾರೆ. ಆದರೆ ಅವರೊಬ್ಬ ನಾಡಿನ ಉತ್ತಮ ಸಂಶೋಧಕನಾಗಿ ಸಂಶೋಧನಾ ಕಾರ್ಯ ಗಳನ್ನು ಮಾಡಿರುವುದನ್ನು ಒಪ್ಪಿಕೊಂಡಿರುವ ಸಾರಸ್ವತ ಲೋಕ, ರಾಜ್ಯಪಾಲರು ಅವರಿಗೆ ಗೌರವ ಡಾಕ್ಟರೇಟ್ ತಡೆ ಹಿಡಿದಿದ್ದು ಅಪಮಾನ ಎಂದು ಖಂಡಿಸಿತು.

ಅವರ ಸಂಶೋಧನಾ ಕೊಡುಗೆಗಳಿಗೆ ಯಾವತ್ತೂ ಗೌರವವಿದ್ದೇ ಇದೆಯಾದರೂ ಈ ಗೌರವ ಅವರ ಜನವಿರೋಧಿ ಕೋಮುವಾದಕ್ಕಿಲ್ಲ ಎಂಬುದನ್ನು ಡಾ. ಎಂ.ಚಿದಾನಂದ ಮೂರ್ತಿಯವರಾಗಲಿ, ಮುಖ್ಯಮಂತ್ರಿ ಯಡಿಯೂರಪ್ಪ ನವರಾಗಲಿ ಸ್ಪಷ್ಟವಾಗಿ ಅರಿತುಕೊಳ್ಳಬೇಕಿದೆ.



ಇಸ್ಲಾಮೀ ತೀವ್ರಗಾಮಿಗಳಿಂದಾಗಿ ಗಲಭೆಗಳಾಗುತ್ತಿವೆ ಎಂದು ಮುಬಾರಕ್ ಆಳ್ವಿಕೆ ದೂರುತ್ತಿದ್ದರೆ, ಪಾಶ್ಚಿಮಾತ್ಯ ಮಾಧ್ಯಮಗಳಿಗೆ ತಹರೀರ್ ಚೌಕ ಪ್ರಜಾಪ್ರಭುತ್ವಕ್ಕಾಗಿ ಸ್ವಯಂಸ್ಫೂರ್ತ ಆಂದೋಲನದ ಸಂಕೇತ. ಆದರೆ ಇವೆರಡೂ ಸರಿಯಲ್ಲ. ನಾವೀಗ ಕಾಣುತ್ತಿರುವುದು ಹಲವು ಪ್ರವಾಹಗಳ ಸಮ್ಮಿಳನದಿಂದ ಮೂಡಿ ಬಂದ ಒಂದು ನೈಜ ಸಾಮೂಹಿಕ ಬಂಡಾಯ. ಇಜಿಪ್ಟಿನ ಜನತೆ ಇತಿಹಾಸವನ್ನು ನಿರ್ಮಿಸುತ್ತಿದ್ದಾರೆ, ಆದರೆ ಆ ಇತಿಹಾಸವನ್ನು, ಮಾರ್ಕ್ಸ್ ಹೇಳಿರುವಂತೆ, ಗತಕಾಲದ ಚಾರಿತ್ರಿಕ ಘಟನೆಗಳು ಮತ್ತು ಪರಿಸ್ಥಿತಿಗಳ ಕಟ್ಟುಪಾಡುಗಳಿಗೊಳಗಾಗಿ ನಿರ್ಮಿಸುತ್ತಿದ್ದಾರೆ. ತಮ್ಮ ಭವಿಷ್ಯವನ್ನು ಬದಲಿಸುವ ಹೋರಾಟವನ್ನು ಅವರು ಶ್ರದ್ಧಾಪೂರ್ವಕವಾಗಿ ಆರಂಭಿಸಿದ್ದಾರೆ. ಕ್ರಾಂತಿಕಾರಿ ಬದಲಾವಣೆ ಸಾಧ್ಯವಾಗದಿದ್ದರೂ ಹಳೆಯ ವ್ಯವಸ್ಥೆಗೆ ಹಿಂದಿರುಗಲೂ ಸಾಧ್ಯವಿಲ್ಲ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್ ರವರು. ನಮ್ಮ ಕಣ್ಣೆದುರು ನಿರ್ಮಾಣವಾಗುತ್ತಿರುವ ಚರಿತ್ರೆಯ ಒಂದು ಸಂಕ್ಷಿಪ್ತ, ಸಮಗ್ರ ವಿಶ್ಲೇಷಣೆ ಈ ಲೇಖನ.

ಈಜಿಪ್ಟ್ ಜನತೆ ಇತಿಹಾಸ ನಿರ್ಮಿಸುತ್ತಿದ್ದಾರೆ



ಜಗತ್ತಿನಾದ್ಯಂತ ಜನರು ಈಜಿಪ್ಟಿನ ಜನತೆಯ ಬಂಡಾಯವನ್ನು ಹರ್ಷಭರಿತರಾಗಿ ವೀಕ್ಷಿಸಿದ್ದಾರೆ. ಜನವರಿ 25ರಿಂದ ಹದಿನೈದು ದಿನಗಳ ಕಾಲ(ಫೆಬ್ರುವರಿ9 ರವರೆಗೆ) ಲಕ್ಷಾಂತರ ಈಜಿಪ್ಟಿಗರು ಸಾಮೂಹಿಕ ಬಂಡಾಯವನ್ನು ಸೇರಿಕೊಂಡಿದ್ದಾರೆ. ಎಲ್ಲಾ ವಿಭಾಗಗಳ ಜನರು, ವಿಶೇಷವಾಗಿ ಯುವಜನರು, ಕಾರ್ಮಿಕರು, ಮಧ್ಯಮ ವರ್ಗಗಳವರು, ಸಾಮಾನ್ಯ ಗಂಡಸರು, ಹೆಂಗಸರು ಹೊಸ್ನಿ ಮುಬಾರಕ್ ಸರ್ವಾಧಿಕಾರೀ ಆಳ್ವಿಕೆಯ ವಿರುದ್ಧ ನಿಂತಿದ್ದಾರೆ. ಮುಬಾರಕ್ ಆಳ್ವಿಕೆಯನ್ನು ಕೊನೆಗೊಳಿಸಿ ಒಂದು ಹೊಸ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ತರುವ ದೃಢನಿರ್ಧಾರದಲ್ಲಿ ಅವರೆಲ್ಲ ಒಗ್ಗಟ್ಟಾಗಿದ್ದಾರೆ. ಕೈರೋದ ತಹ್ರೀರ್(ವಿಮೋಚನಾ) ಚೌಕದಲ್ಲಿ ಸೇರಿರುವ ಜನ ತೋರಿರುವ ಚೈತನ್ಯ, ದೃಢತೆ ಮತ್ತು ಧೈರ್ಯಗಳು ಇತಿಹಾಸ ನಿರ್ಮಾಣವಾಗುತ್ತಿದೆ ಎಂಬುದನ್ನು ತೋರಿಸಿದೆ. ಈ ಹೋರಾಟದಲ್ಲಿ ಸುಮಾರು 300 ಜನ ಪ್ರಾಣಾರ್ಪಣೆ ಮಾಡಿದ್ದಾರೆ.

8.2 ಕೋಟಿ ಜನಸಂಖ್ಯೆಯಿರುವ ಈಜಿಪ್ಟ್ ಅತಿ ದೊಡ್ಡ ಅರಬ್ ದೇಶ. ಚಾರಿತ್ರಿಕವಾಗಿ ಅದು ಅರಬ್ ದೇಶಗಳ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದೆ. ಈಜಿಪ್ಟ್‌ನಲ್ಲಿ ಏನು ಸಂಭವಿಸಿದರೂ ಆ ಸಮಸ್ತ ಪ್ರದೇಶದ ಮೇಲೆ ಅದು ಪರಿಣಾಮ ಬೀರುತ್ತದೆ.

1952ರಲ್ಲಿ ಅಧಿಕಾರಿಗಳ ಕ್ರಾಂತಿ ಅವನತಶೀಲ ರಾಜಪ್ರಭುತ್ವವನ್ನು ಕಿತ್ತೆಸೆಯಿತು. ನಾಸೆರ್ ಮತ್ತು ಸೇನೆಯ ಮುಖಂಡತ್ವದಲ್ಲಿ ಒಂದು ಧರ್ಮಾತೀತ ಅರಬ್ ಗಣರಾಜ್ಯ ಸ್ಥಾಪನೆಯಾಗಿ ಅದು ಅರಬ್ ರಾಷ್ಟ್ರೀಯವಾದದ ದಾರಿದೀಪವಾಯಿತು. ಅದು ಸುಯೆಜ್ ಕಾಲುವೆಯನ್ನು ಕೈವಶ ಮಾಡಿಕೊಂಡು ಅದನ್ನು ತನ್ನ ಸುಪರ್ದಿಯಲ್ಲಿ ಹಿಡಿದಿಟ್ಟುಕೊಳ್ಳಲು ವ್ಯರ್ಥ ಪ್ರಯತ್ನ ನಡೆಸಿದ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ಸಿಟ್ಟಿಗೆ ಪಾತ್ರವಾಯಿತು. ನಾಸೆರ್ ಅಡಿಯಲ್ಲಿ ಈಜಿಪ್ಟ್ ಅಲಿಪ್ತ ಆಂದೋಲನದ ಪ್ರಮುಖ ಸದಸ್ಯನಾಯಿತು. ಆದರೆ ಎಪ್ಪತ್ತರ ದಶಕದಲ್ಲಿ ಒಂದು ನಾಟಕೀಯ ತಿರುವು ಬಂತು.

ಅಮೆರಿಕ-ಇಸ್ರೇಲಿ ತಂತ್ರದ ಕೇಂದ್ರ

1970ರ ದಶಕದಲ್ಲಿ ಅನ್ವರ್ ಸಾದತ್ ಅಡಿಯಲ್ಲಿ ಈಜಿಪ್ಟ್ ತನ್ನ ಆರ್ಥಿಕವನ್ನು ಪಶ್ಚಿಮದ ದೇಶಗಳಿಗೆ ತೆರೆದು ಕೊಟ್ಟಿತು. ಸಾದತ್ 1979ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಆಶ್ರಯದಲ್ಲಿ ಇಸ್ರೇಲಿನೊಂದಿಗೆ ಕುಪ್ರಸಿದ್ಧ ಸಂಧಿಗೆ ಸಹಿ ಹಾಕಿದರು. ಈಜಿಪ್ಟ್-ಇಸ್ರೇಲ್ ಮೈತ್ರಿ ಅಮರಿಕಾಕ್ಕೆ ಮಧ್ಯಪೂರ್ವ ಪ್ರದೇಶದ ಮೇಲೆ ಹತೋಟಿಗೆ ಕೀಲಿಕೈಯಾಯಿತು. ಅಮೆರಿಕಾ ಸಾದತ್‌ಗೆ ಮತ್ತು ನಂತರ ಮುಬಾರಕ್‌ಗೆ ಬಲ ತುಂಬಲು ಕೋಟಿ-ಕೋಟಿ ಡಾಲರುಗಳನ್ನು ಸುರಿಯಿತು. ಈ ಆಳ್ವಿಕೆಯ ಆಧಾರ ಪ್ರತಿ ವರ್ಷ ಅಮೆರಿಕಾದಿಂದ 130 ಕೋಟಿ ಡಾಲರುಗಳನ್ನು ನೆರವು ಎಂದು ಪಡೆಯುತ್ತಿರುವ ಸೇನೆ. ಪ್ಯಾಲೆಸ್ತೀನಿ ಆಂದೋಲನವನ್ನು ಕಟ್ಟಿ ಹಾಕಲು ಇಸ್ರೇಲಿನೊಂದಿಗೆ ಈಜಿಪ್ಟ್ ಸಂಯೋಜನೆ ನಡೆಸುತ್ತಿದೆ. ಈಜಿಪ್ಟ್ ಕಡೆಯಿಂದ ಗಾಝಾಕ್ಕೆ ದಾಟುವ ರಫಾವನ್ನು ಬಿಗಿಯಾಗಿ ನಿಯಂತ್ರಿಸಿ ಇಸ್ರೇಲಿನಿಂದ ಗಾಝಾದ ನಿರ್ಬಂಧಕ್ಕೆ ಅನುಕೂಲ ಕಲ್ಪಿಸಿ ಕೊಡಲಾಗಿದೆ.

ಅಮೆರಿಕಾದ 'ಭಯೋತ್ಪಾದನೆಯ ವಿರುದ್ಧ ಸಮರ'ದಲ್ಲಿ ಈಜಿಪ್ಟ್ ಒಂದು ಪ್ರಮುಖ ಕೊಂಡಿ. ಮುಬಾರಕ್ ಆಳ್ವಿಕೆ ಸಿಐಎ ವಿಶ್ವದ ಎಲ್ಲೆಡೆಗಳಿಂದ ಅಪಹರಣ ಮಾಡಿದ ಸೆರೆಯಾಳುಗಳನ್ನು ಪಡೆದು ಗುಪ್ತ ದಳಗಳು ನಡೆಸುವ ಸೆರೆಮನೆಗಳಲ್ಲಿ ಚಿತ್ರಹಿಂಸೆಗೆ ಗುರಿ ಮಾಡಲಾಗುತ್ತಿದೆ. ಈ 'ಅರ್ಪಣೆಗಳು' ಮುಬಾರಕ್ ಆಳ್ವಿಕೆ ಅಮೆರಿಕಾದೊಡನೆ ಎಷ್ಟು ಆಳವಾಗಿ ಶಾಮೀಲಾಗಿದೆ ಎಂಬುದನ್ನು ಬಯಲಿಗೆಳೆದಿದೆ.

ಏಕೆ ಈ ಉತ್ಕ್ರಾಂತಿ?

ಜನವರಿ 25 ರಂದು ಕೈರೊ, ಅಲೆಕ್ಸಾಂಡ್ರಿಯ. ಸುಯೆಝ್ ಮತ್ತು ಇತರ ನಗರಗಳಲ್ಲಿ ಸಾಮೂಹಿಕ ಮತಪ್ರದರ್ಶನಗಳೊಂದಿಗೆ ಆರಂಭವಾದ ಸಾಮೂಹಿಕ ಬಂಡಾಯ ಟ್ಯುನೀಸಿಯಾದಲ್ಲಿನ ಬೆಳವಣಿಗೆಗಳ ಪ್ರಭಾವದಿಂದಾಗಿ ಎಂದು ಹೇಳಲಾಗುತ್ತಿದೆ. ಟ್ಯುನೀಸಿಯದಲ್ಲಿ ಬೆನ್ ಅಲಿ ಆಳ್ವಿಕೆಯ ಪತನ ಈಜಿಪ್ಟಿನ ಬಂಡಾಯದ ಕಿಡಿ ಹೊತ್ತಿಸಿತು ಎಂದು ಜಗತ್ತಿನ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಡಿಸಲಾಗಿದೆ. ಈಜಿಪ್ಟಿನ ಆಂದೋಲನಕ್ಕೆ ಟ್ಯುನೀಸಿಯಾದ ಬಂಡಾಯ ಒಂದು ವೇಗವರ್ಧಕವಾಗಿ ಕೆಲಸ ಮಾಡಿದೆ ಎಂಬುದು ನಿಜವಾದರೂ, ಅದು ಇದ್ದಕಿದ್ದಂತೆ, ಸ್ವಯಂಸ್ಫೂರ್ತಿಯಿಂದ ಸಂಭವಿಸಿದ ಘಟನೆ ಎಂದು ನೋಡುವುದು ತಪ್ಪಾಗುತ್ತದೆ.

ಕಳೆದ ಮೂರು ದಶಕಗಳಲ್ಲಿ ಮುಬಾರಕ್ ಆಳ್ವಿಕೆ ಅಂಗೀಕರಿಸಿದ ನವ-ಉದಾರವಾದಿ ಧೋರಣೆಗಳ ಫಲಿತಾಂಶವಾಗಿ ಜನತೆ ದೊಡ್ಡ ಪ್ರಮಾಣದಲ್ಲಿ ಅಭಾವ ಮತ್ತು ಸಂಕಟಗಳಿಂದ ನರಳುವಂತಾಗಿದೆ. ಜನಸಂಖ್ಯೆಯ 44 ಶೇಕಡಾ ಮಂದಿ ದಿನಕ್ಕೆ ಎರಡು ಡಾಲರುಗಳಿಗಿಂತಲೂ ಕಡಿಮೆ ಆದಾಯದಲ್ಲಿ ಬದುಕಬೇಕಾಗಿದೆ ಎಂದು ಅಂದಾಜು ಮಾಡಲಾಗಿದೆ. ನಿರುದ್ಯೋಗ, ಅದರಲ್ಲಿಯೂ ಯುವಜನರ ನಡುವೆ ಮೇಲಿನ ಮಟ್ಟಗಳನ್ನು ತಲುಪಿದೆ. ಕೃಷಿ ಬಿಕ್ಕಟ್ಟು ರೈತಾಪಿಗಳನ್ನು ದಾರಿದ್ರ್ಯಕ್ಕೆ ತಳ್ಳಿದೆ. ಮುಬಾರಕ್ ಆಳ್ವಿಕೆ ಚಮಚಾ ಬಂಡವಾಳಶಾಹಿ ಮತ್ತು ಭೂಮಿಯೂ ಸೇರಿದಂತೆ ಎಲ್ಲ ಸಂಪನ್ಮೂಲಗಳನ್ನು ಬಾಚಿಕೊಳ್ಳುತ್ತಿರುವ ಬಂಡವಾಳಶಾಹಿಗಳ ಒಂದು ಗುಂಪಿಗೆ ನೀಡಿದ ಪೋಷಣೆಯಿಂದಾಗಿ ಒಂದು ಅತಿ ಶ್ರೀಮಂತ ಶ್ರೇಣಿ ಸೃಷ್ಟಿಯಾಗಿದ್ದು, ಸಮಾಜದಲ್ಲಿ ಒಂದು ತೀಕ್ಷ್ಣ ವಿಭಜನೆ ಉಂಟಾಗಿದೆ.

ಕಾರ್ಮಿಕ ವರ್ಗದ ಹೋರಾಟಗಳು

ಆಳುವ ವ್ಯವಸ್ಥೆಗೆ ವಿರುದ್ಧವಾದ ರಾಜಕೀಯ ಪಕ್ಷಗಳನ್ನು ಮತ್ತು ಗುಂಪುಗಳನ್ನು ತೀವ್ರವಾಗಿ ದಮನ ಮಾಡಿದರೂ, ಜನಸಾಮಾನ್ಯರ ಹೋರಾಟಗಳು ಮೇಲೇರಿ ಬರುತ್ತಿದ್ದವು. ಕಾರ್ಮಿಕ ವರ್ಗದ ಆಂದೋಲನವನ್ನು ಸದಾ ತೀವ್ರವಾಗಿ ದಮನಿಸಿಕೊಂಡೇ ಬರಲಾಗಿದೆ. ಅಧಿಕೃತವಾಗಿ ಪ್ರಾಯೋಜಿಸಿದ ಕಾರ್ಮಿಕ ಒಕ್ಕೂಟವಲ್ಲದೆ ಬೇರೆ ಯಾವ ಕಾರ್ಮಿಕ ಸಂಘಗಳಿಗೂ ಅವಕಾಶವಿಲ್ಲ. 1980ರ ಮತ್ತು 1990ರ ದಶಕಗಳಲ್ಲಿ ಈ ತೀವ್ರ ದಮನದಿಂದಾಗಿ ಕಾರ್ಮಿಕರ ಹೋರಾಟಗಳು ದುರ್ಬಲಗೊಂಡವು. ಆದರೆ ಕಳೆದ ಒಂದು ದಶಕದಲ್ಲಿ ಕಾರ್ಮಿಕರ ಹೋರಾಟಗಳು ಬಹಳಷ್ಟು ಹೆಚ್ಚಿವೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ಈಜಿಪ್ಟಿನ ಕಾರ್ಮಿಕ ವರ್ಗವನ್ನು ಬಲವಾಗಿ ತಟ್ಟಿದೆ. ನೂರಾರು



ಕಾರ್ಖಾನೆಗಳನ್ನು ಮುಚ್ಚಿ ಬಿಡಲಾಗಿದೆ. 2008ರಿಂದ ಕಾರ್ಮಿಕ ವರ್ಗದ ಹೋರಾಟಗಳು ತೀವ್ರವಾಗಿ ಏರಿವೆ. ಮಹಲ್ಲಾ ಅಲ್ ಕುಬ್ರ ಪಟ್ಟಣದಲ್ಲಿ ಎಪ್ರಿಲ್ 6, 2008 ರಂದು ನಡೆದ ಚಾರಿತ್ರಿಕ ಮುಷ್ಕರ ಒಂದು ಪ್ರಮುಖ ಬದಲಾವಣೆ. 28,000 ಕಾರ್ಮಿಕರ ಈ ಪಟ್ಟಣದಲ್ಲಿ ಮುಷ್ಕರವನ್ನು ಅಮಾನುಷವಾಗಿ ದಮನ ಮಾಡಲಾಯಿತು. ಆದರೆ ಈ ಹೋರಾಟದ ನಂತರ ಮುಖಜ ಭೂಮಿಯ ಕೈಗಾರಿಕಾ ಪ್ರದೇಶಗಳಲ್ಲಿ ಇಂತಹುದೇ ಹೋರಾಟಗಳು ಬೆಳೆದು ಬಂದವು. 2009ರಲ್ಲಿ 478 ಕೈಗಾರಿಕಾ ಕಾರ್ಯಾಚರಣೆಗಳು ನಡೆದವು ಎಂಬುದೇ ಕಾರ್ಮಿಕರ ಹೋರಾಟಗಳು ಎಂತಹ ತೀವ್ರತೆಯನ್ನು ಪಡೆದವು ಎಂಬುದನ್ನು ಸೂಚಿಸುತ್ತವೆ. ಮುಚ್ಚಿದ ಕಾರ್ಖಾನೆಗಳಲ್ಲಿ 184 ಧರಣಿಗಳು, 123 ಮುಷ್ಕರಗಳು, 79 ಮತಪ್ರದರ್ಶನಗಳು ಮತ್ತು 27 ರ್‍ಯಾಲಿಗಳು ನಡೆದವು.

ನಿರುದ್ಯೋಗ ಏರಿಕೆಯೊಂದಿಗೆ, ಕಳೆದ ಎರಡು ವರ್ಷಗಳಲ್ಲಿ ಬ್ರೆಡ್ ಮತ್ತು ಅಕ್ಕಿ, ಅಡುಗೆ ಎಣ್ಣೆಯಂತಹ ಇತರ ಎಲ್ಲ ಆಹಾರ ವಸ್ತುಗಳ ಬೆಲೆಗಳೂ ಏರುತ್ತಿವೆ. ಈ ತೀವ್ರ ಆರ್ಥಿಕ ಬಿಕ್ಕಟ್ಟೇ ಮುಬಾರಕ್ ಆಳ್ವಿಕೆಗೆ ಎದುರಾಗಿ ಬಂದಿರುವ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯನ್ನು ನಿರ್ಮಿಸಿ ಕೊಟ್ಟದ್ದು.

ಹಲವು ಪ್ರವಾಹಗಳ ಸಮ್ಮಿಲನ

ಅಸಂತೃಪ್ತಿಗೆ ಇಸ್ಲಾಮೀ ತೀವ್ರಗಾಮಿಗಳು ಕಾರಣ ಎಂದು ಮುಬಾರಕ್ ಆಳ್ವಿಕೆ ದೂರುತ್ತಿದೆ. ಪಾಶ್ಚಿಮಾತ್ಯ ಮಾಧ್ಯಮಗಳಿಗೆ ತಹರೀರ್ ಚೌಕ ಪ್ರಜಾಪ್ರಭುತ್ವಕ್ಕಾಗಿ ಸ್ವಯಂಸ್ಫೂರ್ತ ಆಂದೋಲನದ ಸಂಕೇತ. ಇವೆರಡೂ ಸರಿಯಲ್ಲ. ಹಲವು ಪ್ರವಾಹಗಳ ಸಮ್ಮಿಳನದಿಂದಾಗಿ ಇದು ಒಂದು ನೈಜ ಸಾಮೂಹಿಕ ಬಂಡಾಯವಾಗಿದೆ. ಮಹಲ್ಲಾ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲವಾಗಿ ಯುವಜನರು ಸೇರಿರುವ ಎಪ್ರಿಲ್ 6 ಸಮಿತಿ 2008ರಲ್ಲಿ ಚಿಮ್ಮಿ ಬಂತು. ಈ ಗುಂಪು ಈ ಆಂದೋಲನದಲ್ಲಿ ಜನರನ್ನು ಅಣಿನೆರೆಸುವಲ್ಲಿ ನೇತೃತ್ವದ ಪಾತ್ರ ವಹಿಸಿದೆ. ಕಾರ್ಮಿಕ ವರ್ಗದ ಹೋರಾಟ ಮತ್ತು ಸಾರ್ವತ್ರಿಕ ಪ್ರಜಾಪ್ರಭುತ್ವ ಆಂದೋಲನದೊಡನೆ ಕೊಂಡಿಗೆ ಈ ಸಮಿತಿ ಉದಾಹರಣೆ. ಮತ್ತೊಂದು ಪ್ರಭಾವೀ ಸಮಿತಿಯ ಹೆಸರು 'ನಾವೆಲ್ಲ ಖಾಲಿದ್ ಸೈದ್'. ಇದು ಪೋಲೀಸ್ ಚಿತ್ರಹಿಂಸೆಯಿಂದ ಸತ್ತ ಒಬ್ಬ ಯುವಕನ ನೆನಪಿನಲ್ಲಿ ರಚಿಸಿದ ಸಮಿತಿ, ಸರ್ವಾಧಿಕಾರದ ವಿರುದ್ಧ ಮತ್ತು ನಾಗರಿಕ ಸ್ವಾತಂತ್ರ್ಯಗಳಿಗಾಗಿ ಆಂದೋಲನವನ್ನು ಪ್ರತಿನಿಧಿಸುವಂತದ್ದು. ಅದೇ ರೀತಿ ಈ ಒಟ್ಟು ಆಂದೋಲನ ವೃತ್ತಿಪರರು, ಬುದ್ಧಿಜೀವಿಗಳು ಮತ್ತು ಬಿಳಿ ಕಾಲರ್ ನೌಕರರೂ ಸೇರಿದಂತೆ ಮಧ್ಯಮ ವರ್ಗಗಳ ವಿವಿಧ ವಿಭಾಗಗಳಿಂದಲೂ ಶಕ್ತಿ ಪಡೆದಿದೆ. ಈ ಆಂದೋಲನದ ಘೋಷಣೆಗಳು ಮತ್ತು ಬೇಡಿಕೆಗಳು ನಿಶ್ಚಿತವಾಗಿಯೂ ಧರ್ಮಾತೀತವಾದವುಗಳು. 'ಕ್ರೋಧದ ದಿನ' ಎಂದು ಹೆಸರಿಸಿದ ಜನವರಿ 25ರ ಕರೆಯ ಮೊದಲ ಬೇಡಿಕೆ ಕನಿಷ್ಟ ಕೂಲಿಯನ್ನು ತಿಂಗಳಿಗೆ 1200 ಈಜಿಪ್ಟಿನ ಪೌಂಡಿಗೆ ಹೆಚ್ಚಿಸಬೇಕು ಮತ್ತು ನಿರುದ್ಯೋಗಿಗಳಿಗೆ ಸಬ್ಸಿಡಿ ಕೊಡಬೇಕು ಎಂಬುದು. ಇತರ ಬೇಡಿಕೆಗಳೆಂದರೆ ತುರ್ತು ಪರಿಸ್ಥಿತಿಯ ಹಂತದ ಅಂತ್ಯ, ಬಂಧಿತರ ಬಿಡುಗಡೆ, ಸಂಸತ್ತಿನ ವಿಸರ್ಜನೆ ಮತ್ತು ಸಂವಿಧಾನದಲ್ಲಿ ಬದಲಾವಣೆ. ಅತಿ ದೊಡ್ಡ ವಿರೋಧ ಪಕ್ಷವಾದ 'ಮುಸ್ಲಿಂ ಬ್ರದರ್‌ಹುಡ್' ಈ ಆಂದೋಲನವನ್ನು ಆರಂಭಿಸಲಿಲ್ಲ, ನಂತರ ಸೇರಿಕೊಂಡಿದೆಯಷ್ಟೇ. ಅದು ಈಗ ರಚನೆಗೊಂಡಿರುವ 'ರಾಷ್ಟ್ರೀಯ ಬದಲಾವಣೆಯ ವೇದಿಕೆ'ಯ ಅಂಗ ಸಂಘಟನೆಗಳಲ್ಲಿ ಒಂದು. ಈ ವೇದಿಕೆಯಲ್ಲಿ ಇತರ ಧರ್ಮಾತೀತ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳೂ ಸೇರಿವೆ. ಈ ಎಲ್ಲ ಗುಂಪುಗಳು ಒಟ್ಟಾಗಿಯೇ ಮಹಮ್ಮದ್ ಎಲ್ ಬರ್ದಾಯಿ ಯವರನ್ನು ರಾಜಕೀಯ ಬದಲಾವಣೆಯ ಮಾತುಕತೆಗಾಗಿ ರಚಿಸಿದ ಸಮಿತಿಯ ಮುಖ್ಯಸ್ಥರಾಗಿ ಪ್ರಸ್ತುತ ಪಡಿಸಲು ನಿರ್ಧರಿಸಿದ್ದು.

ಈ ನಡುವೆ ಹೊಸದಾಗಿ ನೇಮಕಗೊಂಡ ಉಪಾಧ್ಯಕ್ಷ ಸುಲೇಮಾನ್ ವಿರೋಧ ಪಕ್ಷಗಳು ಮತ್ತು ಗುಂಪುಗಳೊಂದಿಗೆ ಆರಂಭಿಸಿದ ಮಾತುಕತೆಗಳಲ್ಲಿ



ಪ್ರಗತಿಯಾಗಿಲ್ಲ, ಮುಬಾರಕ್‌ರನ್ನು ತೆಗೆಯಬೇಕು ಎಂಬ ಬೇಡಿಕೆಯನ್ನು ಒಪ್ಪಲು ಆಡಳಿತ ನಿರಾಕರಿಸಿದ್ದೇ ಇದಕ್ಕೆ ಕಾರಣ. ಆಂದೋಲನದ ರಾಜಕೀಯ ಬೇಡಿಕೆಗಳನ್ನು ತಟಸ್ಥಗೊಳಿಸುವ ಪ್ರಯತ್ನದಲ್ಲಿ ನೌಕರರ ಸಂಬಳಗಳಲ್ಲಿ ಹೆಚ್ಚಳ, ಬ್ರೆಡ್ ಬೆಲೆಗಳಲ್ಲಿ ಇಳಿಕೆ ಮುಂತಾದ ರಿಯಾಯಿತಿಗಳನ್ನು ಸರಕಾರ ಪ್ರಕಟಿಸಿದೆ.

ಛಾಪುಗಳು ಹಲವು

ಈಜಿಪ್ಟಿನ ಘಟನೆಗಳ ಬಗ್ಗೆ ಉರ್ದು ಮಾಧ್ಯಮಗಳ ಕೆಲವು ವಿಭಾಗಗಳ ನಡುವೆ ಮತ್ತು ಭಾರತದಲ್ಲಿನ ಕೆಲವು ಮುಸ್ಲಿಂ ಧಾರ್ಮಿಕ ವ್ಯಕ್ತಿಗಳಲ್ಲಿ ಸ್ವಲ್ಪ ಅತಿಶಯವಾದ ಸ್ಪಂದನೆ ಕಂಡು ಬಂದಿದೆ. ಉರ್ದು ಪತ್ರಿಕೆಗಳಲ್ಲಿ ಕೆಲವು ಅಂಕಣಗಾರರು ಈಜಿಪ್ಟಿನ ಬಂಡಾಯ ಪ್ರಥಮತಃ ಮುಬಾರಕರನ್ನು ತೊಲಗಿಸುವ ಅಮೆರಿಕನ್ ಪ್ರಾಯೋಜಿತ ಕ್ರಿಯೆ ಎಂದು ಕಂಡಿದ್ದಾರೆ. ಒಬಾಮ ತಕ್ಷಣವೇ ಪರಿವರ್ತನೆಗೆ ಕರೆ ನೀಡಿರುವುದು ಇದಕ್ಕೆ ಸಾಕ್ಷಿ ಎಂದು ಅವರು ತೋರಿಸುತ್ತಾರೆ. ಅಮೆರಿಕನ್ ಆಡಳಿತ ಜನತೆಯ ಉತ್ಕ್ರಾಂತಿಯ ಪೂರ್ಣ ಒಂದು ವಾರದ ನಂತರ ತನ್ನ ವಿಧೇಯ ಏಜೆಂಟ್ ಮುಬಾರಕ್ ಕೆಳಗಿಳಿಯಬೇಕು ಎಂದು ಹೇಳಿ ಇನ್ನಷ್ಟು ಅನಾಹುತಗಳಾಗದಂತೆ ಕ್ರಮಗಳನ್ನು ಕೈಗೊಳ್ಳಲೇ ಬೇಕಾಗಿ ಬಂದಿದೆ ಎಂಬುದನ್ನು ಅವರು ಉಪೇಕ್ಷಿಸುತ್ತಾರೆ. ತನ್ನ ಪ್ರಭಾವವನ್ನು ಉಳಿಸಿಕೊಳ್ಳಲು ಅದಕ್ಕೆ ಮುಬಾರಕ್ ನಂತಹುದೇ ಗುರಿಗಳನ್ನು, ವಿದೇಶಾಂಗ ನೀತಿಯನ್ನು ಅನುಸರಿಸುವ ಒಂದು ಹೊಸ ಆಡಳಿತವನ್ನು ಸೇನಾಪಡೆಗಳ ಸಹಾಯದಿಂದ ತರುವುದಲ್ಲದೆ ಬೇರೆ ದಾರಿ ಕಾಣದಾಗಿತ್ತು. ಹೀಗೆ ಈಜಿಪ್ಟಿನ ಜನತೆಯ ಜನವರಿ 25ರ ಉತ್ಕ್ರಾಂತಿ ಒಂದು ಅಮೆರಿಕನ್ ಹುನ್ನಾರ ಎಂಬುದು ತಿಕ್ಕಲುತನವಷ್ಟೇ. ಕೆಲವು ಧಾರ್ಮಿಕ ಪುರೋಹಿತರು ಮುಬಾರಕ್ ಸಮರ್ಥನೆಗೆ ಮುಂದಾಗಲು ಇನ್ನೊಂದು ಕಾರಣ ಸೌದಿ ಅರೇಬಿಯಾದ ಪ್ರಭಾವ. ಸೌದಿ ರಾಜಪ್ರಭುತ್ವ ಅರಬ್ ಜನತೆಯ ಬಂಡಾಯದಿಂದ ಸ್ಥಂಬೀಭೂತವಾಗಿದೆ. ಇಸ್ಲಾಮೀ ಮೂಲಭೂತವಾದ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಅಡಿಯಾಳುತನದ ಮಿಶ್ರಣ ಸರ್ವಾಧಿಕಾರಶಾಹಿ ಆಳ್ವಿಕೆಯ ಲಕ್ಷಣವಾಗಿದ್ದು ಅದಕ್ಕೆ ಸವಾಲು ಬಂದಿದೆ. ಈಜಿಪ್ಟಿನ ಘಟನೆಗಳು ಮುದ ಕೊಡುವಂತದ್ದು. ಏಕೆಂದರೆ ಇದು ಇಸ್ಲಾಮಿನೊಂದಿಗೆ ಸಾಮರಸ್ಯದಿಂದ ಸಹ-ಅಸ್ತಿತ್ವ ಹೊಂದಬಹುದಾದ ಒಂದು ಬಲಿಷ್ಠ ಪ್ರಜಾಸತ್ತಾತ್ಮಕ ಮತ್ತು ಧರ್ಮಾತೀತ ಶಕ್ತಿಗಳು ಮೂಡಿ ಬರುತ್ತಿರುವುದನ್ನು ಸೂಚಿಸುತ್ತದೆ.

'ಮನುಷ್ಯರು ತಮ್ಮ ಇತಿಹಾಸವನ್ನು ತಾವೇ ನಿರ್ಮಿಸುತ್ತಾರೆ, ಆದರೆ ಅದನ್ನು ತಮಗೆ ಇಷ್ಟವಾದಂತೆ ಮಾಡುವುದಿಲ್ಲ; ಅವರು ಅದನ್ನು ತಾವೇ ಆರಿಸಿದ ಪರಿಸ್ಥಿತಿಗಳಲ್ಲಿ ಮಾಡುವುದಿಲ್ಲ, ಆದರೆ ನೇರವಾಗಿ ಎದುರಾಗುವ, ತಮ್ಮ ಮುಂದಿರುವ, ಗತಕಾಲದಿಂದ ಸಾಗಿ ಬಂದ ಪರಿಸ್ಥಿತಿಗಳಲ್ಲಿ ಮಾಡುತ್ತಾರೆ' ಎಂದಿದ್ದಾರೆ ಮಾರ್ಕ್ಸ್. ಈಜಿಪ್ಟಿನ ಜನತೆ ಇತಿಹಾಸವನ್ನು ನಿರ್ಮಿಸುತ್ತಿದ್ದಾರೆ, ಆದರೆ ಆ ಇತಿಹಾಸವನ್ನು ಗತಕಾಲದ ಚಾರಿತ್ರಿಕ ಘಟನೆಗಳು ಮತ್ತು ಪರಿಸ್ಥಿತಿಗಳ ಕಟ್ಟುಪಾಡುಗಳಿಗೊಳಗಾಗಿ ನಿರ್ಮಿಸುತ್ತಿದ್ದಾರೆ. ಈಜಿಪ್ಟಿಗೆ ವಸಾಹತುಶಾಹಿ-ವಿರೋಧಿ ಹೋರಾಟಗಳ, ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯವಾದದ ಮತ್ತು ಧರ್ಮಾತೀತತೆಯ ಒಂದು ಚರಿತ್ರೆಯಿದೆ. ಅದಕ್ಕೆ ಕಾರ್ಮಿಕ ವರ್ಗದ ಆಂದೋಲನದ ಅಮಾನುಷ ದಮನದ, ಸಭೆ ಸೇರುವ ಮತ್ತು ಸಂಘಟಿಸುವ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ತೀವ್ರ ಪರಿಮಿತಿಗಳ ಚರಿತ್ರೆಯೂ ಇದೆ. ಅದಕ್ಕೆ ಕಳೆದ ನಾಲ್ಕು ದಶಕಗಳಲ್ಲಿ ಮಧ್ಯ ಪ್ರಾಚ್ಯದಲ್ಲಿ ಅಮೆರಿಕನ್ ಸಮರ ತಂತ್ರದ ಅಡಿಯಾಳು ಏಜೆಂಟಾಗಿರುವ ಇತಿಹಾಸವೂ ಇದೆ. ಈಜಿಪ್ಟಿನ ಜನತೆ ನವ-ಉದಾರವಾದಿ ನೀತಿಗಳ ಮೂಲಕ ತಮ್ಮ ಬದುಕಿನ ಮೇಲೆ ಬಂದಿರುವ ದಾಳಿಗಳ ಅನುಭವವೂ ಇದೆ. ಜನವರಿ 25ರ ಆಂದೋಲನ ಈ ಎಲ್ಲದರ ಛಾಪುಗಳನ್ನು ಹೊಂದಿದೆ. ತಮ್ಮ ಭವಿಷ್ಯವನ್ನು ಬದಲಿಸುವ ಹೋರಾಟವನ್ನು ಈಜಿಪ್ಟಿನ ಜನತೆ ಶ್ರದ್ಧಾಪೂರ್ವಕವಾಗಿ ಆರಂಭಿಸಿದ್ದಾರೆ. ಆದರೆ ಈ ಜನತಾ ಆಂದೋಲನ ಬಹಳ ದೂರ ಸಾಗಲು ಸಿದ್ಧವಾಗಿರಬೇಕು. ಕ್ರಾಂತಿಕಾರಿ ಬದಲಾವಣೆ ಸಾಧ್ಯವಾಗದಿದ್ದರೂ ಹಳೆಯ ವ್ಯವಸ್ಥೆಗೆ ಹಿಂದಿರುಗಲೂ ಸಾಧ್ಯವಿಲ್ಲ. ಎಷ್ಟು ಬದಲಾವಣೆ ಯನ್ನು ಗಳಿಸಿಕೊಳ್ಳಬಹುದು ಎಂಬುದು ಐಕ್ಯ ಆಂದೋಲನದ ಶಕ್ತಿ ಮತ್ತು ಚೈತನ್ಯವನ್ನು ಅವಲಂಬಿಸಿದೆ. ○



ಅಮೆರಿಕಾದ ಆತಂಕ

ಈಜಿಪ್ಟಿನಲ್ಲಿ ಜನತೆಯ ಬಂಡಾಯ ಒಬಾಮ ಆಡಳಿತವನ್ನು ಸಂಪೂರ್ಣವಾಗಿ ಚಕಿತಗೊಳಿಸಿದೆ. ವಿಕಿಲೀಕ್ಸ್ ಹೊರಗೆಡಹಿದ ಈಜಿಪ್ಟಿನಲ್ಲಿರುವ ಅಮೆರಿಕನ್ ರಾಜತಾಂತ್ರಿಕರ ಕೇಬಲ್ ಸಂದೇಶಗಳಲ್ಲಿ ಮುಬಾರಕ್ ಆಳ್ವಿಕೆಯ ವಿಶ್ವಾಸಾರ್ಹತೆಯ ಬಗ್ಗೆ ಮುಬಾರಕ್ ಸುತ್ತ ಇರುವ ಆಪ್ತಕೂಟ ಶೇಖರಿಸಿದ ಸಂಪತ್ತಿನ ಬಗ್ಗೆ ಶಂಕೆ ಹೆಚ್ಚುತ್ತಿದ್ದರೂ ಅಮೆರಿಕನ್ ಸಾಮರಿಕ ಸಂಸ್ಥೆಗಳಿಗೆ ಏನು ಬರಲಿದೆ ಎಂಬ ಸುಳಿವೂ ಸಿಕ್ಕಿರಲಿಲ್ಲ. ಒಂದು ವಾರದ ಸಾಮೂಹಿಕ ಪ್ರತಿಭಟನೆಗಳ ನಂತರ ಅಮೆರಿಕಾ ಒಂದು ಸಂಕ್ರಮಣ ವ್ಯವಸ್ಥೆಗೆ ಮುಬಾರಕ್ ದಾರಿ ಮಾಡಿಕೊಡಬೇಕು ಎಂದು ನಿರ್ಧರಿಸಿತು. ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಒಂದು 'ವ್ಯವಸ್ಥಿತ ಪರಿವರ್ತನೆ' ಬೇಕಾಗಿದೆ. ಅಂದರೆ ಅದರ ಹಿತಾಸಕ್ತಿಗಳನ್ನು ರಕ್ಷಿಸುವ, ಇಸ್ರೇಲಿನೊಂದಿಗೆ ಈಜಿಪ್ಟಿನ ಸಂಬಂಧಗಳನ್ನು ಉಳಿಸಿಕೊಳ್ಳುವಂತಹ ಪರಿವರ್ತನೆ. ಈ ದೃಷ್ಟಿಯಿಂದ ಅದು ಕುಖ್ಯಾತ ಗುಪ್ತಚರ ಮುಖ್ಯಸ್ಥ ಮತ್ತು ಈಗ ಉಪಾಧ್ಯಕ್ಷರಾಗಿರುವ ಸುಲೇಮಾನ್‌ರನ್ನು ಸಂಕ್ರಮಣ ಸರಕಾರದ ಮುಖ್ಯಸ್ಥರಾಗಿ ಮಾಡಲು ಪರದಾಡುತ್ತಿದೆ. ಆದರೆ, ಇದುವರೆಗೆ ಮುಬಾರಕ್ ಸೆಪ್ಟೆಂಬರಿನಲ್ಲಿ ತನ್ನ ಅಧಿಕಾರಾವಧಿ ಮುಗಿಸುವ ವರೆಗೆ ಅಧಿಕಾರದಿಂದ ಇಳಿಯಲು ನಿರಾಕರಿಸಿದ್ದಾರೆ.

ಟ್ಯುನೀಸಿಯಾಕ್ಕೂ ಈಜಿಪ್ಟಿಗೂ ವ್ಯತ್ಯಾಸವಿದೆ. ಈಜಿಪ್ಟಿನಲ್ಲಿ ಅಮೆರಿಕಾ ಮತ್ತು ಇಸ್ರೇಲಿಗೆ ಕಳಕೊಳ್ಳುವಂತದ್ದು ಬಹಳ ಇದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಈಜಿಪ್ಟಿಗೆ ಹಾಕಿಕೊಟ್ಟ ದಾರಿಯಲ್ಲೇ ಅದು ಸಾಗುವಂತೆ ಮಾಡಲು ಅವರು ಏನು ಬೇಕಾದರೂ ಮಾಡುತ್ತಾರೆ. ಇದನ್ನು ಸಾಧ್ಯವಾಗಿಸಲು ಅಮೆರಿಕಾ ಸಂಯಕ್ತ ಸಂಸ್ಥಾನ ಈಜಿಪ್ಟಿನ ಆಳುವ ವರ್ಗಗಳನ್ನು ಮತ್ತು ಸೇನೆಯನ್ನು ಬಹಳವಾಗಿ ನಂಬಿದೆ.

ಕಾರ್ಮಿಕ ಸಂಘದ ಹಕ್ಕಿಗಾಗಿ, ಅಕ್ರಮ ಬೀಗಮುದ್ರೆ ತೆರವಿಗಾಗಿ

ಬೊಮ್ಮಸಂದ್ರ ಕೈಗಾರಿಕಾ ಕಾರ್ಮಿಕರ ಮುಷ್ಕರ

ಕಾರ್ಮಿಕರು ತಾವು ಸಂಘ ರಚಿಸಿಕೊಳ್ಳುವ ಪ್ರಜಾಸತ್ತಾತ್ಮಕ ಹಕ್ಕನ್ನು ಕೂಡ ಮಾಲಿಕ ವರ್ಗ ಸಹಿಸುವುದಿಲ್ಲ ಎಂದರೆ ಅರ್ಥವೇನು? ಈ ನ್ಯಾಯಬದ್ಧ ಹಕ್ಕಿಗಾಗಿ ಮೊನ್ನೆ ಬೆಂಗಳೂರಿನ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಇಡೀ ಪ್ರದೇಸದ ಕಾರ್ಖಾನೆಗಳ ಬಂದ್ ಯಶಸ್ವಿ ಮುಷ್ಕರ ನಡೆದಿದೆ. ಸಂಘಟನೆಗಳ ಗಡಿಗಳನ್ನು ಮೀರಿ ಕಾರ್ಮಿಕ ವರ್ಗ ಮುಷ್ಕರದ ಕರೆಗೆ ಸ್ಪಂದಿಸಿರುವುದು ಇಲ್ಲಿನ ವಿಶೇಷ



ಜಗತ್ತಿನ ಪ್ರತಿಷ್ಟಿತ ಸಾಫ್ಟ್‌ವೇರ್ ಉದ್ದಿಮೆ, ಬಹುರಾಷ್ಟ್ರೀಯ ಬಂಡವಾಳದ ಕೇಂದ್ರವಾದ ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿಯ ಸೆರಗಿನ ಅಂಚಿನಂತಿರುವ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿನ ಶೇ.90ರಷ್ಟು ಕಾರ್ಮಿಕರು 2011, ಜನವರಿ 29ರಂದು ಐತಿಹಾಸಿಕ ಒಂದು ದಿನದ ಮುಷ್ಕರವನ್ನು ನಡೆಸಿದ್ದಾರೆ. ಆನೇಕಲ್ ತಾಲೂಕಿನ ಈ ಪ್ರದೇಶದಲ್ಲಿ ಇದೇ ಮೊದಲ ಬಾರಿಗೆ ಸಿಐಟಿಯು ಸಂಘಟನೆ ಇಂತಹ ಒಂದು ಐತಿಹಾಸಿಕ ಮುಷ್ಕರಕ್ಕೆ ಕರೆ ನೀಡಿತ್ತು.



ಪ್ರತಿಭಟನೆಯನ್ನುದ್ದೇಶಿಸಿ ಕೆ.ಎನ್.ಉಮೇಶ್

ಅಕ್ರಮ ದಾರಿಗಳು

ಈ ಪ್ರದೇಶದ ವಿವಿಧ ಕಾರ್ಖಾನೆಗಳಲ್ಲಿ ಕಾರ್ಮಿಕರು ಸಂಘ ಕಟ್ಟಲು ಮುಂದಾದಾಗ ಗೂಂಡಾಗಿರಿ ನಡೆಸುವ, ಸಂಘಗಳನ್ನು ಮಾನ್ಯ ಮಾಡದ, ಮುಖಂಡರನ್ನು ಬಲಿಪಶುಮಾಡುವ ಬೆಳವಣಿಗೆ ನಿತ್ಯದ ಮಾತಾಗಿತ್ತು. ಅದಕ್ಕಾಗಿ ಮಾಲೀಕರು ಹಿಡಿಯುದ ಅಕ್ರಮ ದಾರಿಗಳು ಒಂದೆರಡಲ್ಲ, ಇದಕ್ಕಾಗಿ ರಕ್ಷಣಾ ವೇದಿಕೆ ಹೆಸರಿನ ಸ್ಥಳೀಯ ಗೂಂಡಾಪಡೆಗಳನ್ನು ಸಹ ಸಾಕಿ ಸಲಹುತ್ತಿದ್ದಾರೆ. ಇದನ್ನು ಕೇಳುವವರೇ ಇಲ್ಲ ಎಂಬಂತೆ ಮಾಲೀಕರು ತಾವು ನಡೆದದ್ದೇ ದಾರಿ ಎಂದು ಹೊರಟಿದ್ದರು. ಸ್ಥಳೀಯ ಶಾಸಕರು, ಪೋಲೀಸರು, ಕಾರ್ಮಿಕ ಇಲಾಖೆ ಹಾಗೂ ರಾಜ್ಯ ಸರ್ಕಾರ ಎಲ್ಲವೂ ಇರುವುದು ಅವರುಗಳ ಸೇವೆಗೆ ಎಂಬಂತೆ ವರ್ತಿಸುತ್ತಿದ್ದರು. ಈ ನಡುವೆ ಪೆನೆಸ್ಟೊ ಬಿಲ್ಡಿಂಗ್ ಸಿಸ್ಟಮ್ಸ್‌ನ ಕಾರ್ಮಿಕರು ಸಂಘ ಕಟ್ಟಿ ಸಿಐಟಿಯುಗೆ ಸೇರ್ಪಡೆಯಾಗಿ ಹಕ್ಕುಗಳನ್ನು ಕೇಳಲು ಮುಂದಾದಾಗ ಮೊದಲಿಗೆ ಸಿಐಟಿಯು ಬೇಡ ಎಂದ ಮಾಲೀಕ ನಂತರ ಸಂಘವೇ ಬೇಡವೆನ್ನಲು ಮುಂದಾದಾಗ, ಕಾರ್ಮಿಕರು ಸಿಐಟಿಯು ಸೇರ್ಪಡೆ ಆಗಿ ಸಂಘ ಕಟ್ಟಲು ದೃಡವಾಗಿ ನಿಂತರು. ಅದನ್ನು ಸಹಿಸದ ಮಾಲೀಕ ಕಾರ್ಖಾನೆಗೆ ಅಕ್ರಮ ಬೀಗಮುದ್ರೆ ಘೋಷಿಸಿ, ಕಾರ್ಮಿಕರನ್ನು ಬೀದಿ ಪಾಲು ಮಾಡಿ, ಕನಕಪುರ ರಸ್ತೆಯ ಯಲಚೇನಹಳ್ಳಿ ಬಳಿ ನೂತನ ಘಟಕ ಆರಂಭಿಸಿ ಗುತ್ತಿಗೆ ಕಾರ್ಮಿಕರು ಮತ್ತು ಟ್ರೈನಿ, ಅಪ್ರೆಂಟೀಸ್‌ಗಳನ್ನು ಒಳಗೊಂಡು ಉತ್ಪಾದನೆ ಮಾಡಲು ಮುಂದಾಗಿದ್ದಾರೆ. ಅಂತೆಯೇ ಗಿರಣಿ ಮಿಲ್, ಯಂತ್ರೋಪಕರಣಗಳನ್ನು ತಯಾರು ಮಾಡುವ ಮಿಲ್‌ಟೆಕ್ ಮಾಲೀಕನು ಸಹ ಪೆನೆಸ್ಟೊಗಿಂತ ನಾವೇನು ಕಡಿಮೆಯಿಲ್ಲ ಎಂಬಂತೆ ಸಂಘ ಕಟ್ಟಲು ಮುಂದಾದ ಕಾರ್ಯಕರ್ತನನ್ನು ಅಪಹರಿಸಿ ಕೊಲೆ ಬೆದರಿಕೆ ಹಾಕಿ, ರಾಜಿನಾಮೆ ಪತ್ರ ಬರೆಸಿಕೊಂಡು ಸಂಘ ಮುರಿಯಲು ಮುಂದಾದರು. ಅಲ್ಲದೆ, ಸಂಘ ಕಟ್ಟಬೇಡಿ ಎಂದು ಸಿಐಟಿಯು ತಾಲೂಕು ಅಧ್ಯಕ್ಷರಿಗೆ 2 ಲಕ್ಷ ರೂ.ಗಳ ಲಂಚ ನೀಡಲು ಮುಂದಾಗಿ ಛೀಮಾರಿ ಹಾಕಿಸಿ ಕೊಂಡ, ಮಾಲೀಕ, ಇಬ್ಬರು ಮುಖಂಡರನ್ನು ವರ್ಗಾವಣೆ ಮಾಡಲು ಮುಂದಾದದ್ದನ್ನು ಕಾರ್ಮಿಕರು ಪ್ರತಿಭಟಿಸಿದರೆಂದು ನೆಪ ಮಾಡಿ ಅಕ್ರಮ ಬೀಗ ಮುದ್ರೆ ಘೋಷಿಸಿ ಕಾರ್ಮಿಕರನ್ನು ಬೀದಿ ಪಾಲು ಮಾಡಿದ್ದಲ್ಲದೆ, ರಕ್ಷಣಾ ವೇದಿಕೆ ಹೆಸರಿನ ಸ್ಥಳೀಯ ಗೂಂಡಾ ಪಡೆಗಳನ್ನು ಬಳಸಿ ಕಾರ್ಮಿಕರನ್ನು ಬೆದರಿಸಲು ಬಳಸುತ್ತಿದ್ದಾರೆ.

ಭಾರತ್ ಟಿಶ್ಯೂಸ್‌ನ ಮಾಲೀಕರು ಕಾರ್ಮಿಕರನ್ನು ಪ್ರತಿನಿಧಿಸುತ್ತಿದ್ದ ಬಿಎಂಎಸ್ ಸಂಘವನ್ನು ಬಳಸಿಕೊಂಡು ಅಕ್ರಮ ಬೀಗಮುದ್ರೆ ಘೋಷಿಸಿ ಕಾರ್ಮಿಕರನ್ನು ಬೀದಿ ಪಾಲು ಮಾಡಿದರು. ಇದನ್ನು ಪ್ರತಿಭಟಿಸಿ ಕಾರ್ಮಿಕರು ಸ್ವತಂತ್ರ ಸಂಘ ಕಟ್ಟಿಕೊಂಡು 3 ತಿಂಗಳಿಂದ ಹೋರಾಟದಲ್ಲಿ ನಿರತರಾಗಿದ್ದಾರೆ. ಆಕ್ಸ್‌ಫರ್ಡ್ ರಬ್ಬರ್ ಕಾರ್ಖಾನೆಯ ಕಾರ್ಮಿಕರು ಸಂಘ ಕಟ್ಟಲು ಮುಂದಾದಾಗ ಪ್ರಾಣ ಬೇಕಾದರೂ ಬಿಟ್ಟೇನು ಸಿಐಟಿಯು ಸಂಘ ಒಪ್ಪುವುದಿಲ್ಲ ಎಂದು ಪಟ್ಟು ಹಿಡಿದ ಮಾಲೀಕ ವೇತನ ಚೀಟಿ ನೀಡದೇ ವೇತನ ನೀಡುವ ಅವನ ಹತ್ತಾರು ವರ್ಷಗಳ ಚಾಳಿಯನ್ನು ಕಾರ್ಮಿಕರು ಪ್ರತಿಭಟಿಸಿದಾಗ ಕಾರ್ಮಿಕ ಅಧಿಕಾರಿಗಳ ಮಧ್ಯಪ್ರವೇಶದಿಂದಾಗಿ ವೇತನ ಚೀಟಿ ನೀಡಬೇಕಾಗಿ ಬಂದಿದೆ. ಸಿಐಟಿಯುವಿನೊಂದಿಗೆ 2 ವೇತನ ಒಪ್ಪಂದಗಳನ್ನು ಮಾಡಿದ್ದರೂ ಸಹ ವೇತನ ಒಪ್ಪಂದದ ಅವಧಿ ಮುಗಿದ ಮೇಲೆ ಬೇಡಿಕೆ ಪಟ್ಟಿ ಸಲ್ಲಿಸಿದ್ದಕ್ಕೆ ಏಕಾಏಕಿಯಾಗಿ ಬೀಗ ಮುದ್ರೆ ಘೋಷಿಸಿ ತಿಂಗಳುಗಟ್ಟಲೆ ಕಾರ್ಮಿಕರನ್ನು ಬೀದಿ ಪಾಲು ಮಾಡಿದ್ದ ಸೂರಜ್ ಡೈಮಂಡ್ ಮಾಲೀಕರು - ಕಾರ್ಮಿಕರ ಹೋರಾಟದ ಪರಿಣಾಮವಾಗಿ ಬೀಗಮುದ್ರೆ ತೆರವುಗೊಳಿಸಿದ್ದಾರೆ. ಆದರೆ ಸುಳ್ಳು ಆಪಾದನೆ ಮಾಡಿ ಮುಂಚೂಣಿ ಕಾರ್ಯಕರ್ತರನ್ನು ಅಮಾನತ್ತು ಮಾಡಿ ಪ್ರಮುಖ ಕಾರ್ಯಕರ್ತರಿಗೆ ಕೆಲಸ ನೀಡದೇ ಐಡಲ್ ವರ್ಕ್ ಮಾಡಿಸುತ್ತಿದ್ದಾರೆ. ಬೇಡಿಕೆ ಪಟ್ಟಿ ಬಗ್ಗೆ ಇದುವರೆಗೆ ಮಾತುಕತೆಗೆ ಮುಂದಾಗಿಲ್ಲ.

ಮನವಿ ಮೇಲೆ ಮನವಿ

ಈ ಮೇಲಿನ ಅಕ್ರಮ ಬೀಗ ಮುದ್ರೆ ತೆರವುಗೊಳಿಸಬೇಕೆಂದು ಒತ್ತಾಯಿಸಿ ಹಾಗೂ ಇಡೀ ಪ್ರದೇಶದಲ್ಲಿನ ಕಾರ್ಮಿಕ ಸಂಘದ ಹಕ್ಕಿಗಾಗಿ ಹಾಗೂ ಮಿಲ್‌ಟೆಕ್ ಮಾಲೀಕರನ ಬಂಧನಕ್ಕಾಗಿ ಒಂದು ದಿನದ ಮುಷ್ಕರನ್ನು ನಡೆಸಲಾಯಿತು. ಇದಕ್ಕೂ ಮೊದಲು ಜನವರಿ 6ರಂದು ಪ್ರತಿಭಟನಾ ಮೆರವಣಿಗೆ ನಡೆಸಿ, ಬೊಮ್ಮಸಂದ್ರ ಕೈಗಾರಿಕೆಗಳ ಸಂಘಕ್ಕೆ ಮನವಿ ನೀಡಿ ತಮ್ಮ ಸದಸ್ಯರಿಗೆ ಕಾನೂನು ಪಾಲಿಸುವಂತೆ ಸೂಚಿಸಲು ಆಗ್ರಹಿಸಲಾಗಿದೆ. ಸಂಘದ ಅಧ್ಯಕ್ಷರು ಹಾಗೂ ಸ್ಥಳೀಯ ವಿಧಾನಪರಿಷತ್ ಸದಸ್ಯರು ಆದ ಕಾಂಗ್ರೆಸ್‌ನ ಶ್ರೀ ದಯಾನಂದ ರೆಡ್ಡಿಯವರಿಗೆ ಮನವಿ ಸಲ್ಲಿಸಲಾಗಿತ್ತು. ಮಾಲೀಕರ ಸಂಘವಾಗಲಿ ಅಥವಾ ಸರ್ಕಾರವಾಗಲೀ ಯಾವುದೇ ಕ್ರಮ ವಹಿಸದಿದ್ದ ಕಾರಣ 23 ದಿನಗಳ ನಂತರ ಕಾರ್ಮಿಕರು ಮುಷ್ಕರಕ್ಕೆ ಮುಂದಾಗಬೇಕಾಯಿತು. ಮುಷ್ಕರಕ್ಕೆ ಪೂರ್ವಭಾವಿಯಾಗಿ ಜನವರಿ 27ರಂದು ಬೈಕ್ ರ್‍ಯಾಲಿ, 28ರಂದು ಪಂಜಿನ ಮೆರವಣಿಗೆ ನಡೆಸಿ ಪ್ರಚಾರ ನಡೆಸಲಾಗಿತ್ತು. ಮುಷ್ಕರ ವಿಫಲಗೊಳಿಸಲು ಸರ್ಕಾರವು ನಿಯೋಜಿಸಿದ್ದ 400ಕ್ಕೂ ಹೆಚ್ಚು ಪೋಲೀಸರ ಕಾವಲಿನಲ್ಲಿ ಸಾವಿರಾರು ಕಾರ್ಮಿಕರು ಮುಷ್ಕರದ ಅಂಗವಾಗಿ ಬೃಹತ್ ರ್‍ಯಾಲಿ ನಡೆಸಿ ಬಹಿರಂಗ ಸಭೆಯನ್ನು ನಡೆಸಿದ್ದಾರೆ. ರ್‍ಯಾಲಿಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿಸುಂದರಂ, ಜಿಲ್ಲಾ ಅಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಆನೇಕಲ್ ತಾಲೂಕು ಅಧ್ಯಕ್ಷರಾದ ಶಿವರಾಮರೆಡ್ಡಿ, ಪ್ರಧಾನ ಕಾರ್ಯದರ್ಶಿ ಬಿ.ಎನ್.ಮಂಜುನಾಥ್, ಡಿವೈಎಫ್ಐ ಮುಖಂಡರಾದ ಮೋಹನ್ ಹಾಗೂ ಸಿಪಿಐ(ಎಂ)ನ ತಾಲೂಕು ಕಾರ್ಯದರ್ಶಿ ಮಾದೇಶ್ ಮಾತನಾಡಿದರು.

ಸಿಐಟಿಯು ಜಿಲ್ಲಾ ಪದಾಧಿಕಾರಿಗಳಾದ ಮುನಿರಾಜು, ಹನುಮಂತರಾವ್ ಹವಾಲ್ದಾರ್, ಕಾಮರಾಜು ಹಾಗೂ ತಾಲೂಕಿನ ವಿವಿಧ ಕಾರ್ಖಾನೆಗಳ ಸ್ಥಳೀಯ ಮುಖಂಡರು ಮುಷ್ಕರದ ನೇತೃತ್ವ ವಹಿಸಿದ್ದರು. ಕಾರ್ಮಿಕ ಸಂಘದ ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ಮುನ್ನಡೆಸುವ ಉತ್ಸಾಹದೊಂದಿಗೆ ಫೆ.7ರಿಂದ 15ರವರೆಗಿನ ರಾಜ್ಯ ಸಮಿತಿಯ ಕರೆಯ ಪ್ರತಿಭಟನಾ ಆಚರಣೆಯನ್ನು ಯಶಸ್ವಿಗೊಳಿಸುವ ಸಂಕಲ್ಪದೊಂದಿಗೆ ರ್‍ಯಾಲಿಯನ್ನು ಕಾರ್ಮಿಕರು ಮುಕ್ತಾಯಗೊಳಿಸಿದರು.

ವರದಿ: **ಯೋಗೀಶ್.ಬಿ.ಎಂ**

ಕೃಷಿ ಬಜೆಟ್‌ನ ಗಿಮಿಕ್....

ಪುಟ 3 ರಿಂದ

ಕ್ಷೇತ್ರಗಳ ಆಯ-ವ್ಯಯ ಪ್ರಧಾನವಾದ ಬಜೆಟ್‌ನಲ್ಲೇ ಇರಬೇಕಾಗುತ್ತದೆ. ಇದಲ್ಲದ ಕೃಷಿ ಬಜೆಟ್ ಎಂಬುದು ಕೇವಲ ಆಶ್ವಾಸನೆಗಳ ಕಂತೆಯಾಗಿರುತ್ತದೆ. ಅಥವಾ ಮುಂಗಡ ಪತ್ರದ ಪುನರ್ ಉಚ್ಛಾರಣೆಯಾಗುತ್ತದೆ.

ರೈತರನ್ನು ಕಾರ್ಷಿಕರಂಗವನ್ನು ಉಳಿಸುವ ಬಜೆಟ್ ಬಂದಲ್ಲಿ ಸ್ವಾಗತಾರ್ಹ. ಆದರೆ ಇಂದಿನ ಪ್ರಸ್ತಾಪಿತ ಬಜೆಟ್ ತನ್ನ ನೀತಿಗಳನ್ನೇ ವಿರುದ್ಧ ದಿಕ್ಕಿಗೆ ತಿರುಗಿಸುವಂತಹ ಅಂಶಗಳು, ಇದ್ದಲ್ಲಿ ಮಾತ್ರ ಅದು ಗಮನಾರ್ಹವಾಗುತ್ತದೆ. ಆದರೆ ಅಂತಹ ಇಚ್ಛಾಶಕ್ತಿ ಆಳುತ್ತಿರುವ ಬಿಜೆಪಿಗಿಲ್ಲ. ಈಗಲೂ ಕೇಂದ್ರದ ಬಜೆಟ್‌ಗೆ ಮುನ್ನ ಮಂಡಿಸುತ್ತಿರುವ ಬಜೆಟ್ ಪೂರ್ಣ ಬಜೆಟ್ ಅಲ್ಲವೆಂದೂ ಲೇಖಾನುದಾನ ಪಡೆವ ಮಟ್ಟದೆಂದು ಹೇಳುತ್ತಿರುವುದು ಜನ ಕಟ್ಟುತ್ತಿರುವ ಕನಸಿನ ಸೌಧವನ್ನೇ ಒಡೆದುಹಾಕುವಂತಹದ್ದು. ಆದ್ದರಿಂದಲೇ ಭ್ರಷ್ಟಾಚಾರ ಹಗರಣ, ಪಕ್ಷದೊಳಗಿನ ತೀವ್ರ ಜಗಳಗಳ ಭಾರದಿಂದ ಪತನದಂಚಿಗೆ ಬಂದು ನಿಂತಿರುವ ರಾಜ್ಯದ ಬಿಜೆಪಿ ಸರ್ಕಾರ ವಿಧಾನಸಭೆ ವಿಸರ್ಜಿಸಿ ಮಧ್ಯಂತರ ಚುನಾವಣೆಗೆ ಹೋಗಲೇಬೇಕಿರುವ ಯೋಚನೆಯ ಒತ್ತಡದಲ್ಲಿ ಸಿದ್ದಗೊಂಡ ಓಟ್‌ಗಳ ಮೇಲೆ ಕಣ್ಣಿಟ್ಟಿರುವ ಜನಪ್ರಿಯ ಗಿಮಿಕ್ ಇದಾಗಿರುವುದರಲ್ಲಿ ಅನುಮಾನವಿಲ್ಲ. ಇಂತಹ ಕಸರತ್ತುಗಳು ಯಡಿಯೂರಪ್ಪ-ಬಿಜೆಪಿಯನ್ನು ಉಳಿಸಲು ಸಾಧ್ಯವೇ?. ಆದರೆ ಕೃಷಿ-ಕೃಷಿಕರನ್ನಂತೂ ಉಳಿಸುವ ದಿಕ್ಕು ಅಲ್ಲವೇ ಅಲ್ಲ.

ಉತ್ತರ ಕನ್ನಡ

ಉದ್ಯೋಗ ಖಾತ್ರಿ ಕೂಲಿಗಾಗಿ ಧರಣಿ - ಉಪವಾಸ ಸತ್ಯಾಗ್ರಹ

ಮುಂಡಗೋಡ : ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮುಂಡಗೋಡ ತಾಲೂಕ ಘಟಕದ ನೇತೃತ್ವದಲ್ಲಿ ದಿ. 21-1-2011 ರಂದು ಮುಂಡಗೋಡ ನಗರದಲ್ಲಿ ಮೆರವಣಿಗೆ ನಡೆಸಿ ತಾಲೂಕ ಪಂಚಾಯತಗೆ ಮುತ್ತಿಗೆ ಹಾಕಿ ಕಳೆದ ಒಂದು ವರ್ಷದಿಂದ ಕೊಡಬೇಕಾದ ಕೂಲಿ ಕೂಡಲೇ ಪಾವತಿಸುವಂತೆ ಒತ್ತಾಯಿಸಲಾಯಿತು.

ಪಾಳಾ ಗ್ರಾಮ ಸೇರಿದಂತೆ 7-8 ಗ್ರಾಮ ಪಂಚಾಯತಗಳಲ್ಲಿ ಕೂಲಿಕಾರರಿಗೆ ಲಕ್ಷಾಂತರ ರೂಪಾಯಿ ಕೂಲಿಯನ್ನು 10-12 ತಿಂಗಳಿಂದ ನೀಡದೆ ಸತಾಯಿಸುತ್ತಿದ್ದಾರೆ. ಹಲವಾರು ಹಂತದ ಹೋರಾಟ ನಡೆಸಿ ಕೊನೆಗೆ ತಾಲೂಕ ಪಂಚಾಯತ ಕಛೇರಿಗೆ ಮುತ್ತಿಗೆ ಹಾಕಿ ಮುಖ್ಯದ್ವಾರವನ್ನು ಬಂದ್ ಮಾಡಲಾಯಿತು. 5 ದಿನ ನೂರಾರು ಜನರಿಂದ ರಾತ್ರಿ ಹಗಲು ಧರಣಿ ನಡೆದರು ಸೂಕ್ತವಾಗಿ ಆಡಳಿತ ಸ್ಪಂದಿಸದೇ ಇದ್ದಾಗ ಮುಖಂಡರು ಉಪವಾಸ ಮುಷ್ಕರಕ್ಕೆ ಕುಳಿತುಕೊಂಡರು.

ಮೂರು ದಿನಗಳ ಉಪವಾಸದ ನಂತರ ರಾಜ್ಯಮಟ್ಟದ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಕೂಲಿಗಾರರ ಕೂಲಿ ಪಾವತಿಸಲು ಅನುಕೂಲವಾಗುವಂತೆ ಒಂದು ಅಧ್ಯಯನ ವರದಿ ನೀಡಲು ರಾಜ್ಯಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯತ ಅಧಿಕಾರಿಗಳು ಹಾಗೂ ರಾಜ್ಯಮಟ್ಟದ ಕೂಲಿಕಾರರ ಯೂನಿಯನ್ ಪದಾಧಿಕಾರಿಗಳು ಮುಂಡಗೋಡಿಗೆ ಆಗಮಿಸಲು ತೀರ್ಮಾನವಾದ ಮೇಲೆ ಜನವರಿ 28 ರಂದು ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

ಜನವರಿ 21 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಧರಣಿ ಉದ್ಘಾಟಿಸಿದರು. ಕೂಲಿಗಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ. ನಿತ್ಯಾನಂದ ಸ್ವಾಮಿ ಮತ್ತು ಕಾರ್ಯದರ್ಶಿ ಕಾಂ. ಚಂದ್ರಪ್ಪ ಹೊಸ್ಕೇರಿ ಸಮಸ್ಯೆ ಬಗೆಹರಿಸಲು ತೀವ್ರ ಒತ್ತಡವನ್ನು ರಾಜ್ಯ ಮಟ್ಟದ ಅಧಿಕಾರಿಗಳ ಮೇಲೆ ಹಾಕಿ ಸಮಸ್ಯೆ ಬಗೆಹರಿಸಲು ಸಹಕರಿಸಿದರು.

ರಾಜ್ಯ ಸಮಿತಿ ಸದಸ್ಯ ಭೀಮಣ್ಣ ಬೋವಿ, ತಾಲೂಕ ಸಮಿತಿ ಅಧ್ಯಕ್ಷ ಗಣಪತಿ ಯಲವಾಳ, ಹನುಮಂತಪ್ಪ ನ್ಯಾಸರ್ಗಿ, ಬಸಣ್ಣ ಧಾರವಾಡ ಉಪವಾಸ ಮುಷ್ಕರ ಕೈಗೊಂಡಿದ್ದರು.

★



ಮುಂಡಗೋಡು - ರಾತ್ರಿ-ಹಗಲು ಉಪವಾಸ

ಶಿರಸಿಯಲ್ಲಿ ಮನೆ ನಿವೇಶನಕ್ಕಾಗಿ ಪ್ರತಿಭಟನೆ

ಕರ್ನಾಟಕ ಪ್ರಾಂತ ರೈತ ಸಂಘ ಶಿರಸಿ ಘಟಕದ ನೇತೃತ್ವದಲ್ಲಿ ಜನವರಿ 24 ರಂದು ಮನೆ ನಿವೇಶನ ನೀಡಬೇಕು, ಎಲ್ಲಾ ಬಡವರಿಗೂ ಬಿ.ಪಿ.ಎಲ್. ರೇಷನ್ ಕಾರ್ಡ್ ನೀಬೇಕು, 2 ರೂ.ನಂತೆ 35 ಕೆ.ಜಿ. ಅಕ್ಕಿ ನೀಡಬೇಕೆಂದು ಒತ್ತಾಯಿಸಿ ನೂರಾರು ಬಡ ಜನರು ನಗರದಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರ ಕಛೇರಿ ಎದುರು ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿ ರಾಜ್ಯದಲ್ಲಿ ಭೂಗಳ್ಳರ ಸರಕಾರವಿದ್ದು, ಬಡ ಜನರಿಗೆ ನಿವೇಶನ, ಮನೆ ಕೊಡುವ ಜವಾಬ್ದಾರಿ ಅವರಿಗೆ ಇಲ್ಲ. ನೂರಾರು ವರ್ಷಗಳಿಂದ ವಾಸವಾಗಿದ್ದ ಬುಡಕಟ್ಟು ಮತ್ತು ಇತರೆ ಅರಣ್ಯವಾಸಿಗಳಿಗೆ ಅರಣ್ಯ ಭೂಮಿ ಮಂಜೂರಿಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ. ಭೂಗಳ್ಳ ಮುಖ್ಯಮಂತ್ರಿ ರಕ್ಷಣೆಗಾಗಿ ಬಿಜೆಪಿ ಕರ್ನಾಟಕ ಬಂದ್ ನಡೆಸಿರುವುದನ್ನು ತೀವ್ರವಾಗಿ ಖಂಡಿಸಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ ಬಂಗಾರೇಶ್ವರ ಕೆ. ಗೌಡ, ಶಿವರಾಯ ದೇಸಾಯಿ. ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಮುಖಂಡರಾದ ನಾಗಪ್ಪ ನಾಯ್ಕ, ಶಂಕರಪ್ಪ ಲಮಾಣಿ, ವೀರಪ್ಪ ಲಮಾಣಿ ಮುಂತಾದವರು ಪ್ರತಿಭಟನೆ ನೇತೃತ್ವ ವ"ಸಿದ್ದರು.

ಶಿರಸಿಯಲ್ಲಿ ಮನೆ ನಿವೇಶನಕ್ಕಾಗಿ ಪ್ರತಿಭಟನೆ



★


ಅರಣ್ಯಭೂಮಿ ಹಕ್ಕಿಗಾಗಿ ಆದಿವಾಸಿಗಳ ಪ್ರತಿಭಟನೆ

ಯಲ್ಲಾಪುರ : ಆದಿವಾಸಿಗಳಿಗೆ ಅರಣ್ಯ ಹಕ್ಕು ನೀಡುವಂತೆ ಆಗ್ರಹಿಸಿ ನೂರಾರು ಜನ ಜನವರಿ 28 ರಂದು ಕರ್ನಾಟಕ ಆದಿವಾಸಿಗಳ ಸಮನ್ವಯ ಸಮಿತಿ ಯಲ್ಲಾಪುರದ ಘಟಕದ ಆಶ್ರಯದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರ ಕಛೇರಿಗೆ ತೆರಳಿ ಮನವಿ ನೀಡಿದರು.

ಯಲ್ಲಾಪುರ ತಾಲೂಕಿನ ಆದಿವಾಸಿ ಬುಡಕಟ್ಟು ಜನಾಂಗ ಸಿದ್ದಿ ಮುಂತಾದ ಪಂಗಡದವರು ನೂರಾರು ವರ್ಷದಿಂದ ಅರಣ್ಯ ಭೂಮಿಯಲ್ಲಿ ವಾಸಿಸುತ್ತಿದ್ದಾರೆ. ಅರಣ್ಯ ಹಕ್ಕು ಕಾಯಿದೆ ಜಾರಿಯಾಗಿ ಮೂರು ವರ್ಷ ಕಳೆದಿದೆ, ಅರಣ್ಯ ಹಕ್ಕು ನೀಡುವಂತೆ ಕಾನೂನಿನಂತೆ ಅರ್ಜಿ ಹಾಕಿಕೊಳ್ಳಲಾಗಿದ್ದು, ಅರ್ಜಿ ಹಾಕಿಕೊಂಡು ಬಹುತೇಕ ಜನರ ಅರ್ಜಿಯನ್ನು ವಿಭಾಗ ಮಟ್ಟದ ಅರಣ್ಯ ಹಕ್ಕು ಸಮಿತಿ ತಿರಸ್ಕರಿಸಿತ್ತು. ಅವರೆಲ್ಲರೂ ಜಿಲ್ಲಾ ಮಟ್ಟದ ಸಮಿತಿಗೆ ಮೇಲ್ಮನವಿ ಸಲ್ಲಿಸಿದಾರೆ. ಎರಡು ವರ್ಷ ಕಳೆದರು ಇದುವರೆಗೂ ಮಂಜೂರಿಯಾಗಿಲ್ಲ. ಅರಣ್ಯ ಹಕ್ಕು ಕಾಯಿದೆ ಪ್ರಕಾರ ಆದಿವಾಸಿ ಬುಡಕಟ್ಟು ಜನರಿಗೆ 2005 ಡಿಸೆಂಬರ 13 ಕ್ಕಿಂತ ಹಿಂದಿನಿಂದ ವಾಸವಿದ್ದರೆ ಭೂಮಿ ಮಂಜೂರಿಗೆ ಅವಕಾಶವಿದೆ. ಅರ್ಜಿ ಹಾಕಿಕೊಂಡ ಎಲ್ಲ ಕುಟುಂಬಗಳು ಭೂಮಿ ಪಡೆಯಲು ಯೋಗ್ಯರಿದ್ದು ಅವರ ಅರ್ಜಿಯನ್ನು ತಿರಸ್ಕರಿಸಿದ್ದು ತೀವ್ರ ಅನ್ಯಾಯವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.


ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಜನರುದ್ದೇಶಿಸಿ ಮಾತನಾಡಿದರು. ಕರ್ನಾಟಕ ಆದಿವಾಸಿಗಳ ಸಮನ್ವಯ ಸಮಿತಿ ಯಲ್ಲಾಪುರ ಘಟಕದ ಸಂಘಟಿಕರಾದ ನಾಗೇಂದ್ರ ಸೋಮಾ ಸಿದ್ದಿ ಮನವಿ ನೀಡಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ ತಾಲೂಕಿನಲ್ಲಿ ಈ ಹಿಂದೆ ಅರ್ಜಿ ಸಲ್ಲಿಸಿದ 393 ಆದಿವಾಸಿ ಅರಣ್ಯ ಅತಿಕ್ರಮಿತ ಕುಟುಂಬಗಳ ಹಕ್ಕುಪತ್ರ ನೀಡಲು ಎಲ್ಲ ಸಿದ್ಧತೆಗಳು ಪೂರ್ಣಗೊಂಡಿದೆ. ಮೇಲ್ಮನವಿ ನೀಡಿದವರ ಪರಿಶೀಲನೆ ನಡೆಯುತ್ತಿದ್ದು, ಸರಕಾರಿ ನಿಯಮದಂತೆ ಯಾರಿಗೂ ಕೂಡ ತೊಂದರೆಯಾಗದೇ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲಕೃಷ್ಣ ಹೆಗಡೆ, ಸಮಾಜ ಕಲ್ಯಾಣ ಅಧಿಕಾರಿ ಪಾವಸ್ಕರ ತಮ್ಮ ಇಲಾಖೆಗಳ ಪರವಾಗಿ ಉಪಸ್ಥಿತರಿದ್ದರು. ಆದಿವಾಸಿಗಳ ಸಮನ್ವಯ ಸಮಿತಿ ಸಹ ಸಂಚಾಲಕ ನಾರಾಯಣ ಕೃಷ್ಣ ಸಿದ್ದಿ, ಸಾಲೂ ನಾಗ್ಯ ಸಿದ್ದಿ, ಸೋಮಾ ಸಿದ್ದಿ, ನಾಗಪ್ಪ ಸಿದ್ದಿ ಮುಂತಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

○



ಯಲ್ಲಾಪುರ - ಅರಣ್ಯಭೂಮಿ ಹಕ್ಕಿಗಾಗಿ ಆದಿವಾಸಿಗಳ ಪ್ರತಿಭಟನೆ

ಎಂ.ಪಿ. ಪ್ರಕಾಶ್ ನಿಧನಕ್ಕೆ ಸಿಪಿಐ(ಎಂ) ಸಂತಾಪ




ಮಾಜಿ ಉಪಮುಖ್ಯಮಂತ್ರಿ, ಸಮಾಜವಾದಿ ಚಿಂತಕ ಎಂ.ಪಿ.ಪ್ರಕಾಶ್ ರವರ ನಿಧನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿ ಮಂಡಳಿಯು ಅತೀವ ಸಂತಾಪವನ್ನು ಸೂಚಿಸಿದೆ.

ಅವರು ರಾಜ್ಯದ ಹಿರಿಯ ರಾಜಕಾರಣಿಗಳಲ್ಲೊಬ್ಬರು ಮತ್ತು ವೈವಿಧ್ಯಮಯ ಹವ್ಯಾಸ, ವ್ಯಕ್ತಿತ್ವ ಹೊಂದಿದವರು. ವಿಶೇಷವಾಗಿ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವರ ಆಸಕ್ತಿ, ತೊಡಗುವಿಕೆ ಗಮನಾರ್ಹವಾಗಿದೆ. ಅವರ ನಿಧನದಿಂದಾಗಿ ರಾಜ್ಯವು ಒಬ್ಬ ಪ್ರಗತಿಪರ ಚಿಂತಕನನ್ನು ಕಳೆದುಕೊಂಡಿದೆ.

ಅವರ ಕುಟುಂಬಕ್ಕೆ ಸಿಪಿಐ(ಎಂ) ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ.

ಅವರ ಪಾರ್ಥೀವ ಶರೀರಕ್ಕೆ ಹೂಗುಚ್ಛಗಳನ್ನಿರಿಸಿ ಪಕ್ಷದ ಮುಖಂಡರಾದ ಜಿ.ಎನ್. ನಾಗರಾಜ್, ಎಸ್.ವೈ. ಗುರುಶಾಂತ್, ಜಿ.ಸಿ. ಬಯ್ಯಾರೆಡ್ಡಿ, ಎನ್. ಪ್ರಸನ್ನಕುಮಾರ್, ಕೆ.ಪ್ರಕಾಶ್ ಮುಂತಾದವರು ಗೌರವ ನಮನ ಸಲ್ಲಿಸಿದರು.

○



ವಿಷವನ್ನು ಕುಡಿದೇಬಿಟ್ಟರು! ತೊಗರಿ ಬೆಳೆದ ರೈತ ಬಂಧುಗಳು

ಬಿಜೆಪಿ ದರ್ಬಾರ್

ಫೆಬ್ರವರಿ 9 ರ ಸಂಜೆ 7.30 ರ ಹೊತ್ತಿಗೆ ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ವಾಸವಿ ಪ್ರಾವಿಷನ್ ಸ್ಟೋರ್ ಎಂಬ ದಿನಸಿ ಅಂಗಡಿಯಲ್ಲಿ ತೊಗರಿಬೇಳೆ ಖರೀದಿ ಮಾಡಿದಾಗ ತೆಗೆದುಕೊಂಡ ಬೆಲೆ ರೂ 68. ಇದೇ ಫೆಬ್ರವರಿ 9 ರ ಪತ್ರಿಕೆಗಳನ್ನು ತಿರುವಿ ಹಾಕಿದರೆ ಕಂಡ ಒಂದು ಸುದ್ದಿ ಕರ್ನಾಟಕದ ಬಿಜೆಪಿ ಸರ್ಕಾರ ಈ ಬಾರಿ ಕೃಷಿ ಬಜೆಟ್‌ನ್ನು ಪ್ರತ್ಯೇಕವಾಗಿ ಮಂಡಿಸುತ್ತದೆ ಅಂತ.

ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದೆ. ಇನ್ನು ರಾಜ್ಯ ಸರ್ಕಾರ ಪ್ರತ್ಯೇಕ ಬಜೆಟನ್ನೇ ಮಂಡಿಸುತ್ತಿದೆ. ಹೀಗಿರುವಾಗ ರಾಜ್ಯದ ರೈತರು ಭಾರೀ ಸಂತೋಷವಾಗಿರಬೇಕಲ್ಲವೇ? ಹೌದು ಅವರು ಸಂತೋಷವಾಗಿದ್ದಾರೆ. ಎಷ್ಟು ಸಂತೋಷವಾಗಿದ್ದಾರೆ ಎಂದರೆ ಮೊನ್ನೆ ಮೊನ್ನೆ ರಾಜ್ಯದ ಜೇವರ್ಗಿಯಲ್ಲಿ ಸುಮಾರು 15 ಜನ ತೊಗರಿ ರೈತರು ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ಅದೃಷ್ಟವಶಾತ್ ಯಾರೂ ಸಾಯಲಿಲ್ಲ.

ಇದು ನಿಜಕ್ಕೂ ಒಂದು ದುರಂತದ ಸ್ಥಿತಿ. ದೇಶಕ್ಕೆಲ್ಲ ಕಾಳು ಕಡಿ,ಅನ್ನ ಆಹಾರ ಬೆಳೆದು ಕೊಡುವ ರೈತ ತನ್ನ ಬೆಳೆಗೆ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹೊತ್ತಲ್ಲಿ ಇತ್ತ ಜನ ಸಾಮಾನ್ಯರು ತಿನ್ನುವ ಅನ್ನ ಕೊಳ್ಳಲಾಗದೇ ಪರಿತಪಿಸುತ್ತಿರುತ್ತಾರೆ. ಎಷ್ಟೋ ಜನ ಬಡವರು ದವಸ ಧಾನ್ಯ ಕೊಳ್ಳಲು ಹಣವಿಲ್ಲದೇ ಉಪವಾಸ ಸಾಯುತ್ತಾರೆ.

ತೊಗರಿಯ ಬೆಲೆ ನೂರರ ಗಡಿ ದಾಟಿ ಜನರ ನಡುವೆ ಹಾಹಾಕಾರವೆದ್ದ ಪರಿಸ್ಥಿತಿಯ ನೆನಪು ಜನರ ಮನಸ್ಸಿನಲ್ಲಿ ಇನ್ನೂ ಹಸಿಯಾಗಿಯೇ ಇದೆ. ಮಾರುಕಟ್ಟೆಯಲ್ಲಿ ಈಗಲೂ ಬೆಲೆಯೇನು ಭಾರಿ ಕಡಿಮೆಯಾಗಿಲ್ಲ. ತೊಗರಿಯ ಕಣಜ ಎಂದೇ ಕರೆಯಲಾಗುವ ಗುಲ್ಬರ್ಗಾ ಜಿಲ್ಲೆಯಲ್ಲಿ ಈಗ ತೊಗರಿ ಬೇಳೆ ಸುಗ್ಗಿ ಕಾಲ. ಆದರೆ ಬೇಳೆ ಬೆಳೆದ ರೈತರಲ್ಲೇನು ಹಿಗ್ಗಿಲ್ಲ. ಯಾಕೆಂದರೆ ಕ್ವಿಂಟಾಲ್ ತೊಗರಿಗೆ ಅಂದರೆ 100 ಕೆ.ಜಿ. ತೊಗರಿಗೆ ಈಗ ಬರೇ 3000 ರೂಪಾಯಿ ಕಿಮ್ಮತ್ತು. ಮಾರುವ ರೈತನಿಗೆ ಹಾಕಿದ ಶ್ರಮ, ಬಂಡವಾಳ ವಾಪಸ್ ಬಂದು ಕೊಂಚ ನೆಮ್ಮದಿ ಕಾಣಬೇಕಾದರೆ ಕ್ವಿಂಟಲ್‌ಗೆ ಕನಿಷ್ಟ 5000 ರೂಪಾಯಿಗಳಾದರೂ ಸಿಗಬೇಕೆಂಬುದು ರೈತರ ಬಯಕೆ ಮತ್ತು ಅಗತ್ಯ.

ಹಸಿರು ಶಾಲು ಹೊದ್ದುಕೊಂಡು ರೈತರಿಗೆ ಸ್ವರ್ಗವನ್ನು ತೋರಿಸುವುದಾಗಿ ಪ್ರತಿಜ್ಞೆ ಮಾಡಿ ಅಧಿಕಾರ ಸ್ವೀಕಾರ ಮಾಡಿದ ಯಡಿಯೂರಪ್ಪನವರ ಕಾಲದಲ್ಲೂ ಕೂಡ ಮಾರುಕಟ್ಟೆಯಲ್ಲಿ ಕಾಳಸಂತೆಕೋರರು, ರೈತರನ್ನು ಸುಲಿಗೆ ಮಾಡುವ ದಳ್ಳಾಳಿ ವ್ಯಾಪಾರಗಾರದ್ದೇ ಹಿಡಿತ. ಉತ್ತಮ ಬೆಂಬಲ ಬೆಲೆ ಘೋಷಿಸಿ ಸುಗ್ಗಿಯ ಆರಂಭದಲ್ಲೆ ಖರೀದಿ ಕೇಂದ್ರ ಆರಂಭಿಸಿ ರೈತರ ಹಿತ ಕಾಯುವ ಕಾಳಜಿ ಕೇಂದ್ರ ಸರ್ಕಾರಕ್ಕೂ ಇಲ್ಲ, ರಾಜ್ಯ ಸರ್ಕಾರಕ್ಕೂ ಇಲ್ಲ.

ಕೃಷಿ ತಜ್ಞ ಡಾ। ಸ್ವಾಮಿನಾಥನ್ ವರದಿಯ ಶಿಫಾರಸ್ಸಿನ ಪ್ರಕಾರ ಮಾರುಕಟ್ಟೆ ದರದ ಶೇ. 50 ರಷ್ಟು ಸೇರಿಸಿ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿಮಾಡಬೇಕು. ಅಂದರೆ ಇಲ್ಲಿ ಶಿಫಾರಸ್ಸಿನಂತೆ ಕ್ವಿಂಟಾಲ್‌ಗೆ 4500 ರೂಪಾಯಿಗಳಷ್ಟನ್ನಾದರೂ ಕೇಂದ್ರ ಸರ್ಕಾರ ತೊಗರಿಗೆ ಬೆಂಬಲ ಬೆಲೆ ಘೋಷಣೆ ಮಾಡಬೇಕಿತ್ತು. ಹಾಗಾಗಿಲ್ಲ. ಎಸ್.ಎ. ಪಾಟೀಲರ ನೇತೃತ್ವದ ರಾಜ್ಯ ಕೃಷಿ ಮಿಷನ್ ಕೂಡ 4500 ರೂ. ಬೆಂಬಲ ಬೆಲೆ ನಿಗದಿಗೆ ಶಿಫಾರಸ್ಸು ಮಾಡಿತ್ತು. ರಾಜ್ಯ ಸರ್ಕಾರವೂ ಏನೊಂದನ್ನು ಮಾಡಲಿಲ್ಲ. ಹತಾಶ ರೈತರ ಆತ್ಮಹತ್ಯೆ ಯತ್ನದ ನಂತರ ರಾಜ್ಯ ಸರ್ಕಾರ ಖರೀದಿ ಕೇಂದ್ರ ಆರಂಭಿಸಿತು. ಅಗೋ ಆ ಕೂಡಲೇ ಮಾರುಕಟ್ಟೆಯಲ್ಲಿ ತೊಗರಿಗೆ ಬೆಲೆ ಕ್ವಿಂಟಲ್‌ಗೆ 4000 ರೂಪಾಯಿಗಳಿಗೇರಿತು. ಆಹಾ! ಮಾರುಕಟ್ಟೆಯ ಮೇಲೆ ವ್ಯಾಪಾರೀ ಶಕ್ತಿಗಳ ಹಿಡಿತ ಯಾವ ರೀತಿ ಇರುತ್ತದೆ ಮತ್ತು ಸರ್ಕಾರ ಕೊಂಚ ಪ್ರಯತ್ನಿಸಿದರೆ ಏನು ಮಾಡಬಹುದು ಎಂಬುದಕ್ಕೆ ಇದೇ ಸಾಕ್ಷಿ.

ಇದು ತೊಗರಿ ರೈತರ ಕತೆ. ಭತ್ತ, ಕಬ್ಬು ಬೆಳೆದ ರೈತರ ಸ್ಥಿತಿಯೇನೂ ಇದಕ್ಕಿಂತ ಭಿನ್ನವಲ್ಲ. ಈಗ ಮಾರುಕಟ್ಟೆಯಲ್ಲಿ ಕ್ವಿಂಟಲ್ ಭತ್ತಕ್ಕೆ ಕೇವಲ 1000 ರೂ ಇದೆ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಈಗ ಕ್ವಿಂಟಾಲ್ ಭತ್ತಕ್ಕೆ ಕನಿಷ್ಟ 1500 ರೂಗಳಾದರೂ ಬೆಂಬಲ ಬೆಲೆ ನಿಗದಿಯಾಗಬೇಕು.

ಆಶ್ಚರ್ಯ: ಇಲ್ಲೊಂದು ಆಶ್ಚರ್ಯದ ಸುದ್ದಿ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ಈ ವರ್ಷ ಮಾಮೂಲಿನಂತೆ ಬೆಳೆ ಬಂದಿಲ್ಲ. ತೊಗರಿ ಉತ್ಪಾದನೆ ಕಡಿಮೆಯಾಗಿದೆ. 20 ಲಕ್ಷ ಕ್ವಿಂಟಾಲ್ ಬೆಳೆ ಬದಲಿಗೆ ಈಗ ಬೆಳೆ ಬಂದಿರುವುದು ಕೇವಲ 12 ಲಕ್ಷ ಕ್ವಿಂಟಲ್ ಮಾತ್ರ. ಅಂದರೆ ತೊಗರಿಗೆ ಮಾಮೂಲಿಗಿಂತ ಬೇಡಿಕೆ ಹೆಚ್ಚು. ಇಷ್ಟಾದರೂ ತೊಗರಿ ಬೆಲೆಯಲ್ಲಿ ದಳ್ಳಾಳಿಗಳು ಇಷ್ಟೊಂದು ಅಪರ ತಪರಾ ಮಾಡುತ್ತಾರೆ, ಸರ್ಕಾರ ಅದನ್ನು ನೋಡಿಕೊಂಡು ಸುಮ್ಮನಿರುತ್ತದೆ ಎಂದರೆ ಏನು ಕತೆ ಅಂತ ನಾವೆಲ್ಲಾ ಗಂಭಿರವಾಗಿ ಯೋಚಿಸಬೇಕಿದೆ.

★

ಕೃಷಿಗೆ ಪ್ರತ್ಯೇಕ ಬಜೆಟ್ ಅಷ್ಟೇ ಸಾಕಾ ?

ರಾಜ್ಯ ಸರ್ಕಾರ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸುತ್ತದೆಯಂತೆ. ಅದನ್ನು ಬಹುಶಃ ಯಾರೂ ವಿರೋಧಿಸಲಾರರು. ಆದರೆ ಮುಖ್ಯ ಪ್ರಶ್ನೆ ಎಂದರೆ ಪ್ರತ್ಯೇಕ ಬಜೆಟ್ ಮಂಡಿಸಿ ಕೊನೆಗೆ ಏನು ಸಾಧಿಸುತ್ತದೆ ಎಂಬುದು. ಕೃಷಿರಂಗದಲ್ಲಿನ ಸರ್ಕಾರಿ ಹೂಡಿಕೆಗಳನ್ನು ನಮ್ಮ ಸರ್ಕಾರಗಳು ಕಡಿತ ಮಾಡಿಬಿಟ್ಟಿವೆ. ಕೃಷಿ ಕ್ಷೇತ್ರದ ಕಂಪನೀಕರಣ ಭರದಿಂದ ನಡೆದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗಾರಿಕಾ ರಂಗದಂತೆ ಕೃಷಿರಂಗದಲ್ಲಿಯೂ ವಿದೇಶಿ ಬಂಡವಾಳವನ್ನು ಆಹ್ವಾನಿಸುತ್ತಿವೆ. ಇಂತಹ ಹೊತ್ತಲ್ಲಿ ಬರೀ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸುವುದು ಅಥವಾ ತೋರಿಕೆಯ ಕೆಲವು ಯೋಜನೆ ಪ್ರಕಟಿಸುವುದು, ಅಥವಾ ಸಾಂಕೇತಿಕವಾಗಿ ಒಂಚೂರು ಕೃಷಿ ಬಜೆಟ್ ಹೆಚ್ಚಳ ಮಾಡಿದಂತೆ ತೋರಿಸುವುದು ಇವುಗಳಿಂದ ಹೆಚ್ಚಿನ ಪ್ರಯೋಜನವೇನೂ ಆಗಲಾರದು. ನಿಜಕ್ಕೂ ಆಳವಾದ ಬಿಕ್ಕಟ್ಟಿನಲ್ಲಿರುವ ರೈತರನ್ನು ಆ ಕೂಪದಿಂದ ಹೊರತರಬೇಕಾದರೆ ಸರ್ಕಾರಗಳು ಕೃಷಿಯ ಮೇಲಿನ ಸಾರ್ವಜನಿಕ ಹೂಡಿಕೆಯನ್ನು ತೀವ್ರವಾಗಿ ಹೆಚ್ಚಿಸಬೇಕಾದ ಅಗತ್ಯವಿದೆ. ಅಂತಹ ರಾಜಕೀಯ ಇಚ್ಛಾಶಕ್ತಿ ಈ ಬಿಜೆಪಿ ಸರ್ಕಾರಕ್ಕೆ ಇದೆಯೇ ?

★

'ಯಡಿಯೂರಪ್ಪನವರ ಮನೆಯ ದಾಸ್ತಾನಿನಲ್ಲಿ' ಬರೀ 2.5 ಕೆ.ಜಿ. ಚಿನ್ನ, 76 ಕೆ.ಜಿ. ಬೆಳ್ಳಿ

'ಯಡಿಯೂರಪ್ಪನವರ ಹೆಸರಿನಲ್ಲಿರುವ' ಅವರ ಆಸ್ತಿಯನ್ನು 'ಅಧಿಕೃತ'ವಾಗಿ ಘೋಷಿಸಲಾಗಿದೆ. (ಆ ಬಗ್ಗೆ ಇದೇ ಪತ್ರಿಕೆಯಲ್ಲಿ ಮತ್ತೊಂದು ಬರಹವಿದೆ) ಆ ಪ್ರಕಾರ ಅವರ ಬಳಿಯಿರುವುದು ಕೇವಲ 2.5 ಕೆ.ಜಿ ಚಿನ್ನ. ಬರೇ 76 ಕೆ.ಜಿ. ಬೆಳ್ಳಿ, ಕಳೆದ ವಿಧಾನಸಭಾ ಚುನಾವಣೆಯ ನಂತರ ಅವರ ಚಿನ್ನದ ದಾಸ್ತಾನು ಕೇವಲ 900 ಗ್ರಾಂ ಮಾತ್ರ ಏರಿಕೆಯಾಗಿದೆ. ಬೆಳ್ಳಿ ಜಾಸ್ತಿಯಾಗಿರುವುದು ಬರೇ 51 ಕೆ.ಜಿ.

ಈ ಹೆಚ್ಚಳ ಆಗಿರುವುದು ಯಡಿಯೂರಪ್ಪನವರಿಗೆ ಬಂದಿರುವ ಉಡುಗೊರೆಗಳಿಂದ ಅಂತೆ. ಈ ಉಡುಗೊರೆಗಳನ್ನು ಕೊಟ್ಟವರು ಯಾರು? ಯಾಕೆ ಕೊಟ್ಟರು? ಅದೆಲ್ಲಾ ವಿವರಗಳನ್ನು ನೀಡಲು ಯಡಿಯೂರಪ್ಪನವರಿಗೆ ಪಾಪ ಪುರುಸೊತ್ತಿಲ್ಲ ಬಿಡಿ.

ಮನೆಯ ಚಿನ್ನ, ಬೆಳ್ಳಿ ದಾಸ್ತಾನು ಕೊಂಚ ಜಾಸ್ತಿಯಾಗಿರುವ ಖುಷಿಯಲ್ಲಿ ರಾಜ್ಯದ ಜನತೆಗೇನಾದರೂ ಕೊಡುಗೆ ಉಡುಗೊರೆ (ರಾಜ್ಯದ ಖಜಾನೆಯಿಂದ) ಕೊಡುವರೇ?

ತಮ್ಮ ರೇಷನ್ ಕಾರ್ಡಿನಲ್ಲಿ ಐದೋ ಹತ್ತೋ ಕೆ.ಜಿ. ಅಕ್ಕಿ ಹೆಚ್ಚಳವಾದರೆ ನಮ್ಮ ನಾಡಿನ ಜನತೆ ಧನ್ಯ.

ಕರಾವಳಿಯಲ್ಲಿ...

ಪುಟ 6 ರಿಂದ

ಅಗತ್ಯವಿರುವ ತಂಬಾಕು ಮತ್ತು ಬೀಡಿ ಎಲೆಯನ್ನು ನೀಡಬೇಕು. ಗುರುತಿನ ಚೀಟಿ, ಲಾಗ್ ಬುಕ್ ನೀಡಬೇಕು. ಬೀಡಿ ಕಾರ್ಮಿಕರಿಗೆ ತಾರತಮ್ಯವಿಲ್ಲದೆ ಬಿಪಿಎಲ್ ಕಾರ್ಡ್ ನೀಡಬೇಕು. ಭವಿಷ್ಯನಿಧಿ ಪಿಂಚಣಿಯ ಮೊತ್ತವನ್ನು ರೂ.1500ಕ್ಕೆ ಏರಿಸಬೇಕು. ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ಸಂಯೋಜಿತ ಬೀಡಿ ಕಾರ್ಮಿಕರ ಸಂಘಟನೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕರೆಕೊಟ್ಟ ಮೇರೆಗೆ ಫೆಬ್ರವರಿ 8 ರಂದು ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನಾ ಪ್ರದರ್ಶನಗಳು ನಡೆದವು.



ಮಂಗಳೂರಿನಲ್ಲಿ ಪುರಭವನದಿಂದ ಪ್ರಧಾನ ಅಂಚೆ ಕಛೇರಿಯವರೆಗೆ ಪ್ರತಿಭಟನಾಕಾರರು ಬೃಹತ್ ಮೆರವಣಿಗೆ ನಡೆಸಿ, ಅಲ್ಲಿ ಪ್ರದರ್ಶನ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ, ಸಿಐಟಿಯು ಬೀಡಿ ಕಾರ್ಮಿಕ ರಾಷ್ಟ್ರೀಯ ಫೆಡರೇಷನ್ನಿನ ಅಧ್ಯಕ್ಷ ಬಿ.ಮಾಧವ, ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ನಿನ ಅಧ್ಯಕ್ಷ ಬಿ. ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಸುಕುಮಾರ್, ಮೊದಲಾದವರು ಮಾತನಾಡಿದರು. ಬೀಡಿ ಕಾರ್ಮಿಕರ ಮುಂದಾಳುಗಳಾದ ಬಾಬು ದೇವಾಡಿಗ, ಜಯಂತಿ ನಾಯಕ್ ಜಯಂತಿ ಬಿ. ಶೆಟ್ಟಿ, ಭಾರತಿ ಬೋಳಾರಾ, ಶ್ರೀಧರ ವಿಲಾಸಿನಿ, ಸಿಐಟಿಯು ನಗರ ಸಮಿತಿ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್, ಡಿವೈಎಫ್‌ಐನ ಮುನೀರ್ ಕಾಟಿಪಳ್ಳ, ದಯಾನಂದ ಶೆಟ್ಟಿ, ಯೋಗೀಶ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೂಡಬಿದರೆ ಅಂಚೆ ಕಛೇರಿ ಮುಂದೆ ನಡೆದ ಪ್ರದರ್ಶನದಲ್ಲಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಮಿಕ ಮುಖಂಡರಾದ ಯಾದವಶೆಟ್ಟಿ, ರಮೇಶ್, ರಾಧಾ, ಗಿರಿಜಾ ಸುಂದರಶೆಟ್ಟಿ ಮೊದಲಾ ದವರು ಭಾಗವಹಿಸಿದ್ದರು.

ಗುರುಪುರ ಕೈಕಂಬ ಅಂಚೆ ಕಛೇರಿ ಮುಂದೆ ನಡೆದ ಪ್ರದರ್ಶನದಲ್ಲಿ ಸಿಐಟಿಯು ಬೀಡಿ ಕಾರ್ಮಿಕ ಸಂಘಟನೆಯ ಗುರುಪುರ ಪ್ರದೇಶದ ನಾಯಕರಾದ ಯು.ಬಿ.ಲೋಕಯ್ಯ, ನೋಣಯ್ಯಗೌಡ, ಸದಾಶಿವ ದಾಸ್, ವಸಂತಿ ಕುಪ್ಪೆಪದವು, ಮೊದಲಾದವರು ಭಾಗವಹಿ ಸಿದ್ದರು.


ಬೆಳ್ತಂಗಡಿ ತಾಲ್ಲೂಕು ಕಛೇರಿಯ ಎದುರು ನಡೆದ ಪ್ರದರ್ಶನದಲ್ಲಿ ಸಿಐಟಿಯು ಮುಖಂಡ ರಾದ ಬಿ.ಎಂ.ಭಟ್, ಶಿವಕುಮಾರ್, ಜಯರಾಮಮಯ್ಯ, ನೆಬಿತಾ, ಈಶ್ವರಿ, ಜಯಂತಿ, ಮಾಲಿನಿ, ಶೇಖರ್ ಮೊದಲಾದವರು ಭಾಗವಹಿಸಿದ್ದರು.

ಉಡುಪಿ ಜಿಲ್ಲೆಯಲ್ಲಿ ಕುಂದಾಪುರ, ಬ್ರಹ್ಮಾವರ, ಕಾಪು ಹಾಗೂ ಉಡುಪಿಯ ಅಂಚೆಕಛೇರಿಗಳಲ್ಲಿ ಆ ಜಿಲ್ಲೆಯ ಬೀಡಿ ಕಾರ್ಮಿಕರು ಪ್ರತ್ಯಪ್ರತ್ಯೇಕ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು.

ಉಡುಪಿ ನಗರದ ಕೇಂದ್ರ ಅಂಚೆ ಕಛೇರಿ ಎದುರು ನಡೆಸಿದ ಪ್ರತಿಭಟನೆಯಲ್ಲಿ ಬೀಡಿ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ರಮೇಶ್ ಮೆಂಡನ್, ನಾಯಕರುಗಳಾದ ದೋಗುಸುವರ್ಣ, ಉಮೇಶ ಕುಂದರ್, ರಾಜು ಪೂಜಾರಿ, ಬೇಬಿ ನಿಟ್ಟೂರು, ರಾಧಾ, ಲೀಲಾ ಮೊದಲಾದವರು ಭಾಗವಹಿಸಿದ್ದರು.

ಹೊಸದೊಂದು ಯುಪಿಎ - 2 ಹಗರಣ ?

ಇದು 2ಲಕ್ಷ ಕೋಟಿ ರೂ.ಗಳ ಎಸ್-ಪಟ್ಟಿ ತರಾಂಗತರದ್ದು



ಯುಪಿಎ-2 ಸರಕಾರದ ಕೊರಳು ಸುತ್ತಿದ ಹಗರಣಗಳ ಸರಮಾಲೆಗೆ ಮತ್ತೊಂದು ಸೇರಿರುವಂತೆ ಕಾಣುತ್ತದೆ, ಜತೆಗೆ ದೇಶದ ಸಂಪನ್ಮೂಲಗಳ ಲೂಟಿ ಮಾಡುವ ಚಮಚಾ ಬಂಡವಾಳಶಾಹಿಯ ಇನ್ನೊಂದು ಕೃತ್ಯ ಬಯಲಾದಂತೆ ಕಾಣುತ್ತದೆ. ಇದು ಕೂಡ ಬೆಳಕಿಗೆ ಬಂದಿರುವುದು ಸಿಎಜಿ ತನಿಖೆಯಿಂದ. ಬಾಹ್ಯಾಕಾಶ ಸಂಶೋಧನಾ ಸಂಘಟನೆ ಇಸ್ರೊದ ವಾಣಿಜ್ಯ ಅಂಗಸಂಸ್ಥೆ ಅಂತರಿಕ್ಷ ಕಾರ್ಪೊರೇಶನ್ ಲಿಮಿಟೆಡ್ ಒಂದು ಖಾಸಗೀ ಕಂಪನಿ ದೇವಸ್ ಮಲ್ಟಿಮಿಡಿಯ ಪ್ರೈ.ಲಿ.ಯೊಡನೆ 2005ರಲ್ಲಿ ಮಾಡಿಕೊಂಡ ಒಪ್ಪಂದದ ತನಿಖೆಯನ್ನು ಸಿಎಜಿ ನಡೆಸುತ್ತಿದ್ದು, ಇದರಿಂದ ದೇಶದ ಬೊಕ್ಕಸಕ್ಕೆ 2ಲಕ್ಷ ಕೊಟಿರೂ.ಗಳ ನಷ್ಟವಾಗಿರಬಹುದು ಎಂಬುದು ಆರಂಭಿಕ ಅಂದಾಜು.


ಈ ಒಪ್ಪಂದ ಇಸ್ರೊ ಈ ಖಾಸಗಿ ಕಂಪನಿಗಾಗಿ ಉಡಾವಣೆ ಮಾಡಲಿರುವ ಎರಡು ಉಪಗ್ರಹಗಳಿಗೆ ಸಂಬಂಧಪಟ್ಟಿದ್ದು ಅದರಲ್ಲಿ ಈ ಖಾಸಗಿ ಕಂಪನಿಗೆ ಒಂದು ದೊಡ್ಡ ಪ್ರಯೋಜನ ಅಡಕವಾಗಿದೆ-ಅದೆಂದರೆ 20 ವರ್ಷಗಳ ವರೆಗೆ ಬಹಳ ಬೆಲೆಬಾಳುವ ಅಪರೂಪದ ಎಸ್-ಬ್ಯಾಂಡಿನ 70 ಮೆಗಾಹರ್ಟ್ಸ್ ತರಂಗಾಂತರದ ಅನಿಯಂತ್ರಿತ ಬಳಕೆ. ಯಾವುದೇ ಸ್ಪರ್ಧಾತ್ಮಕ ಹರಾಜು ಕ್ರಮವಿಲ್ಲದೆ ಇದನ್ನು ಕೊಡಲಾಗಿದೆ, ಇದೇ ಬೊಕ್ಕಸಕ್ಕೆ ನಷ್ಟದ ಮೂಲ ಎನ್ನಲಾಗಿದೆ. ಅಂತರಿಕ್ಷ ಕಾರ್ಪೊರೇಶನಿಗೆ ಇದರಿಂದ ಪ್ರತಿವರ್ಷ 11ಮಿಲಿಯ ಡಾಲರುಗಳಂತೆ 12 ವರ್ಷಗಳ ಕಾಲ ಆದಾಯ ತರಬೇಕಾಗಿದ್ದ ಒಪ್ಪಂದ ಇದು. ದೇವಸ್ ಮಲ್ಟಿಮೀಡಿಯಾದ ಅಧ್ಯಕ್ಷ ಡಾ.ಎಂ.ಜಿ.ಚಂದ್ರಶೇಖರ್ ಹಿಂದೆ ಇಸ್ರೋದಲ್ಲಿಯೇ ವೈಜ್ಞಾನಿಕ ಕಾರ್ಯದರ್ಶಿಯಾಗಿದ್ದವರು. ಜರ್ಮನಿಯ ಡಾಯ್ಚ್ ಟೆಲಿಕಾಂ ಇದರಲ್ಲಿ ಸ್ವಲ್ಪ ಶೇರು ಬಂಡವಾಳ ಪಡೆದಿದೆ.

ಸಿಎಜಿ ಸ್ಪರ್ಧಾತ್ಮಕ ಹರಾಜು ಇಲ್ಲದೆ ಈ ತರಂಗಾಂತರವನ್ನು ನೀಡಿದ ಬಗ್ಗೆಯಲ್ಲದೆ, ಇಸ್ರೊದ ಬಜೆಟಿನಿಂದ ಸಾರ್ವಜನಿಕ ಸಂಪನ್ಮೂಲವನ್ನು ಖಾಸಗಿ ಕಂಪನಿಗಾಗಿ ನಿರ್ದಿಷ್ಟ ಗ್ರಾಹಕರ ಉಪಗ್ರಹದತ್ತ ತಿರುಗಿಸಲಾಗಿದೆ ಹಾಗೂ ಈ ಪ್ರಾಜೆಕ್ಟಿನ ಹಣಕಾಸು ಅಂಶಗಳು ಹಾಗೂ ವಾಣಿಜ್ಯ ಪರಿಣಾಮಗಳ ಬಗ್ಗೆ ನಿಯಂತ್ರಕರಿಗೆ ತಪ್ಪು ಮಾಹಿತಿ ನೀಡಲಾಗಿದೆ ಎಂದು ಹೇಳಿ ಇದಕ್ಕೆ ವಿವರಣೆಯನ್ನು ಕೇಳಿದೆ. ಜುಲೈ 2010ರಲ್ಲಿ ಬಾಹ್ಯಾಕಾಶ ಆಯೋಗ ಈ ಒಪ್ಪಂದಕ್ಕೆ ಬಲವಾದ ಆಕ್ಷೇಪ ವ್ಯಕ್ತಪಡಿಸಿ ಅದನ್ನು ರದ್ದು ಮಾಡಬೇಕೆಂದು ಶಿಫಾರಸು ಮಾಡಿತ್ತು. ಆದರೆ ಇದುವರೆಗೆ ಹಾಗೇನೂ ಆಗಿಲ್ಲೆಂದು ತಿಳಿದು ಬಂದಿದೆ.

ಬಾಹ್ಯಾಕಾಶ ಇಲಾಖೆ ನೇರವಾಗಿ ಪ್ರಧಾನ ಮಂತ್ರಿಗಳ ಅಡಿಯಲ್ಲಿ ಇರುವಂತದ್ದು. ಈ ಒಪ್ಪಂದ ಇಸ್ರೊ ಮಾಡಿಕೊಂಡ ಇತರ ಒಪ್ಪಂದಗಳಂತಿರದೆ ದೇವಸ್ ಕಂಪನಿಗೆ ನೀಡಿದ ತರಂಗಾಂತರದ ಭೋಗ್ಯದ ಮುಂದುವರಿಕೆಗೆ ಯಾವ ಅಡ್ಡಿ-ಆತಂಕಗಳೂ ಇಲ್ಲ. ಎಸ್ ಬ್ಯಾಂಡನ್ನು ಖಾಸಗಿಯವರಿಗೆ ತೆರೆದಿರುವುದು ಇದೇ ಮೊದಲು ಹಾಗೂ ಇದನ್ನು ಸದ್ದಿಲ್ಲದೆ ಮಾಡಲಾಗಿದೆ.

ಈಗ ಇದನ್ನು ಮುಚ್ಚಿ ಹಾಕುವ ಕಸರತ್ತುಗಳು ನಡೆದಿರುವಂತೆ ಕಾಣುತ್ತಿದೆ. ವಿವರಣೆ ನೀಡಲು ದಿಲ್ಲಿಗೆ ಧಾವಿಸಿದ ಇಸ್ರೊ ಮುಖ್ಯಸ್ಥರು ಈ ಕಾಂಟ್ರಾಕ್ಟನ್ನು ರದ್ದು ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳುತ್ತ ಈ ವ್ಯವಹಾರದ ಬಗ್ಗೆ ಕೇಂದ್ರ ಸಂಪುಟಕ್ಕೆ ತಿಳಿಸಿರಲಿಲ್ಲ ಎಂದು ಆರೋಪವನ್ನು ಇಸ್ರೊ ಮೇಲೆಯೇ ತಗೊಂಡು ಯುಪಿಎ ಸರಕಾರವನ್ನು ರಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಯುಪಿಎ-2 ಸರಕಾರದ ಮೂರು ಇಲಾಖೆಗಳು ಈ ವ್ಯವಹಾರದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದವು ಎಂದು ತಿಳಿದು ಬಂದಿದೆ. ಆದರೂ ಈ ರದ್ದತಿ ಪ್ರಕ್ರಿಯೆ ಇನ್ನೂ ಮುಗಿದಿಲ್ಲ ಎಂಬುದಕ್ಕೆ ಅವರಿಂದ ಸಮಜಾಯಿಷಿ ಸಿಕ್ಕಿಲ್ಲ.

ಪ್ರಧಾನ ಮಂತ್ರಿಯ ಕಚೇರಿಯ ಹೇಳಿಕೆಯೂ ಉತ್ತರಗಳಿಗಿಂತ ಪ್ರಶ್ನೆಗಳನ್ನೇ ಎಬ್ಬಿಸಿದೆ. ಬಾಹ್ಯಾಕಾಶದ ಯಾವುದೇ ಭಾಗವನ್ನು ಅಂತರಿಕ್ಷ ಕಾರ್ಪೊರೇಶನಿಗಾಗಲೀ, ದೇವಸ್ ಕಂಪನಿಗಾಗಲಿ ನೀಡಿಲ್ಲ ಮತ್ತು ಸರಕಾರಕ್ಕೆ ಆದಾಯ ನಷ್ಟದ ಪ್ರಶ್ನೆಯೇ ಏಳುವುದಿಲ್ಲ ಎಂದು ಈ ಹೇಳಿಕೆ ತಿಳಿಸಿದೆ. 2005ರಲ್ಲಿ ಅಂತರಿಕ್ಷ ಕಾರ್ಪೊರೇಶನ್ ಮತ್ತು ದೇವಸ್‌ನ ಒಪ್ಪಂದದಲ್ಲಿ ಅಂತರಿಕ್ಷ ಕಾರ್ಪೊರೇಶನ್ ತನಗೆ ಈ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಇದೆ ಎಂದು ತಿಳಿಸುತ್ತ ಮೂರು ವರ್ಷಗಳೊಳಗೆ ದೇವಸ್ ಕಂಪನಿಗೆ ಉಪಗ್ರಹ ಆಧಾರಿತವಾದ 8.1 ಮೆ.ಹ. ಸಾಮರ್ಥ್ಯದ 5 ಟ್ರಾನ್ಸ್ ಪಾಂಡರ್‌ಗಳು ಮತ್ತು 2.7 ಮೆ.ಹ.ಸಾಮರ್ಥ್ಯದ ಇನ್ನೂ 5 ನ್ನು ಒದಗಿಸುವುದಾಗಿ ಹೇಳಿದೆ. ಉಪಗ್ರಹ ಸಂಪರ್ಕರಂಗದಲ್ಲಿ ಟ್ರಾನ್ಸ್ ಪಾಂಡರ್‌ಗಳನ್ನು ನೀಡುವುದೆಂದರೆ ತರಂಗಾಂತರ ನೀಡಿದಂತೆಯೇ. ಅಂದರೆ ತರಂಗಾಂತರ ನೀಡಿಲ್ಲ ಎಂಬ ಹೇಳಿಕೆಗೆ ಅರ್ಥವಿಲ್ಲ. ಅಲ್ಲದೆ ಅಂತರಿಕ್ಷ ಕಾರ್ಪೊರೇಶನ್ ನಿಗದಿತ ಅವಧಿ (ಮೂರು ವರ್ಷ)ಯೊಳಗೆ ತನ್ನ ಭರವಸೆ ಈಡೇರಿಸದಿದ್ದರೆ ದಂಡ ತೆರುವ ಅಂಶ ಹಣಕಾಸು ನಷ್ಟ ಇಲ್ಲ ಎಂಬ ಹೇಳಿಕೆಯ ಮೇಲೂ ಪ್ರಶ್ನೆಚಿಹ್ನೆ ಇಟ್ಟಿದೆ.


ಕೃಪೆ: ದಿ ಹಿಂದು

ದೇವಸ್ ಮಲ್ಟಿಮೀಡಿಯ ಕಂಪನಿಯ ಹೇಳಿಕೆಯ ಪ್ರಕಾರ ಪ್ರತಿಯೊಂದು ಹಂತದಲ್ಲೂ ಈ ವ್ಯವಹಾರಕ್ಕೆ ಸರಕಾರದ ಪರೋಕ್ಷ, ಪ್ರತ್ಯಕ್ಷ ಮಂಜೂರಾತಿ ಸಿಕ್ಕಿದೆ. 2003ರಲ್ಲಿ ಈ ವ್ಯವಹಾರದ ಮಾತುಕತೆ ಆರಂಭವಾಗಿ ಅಂತರಿಕ್ಷ ಕಾರ್ಪೊರೇಶನಿನ ಆಡಳಿತ ಮಂಡಳಿ ಇದನ್ನು ಮಂಜೂರು ಮಾಡಿದಾಗ ಇಸ್ರೊ ಅಧ್ಯಕ್ಷರು, ಸರಕಾರದ ಬಾಹ್ಯಾಕಾಶ ಇಲಾಖೆಯ ಪ್ರತಿನಿಧಿಗಳು ಮತ್ತು ರತನ್ ಟಾಟಾರಂತಹ 'ಸ್ವತಂತ್ರ' ಪ್ರತಿಷ್ಠಿತರು ಇದ್ದರಂತೆ. ನಂತರ ಬಾಹ್ಯಾಕಾಶ ಆಯೋಗ ಇದನ್ನು ಮಂಜೂರು ಮಾಡಿತು. ಸಂಪುಟ ಕಾರ್ಯದರ್ಶಿ, ವಿಜ್ಞಾನ-ತಂತ್ರಜ್ಞಾನ ಇಲಾಖೆಯ ಮಂತ್ರಿಗಳು, ಇಸ್ರೊ ಅಧ್ಯಕ್ಷರು ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರು ಈ ಆಯೋಗದ ಸದಸ್ಯರು. 2005ರಲ್ಲಿ ಕೇಂದ್ರ ಸಂಪುಟವೂ ಇದಕ್ಕೆ ಮಂಜೂರಾತಿ ನೀಡಿತು ಎಂಬ ದೇವಸ್ ಮುಖ್ಯಸ್ಥರ ಹೇಳಿಕೆ ಪ್ರಧಾನ ಮಂತ್ರಿಗಳ ಕಚೇರಿಯ ಹೇಳಿಕೆಯನ್ನು ಎಷ್ಟರ ಮಟ್ಟಿಗೆ ನಂಬಬಹುದು ಎಂಬ ದೊಡ್ಡ ಪ್ರಶ್ನೆಯನ್ನು ದೇಶದ ಮುಂದಿಟ್ಟಿದೆ.

★

'ಸಶಸ್ತ್ರ ಕ್ಯಾಂಪ್' ಗದ್ದಲ: ಯುಪಿಎಗೆ ಮುಜುಗರ

ಯುಪಿಎ-2 ಗ್ರಹಮಂತ್ರಿಗಳು ಮಾವೋವಾದಿಗಳು ಪ್ರಜಾಪ್ರಭುತ್ವ, ಶಾಂತಿ ಮತ್ತು ಜನಗಳ ಬದುಕಿನ ಹಕ್ಕನ್ನು ಬುಡಮೇಲು ಮಾಡುವವರು ಎಂದು ಖಂಡಿಸುತ್ತಿರುವಾಗಲೇ ಅವರ ಮಿತ್ರಪಕ್ಷ ತೃಣಮೂಲ ಕಾಂಗ್ರೆಸ್ ಅದೇ ಮಾವೋವಾದಿಗಳೊಂದಿಗೆ ಶಾಮೀಲಾಗಿರುವ ಇನ್ನೂ ಒಂದು ಉದಾಹರಣೆ ಬೆಳಕಿಗೆ ಬಂದಿದೆ. ಜನವರಿ 31ರಂದು ಪಶ್ಚಿಮ ಬಂಗಾಲ ಪೋಲೀಸರು ಮಿದ್ನಾಪುರದ ಮುನಿಸಿಪಲ್ ಅತಿಥಿ ಗ್ರಹದಲ್ಲಿ ತೃಣಮೂಲ ಕಾಂಗ್ರೆಸ್ ನಡೆಸುತ್ತಿದ್ದ 'ಪರಿಹಾರ ಕ್ಯಾಂಪ್' ಮೇಲೆ ದಾಳಿಮಾಡಿ ಅಲ್ಲಿ ಅಡಗಿದ್ದ ಇಬ್ಬರು ಮಾವೋವಾದಿ ತಂಡದ ಸದಸ್ಯರನ್ನು, ಅಮಿಯ ಮಹತೊ ಮತ್ತು ಅಸೀಮ್ ಮಹತೊನನ್ನು ಬಂಧಿಸಿದರು. ಇವರಿಬ್ಬರ ಮೇಲೂ ಸಿಲ್ದಾದಲ್ಲಿ ಇಎಫ್‌ಆರ್ ಕ್ಯಾಂಪಿನ ಮೇಲೆ ದಾಳಿ ಮಾಡಿ ಇಪ್ಪತ್ತಕ್ಕೂ ಹೆಚ್ಚು ಸಿಬ್ಬಂದಿಯ ಅಮಾನುಷ ಹತ್ಯೆ ಮಾಡಿದ ಆರೋಪ ಇದೆ. ಪೋಲೀಸರು ಅವರನ್ನು ಬಂಧಿಸದಂತೆ ತಡೆಯಲು ತೃಣಮೂಲ ಮಂದಿ ಪ್ರಯತ್ನಿಸಿದರು. ಈ ಕರಾಳ ಕೃತ್ಯವನ್ನು ಸಾಮಾನ್ಯ ಸಂಗತಿಯೆಂಬಂತೆ ತಳ್ಳಿ ಹಾಕಲು ಯುಪಿಎ-2 ರೈಲು ಮಂತ್ರಿಗಳು ಈ ಹಿಂದೆ ಪ್ರಯತ್ನಿಸಿದ್ದರೆಂಬುದನ್ನೂ ಇಲ್ಲಿ ನೆನೆಪಿಸಿಕೊಳ್ಳಬಹುದು.

ಇದಕ್ಕೆ ಎರಡು ದಿನಗಳ ಹಿಂದೆ ತೃಣಮೂಲಿಗಳು ಸಂಘಟಿಸಿದ ಅವರ ಕೇಂದ್ರ ಮಂತ್ರಿ ಶಿಶಿರ್ ಅಧಿಕಾರಿ ಭಾಗವಹಿಸಿದ ಸಭೆಯಲ್ಲಿ ಪಿಸಿಪಿಎ ಕಾರ್ಯಕರ್ತರು, ಅವರ ಬಾವುಟ, ಬ್ಯಾನರುಗಳೊಂದಿಗೆ ಭಾಗವಹಿಸಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ. ಈ ಪಿಸಿಪಿಎ ಒಂದು ಮಾವೋವಾದಿ ಸಂಘಟನೆ ಎಂದು ಸ್ವತಃ ಕೇಂದ್ರ ಗ್ರಹ ಮಂತ್ರಿಗಳು ರಾಜ್ಯ ಸಭೆಯಲ್ಲಿ ಹೇಳಿದ್ದರು.

ಈ ಎಲ್ಲ ಅಂಶಗಳನ್ನು ಸಿಪಿಐ(ಎಂ) ರಾಜ್ಯ ಸಭಾ ಸದಸ್ಯರಾದ ಸೀತಾರಾಂ ಯೆಚುರಿ ಫೆಬ್ರುವರಿ 1ರಂದು ಕೇಂದ್ರ ಗ್ರಹ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಅಲ್ಲದೆ ತಮ್ಮ ತೃಣಮೂಲ ಸಹಯೋಗಿಯ ಪದಗಳನ್ನು ಎರವಲು ಪಡೆದು ಸ್ವತಃ ಕೇಂದ್ರ ಗ್ರಹ ಮಂತ್ರಿಗಳು ಸಿಪಿಐ(ಎಂ) ನಡೆಸುತ್ತಿದೆ ಎಂದು ಆಪಾದಿಸಿದ 'ಸಶಸ್ತ್ರ ಕ್ಯಾಂಪ್'ಗಳ ಶೋಧನೆ ನಡೆಸಿದ ಸಿಆರ್‌ಪಿಎಫ್ ಅಲ್ಲಿ ಯಾವ ಶಸ್ತ್ರಾಸ್ತ್ರಗಳು ಸಿಕ್ಕಿಲ್ಲ, ಟಿಎಂಸಿ-ಮಾವೋವಾದಿ ಕಿರುಕುಳಗಳಿಂದ ಮನೆ ಮಾರು ಬಿಟ್ಟು ಬಂದ ನಿರಾಶ್ರಿತರು ಮಾತ್ರ ಆ ಕ್ಯಾಂಪ್‌ಗಳಲ್ಲಿದ್ದರು ಎಂದು ಅವರ ಪಟ್ಟಿ ಮಾಡುತ್ತಿದ್ದಾರೆ ಎಂಬುದನ್ನು ಯೆಚುರಿ ತಮ್ಮ ಪತ್ರದಲ್ಲಿ ಕೇಂದ್ರ ಗ್ರಹಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಆಗ ಎಬ್ಬಿಸಿದ 'ಸಶಸ್ತ್ರ ಕ್ಯಾಂಪ್'ಗಳ ಈ ಗದ್ದಲ ಟಿಎಂಸಿ-ಮಾವೋವಾದಿ ಕೂಟದ ವಗ್ಗ ಚಟುವಟಿಕೆಗಳಿಗೆ ನೆರವಾಗಿದೆಯೇನೋ ಎಂಬ ಕಳವಳಕಾರಿ ಭಾವನೆ ಬರದಿರದು ಎಂದು ಯೆಚುರಿಯವರು ಯುಪಿಎ ಗ್ರಹಮಂತ್ರಿಗಳಿಗೆ ಬರೆದಿರುವ ಈ ಪತ್ರದಲ್ಲಿ ಹೇಳಿದ್ದಾರೆ.

ಇಂತಹ ತೃಣಮೂಲಿಗಳೊಂದಿಗೆ ತನ್ನ ಮೈತ್ರಿಯ ಅಸಂಗತತೆಗೆ ಕಾಂಗ್ರೆಸ್ ಮುಂದೆ ಖೇದ ಪಡಬೇಕಾಗಬಹುದು ಎಂದಾಗ ಯುಪಿಎ ಹಣಕಾಸು ಮಂತ್ರಿಗಳು ತನ್ನ ದೀರ್ಘ ರಾಜಕೀಯ ಅನುಭವವನ್ನೂ ಮರೆತು 'ಸಿಪಿಐ(ಎಂ) ನಿಂದ ನಾವು ಪಾಠ ಕಲಿಯಬೇಕಾಗಿಲ್ಲ' ಎಂದು ಹೇಳಿದ್ದಾರೆ. ದೇಶದ ಪ್ರಜಾಪ್ರಭುತ್ವವಾದಿಗಳು ಕಾದು ನೋಡಬೇಕಾಗಿದೆ.

★

ವಿದೇಶಗಳಲ್ಲಿ ಕಪ್ಪು ಹಣ 'ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ'ಯೆಂಬ ರಾಗ

ವಿದೇಶಿ ಬ್ಯಾಂಕುಗಳಲ್ಲಿ ಹಣ ಪೇರಿಸಿಟ್ಟ ಆ 'ಮುಖಗೇಡಿ'ಗಳು ಯಾರು, ಆ ಹಣದ ಮೂಲಗಳೇನು ಎಂಬ ಸುಪ್ರಿಂ ಕೋರ್ಟು ಮತ್ತೆ-ಮತ್ತೆ ಕೇಳುತ್ತಿದ್ದರೂ, ಇದನ್ನು ಕೇವಲ ತೆರಿಗೆ ವಂಚನೆಯ ಪ್ರಶ್ನೆಯಾಗಿ ನೋಡಬೇಡಿ ಎಂದು ಹೇಳುತ್ತಿದ್ದರೂ ಯುಪಿಎ-2 ಸರಕಾರದಿಂದ ಸ್ಪಷ್ಟ ಉತ್ತರಗಳು ಇನ್ನೂ ಇಲ್ಲ, 'ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಸರ್ವೋಚ್ಚ ನ್ಯಾಯಾಲಯವನ್ನು ನಂಬಿಸುವ ಪ್ರಯತ್ನದಲ್ಲಿದೆಯಷ್ಟೇ.

ಈ ಮೊಕದ್ದಮೆಯ ವೇಳೆ ಹೊರಬಂದ ಸಂಗತಿಗಳು ಸರಕಾರ ಇದುವರೆಗೆ ಏಕೆ 'ಕ್ರಮ' ಕೈಗೊಂಡಿಲ್ಲ ಎಂಬ ಪ್ರಶ್ನೆಗಳನ್ನೇ ಎಬ್ಬಿಸುತ್ತವೆ. ಭಾರತ ಸರಕಾರ ಸ್ವಿಝರ್ಲೆಂಡಿನ ಸರಕಾರದೊಡನೆ ಮಾಡಿಕೊಂಡ ಪ್ರೊಟೊಕೋಲ್ ನಿಂದಾಗಿ ಆ ದೇಶದಿಂದ ಮಾಹಿತಿ ಪಡೆಯುವುದು ಅಸಾಧ್ಯ ಎಂದು ವಕೀಲ ರಾಮ್ ಜೇಠ್ಮಲಾನಿ ಹೇಳಿದರೆ, ಸ್ವಿಝರ್ಲೆಂಡಿನ ಯುಬಿಎಸ್ ಬ್ಯಾಂಕ್ ಭಾರತದ ರಿಸರ್ವ್ ಬ್ಯಾಂಕಿನ ನಿಯಮಗಳನ್ನು ಈಡೇರಿಸದಿದ್ದರೂ ಅದಕ್ಕೆ ಭಾರತದಲ್ಲಿ ಶಾಖೆ ತೆರೆಯಲು ಸ್ವಿಸ್ ಸರಕಾರಕ್ಕೆ ಯುಪಿಎ ಸರಕಾರ ಅನುಮತಿ ಕೊಟ್ಟಿದೆ, ಆದರೆ ಬೇರೆ ದೇಶಗಳಿಗೆ ಅಲ್ಲಿರುವ ತಮ್ಮ ದೇಶದ ಕಪ್ಪು ಹಣವನ್ನು ಪಡೆಯಲು ಸಾಧ್ಯವಾದರೂ ಯುಪಿಎ ಸರಕಾರಕ್ಕೆ ಸಾಧ್ಯವಾಗಿಲ್ಲ ಎಂದು ಮಾಜಿ ಆದಾಯ ತೆರಿಗೆ ಅಧಿಕಾರಿ ಕೆ.ವಿ.ಎಂ.ಪೈ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಸುಮಾರು 75 ದೇಶಗಳೊಂದಿಗೆ ಸಮಗ್ರ ಡಿಟಿಎಎ ಗಳಿಗೆ ಸಹಿ ಹಾಕಿದ್ದರೂ ಯಾವುದೇ ಟಿಐಇಎ(ತೆರಿಗೆ ಮಾಹಿತಿ ವಿನಿಮಯ ಒಪ್ಪಂದ)ಗಳನ್ನು

ಪುಟ 15 ಕ್ಕೆ

ಬೆಂಗಳೂರು : ಬೆಲೆ ಏರಿಕೆ - ಭ್ರಷ್ಟಾಚಾರಗಳ ವಿರುದ್ಧ

ಎಡ - ಜಾತ್ಯಾತೀತ ಪಕ್ಷಗಳ ಆಂದೋಲನ

ಫೆಬ್ರವರಿ 9, 2011 ಬೆಂಗಳೂರಿನ ಆನಂದರಾವ್ ವೃತ್ತದ ಬಳಿ ಇರುವ ಗಾಂಧಿ ಪ್ರತಿಮೆ ಬಳಿ ನೂರಾರು ಜನ ನೆರೆದರು. ಅಲ್ಲಿ ಸಿಪಿಐ(ಎಂ)-ಸಿಪಿಐಗಳ ಫಾರ್ವರ್ಡ್ ಬ್ಲಾಕ್‌ಗಳ ಕೆಂಬಾವುಟಗಳು, ಜನತಾದಳ ಪಕ್ಷದ ಹಸಿರು ಬಾವುಟಗಳು ಹಾರಾಡಿದವು.

ನೆರೆದ ಜನರು ಕೇಂದ್ರ ರಾಜ್ಯ ಸರ್ಕಾರಗಳ ಹಗರಣಕೋರತನಕ್ಕೆ ಛೀಮಾರಿ ಹಾಕಿದರು. ಧಿಕ್ಕಾರ ಕೂಗಿದರು. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸದೇ ಬೆಲೆ ಏರಿಕೆಯ ಬೆಂಕಿಗೆ ತುಪ್ಪ ಸುರಿಯುವ ನೀತಿಯನ್ನು ಖಂಡಿಸಿದರು.

ಪ್ರತಿಭಟನಾ ಮೆರವಣಿಗೆಯು ಗಾಂಧಿ ಪ್ರತಿಮೆಯಿಂದ ರಾಜಭವನ ಕಡೆ ನಡೆಯಿತು. ಸ್ವಾತಂತ್ರ್ಯ ಉದ್ಯಾನವನದ ಬಳಿ ಪೊಲೀಸರು ಮೆರವಣಿಗೆ ತಡೆ ಹಾಕಿದರು. ಆಗ ಅದು ಒಂದು ಪ್ರತಿಭಟನಾ ಸಭೆಯಾಗಿ ಮಾರ್ಪಟ್ಟಿತು.

ಈ ಸಂದರ್ಭದಲ್ಲಿ ವಿವಿಧ ಪಕ್ಷಗಳ ಮುಖಂಡರು ಮಾತನಾಡಿದರು. ಮಾಜಿ ಶಾಸಕರು, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ ಕೇಂದ್ರ ಸರ್ಕಾರವು ಬೆಲೆ ಏರಿಕೆಗೆ ಕಾರಣವಾಗಿ ಒಂದು ಇಲಾಖೆಯತ್ತ ಕೈ ತೋರಿಸುತ್ತಿದೆ. ಯುಪಿಎ ಸರ್ಕಾರಕ್ಕೆ ಒಂದು ನೀತಿ ಎಂಬುದಿಲ್ಲವೇ ಎಂದು ಕಟುವಾಗಿ ಪ್ರಶ್ನಿಸಿದರು. ಯಡಿಯೂರಪ್ಪನವರ ಸರ್ಕಾರ ಭ್ರಷ್ಟಾಚಾರದಲ್ಲಿ ಹೊಸ ದಾಖಲಾತಿ ಸೃಷ್ಟಿಸಿದೆ ಎಂದೂ ಘೋಷಿಸಿದರು.


ಸಿಪಿಐ ಪಕ್ಷದ ರಾಜ್ಯ ಮುಖಂಡರಾದ ಅನಂತಸುಬ್ಬರಾವ್‌ರವರು ಮಾತನಾಡಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳ ಅಡಿಯಲ್ಲಿ ಕಾರ್ಮಿಕರು, ರೈತರು ಜನಗಳ ನರಳಾಟ ಹೆಚ್ಚಿದೆ ಎಂದು ಟೀಕಿಸಿರು.

ಜೆಡಿ(ಎಸ್) ಮುಖಂಡರು, ಮಾಜಿ ಸಂಸದ ಬಸವರಾಜ ಪಾಟೀಲ ಯತ್ನಾಳ್ ಮಾತನಾಡಿ ದೇಶದಲ್ಲಿ ಎಡಪಕ್ಷಗಳ ನೇತೃತ್ವದ ಹೋರಾಟದಲ್ಲಿ ಕ್ರಾಂತಿಕಾರಿ ಅಮೂಲಾಗ್ರ ಬದಲಾವಣೆ ಬಂದಲ್ಲಿ ಮಾತ್ರ ಪರಿಸ್ಥಿತಿ ಉತ್ತಮವಾಗುತ್ತದೆ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮಾತನಾಡಿ ಕೇಂದ್ರ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಯುಪಿಎ ಯೇತರ, ಬಿಜೆಪಿಯೇತರ ಜಾತ್ಯಾತೀತ ಪಕ್ಷಗಳು ಹೋರಾಟವನ್ನು ತೀವ್ರಗೊಳಿಸಲಿವೆ ಎಂದು ಘೋಷಿಸಿದರು. ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರ ತಾವು ಕಂಡ ಅತ್ಯಂತ ಭ್ರಷ್ಟ ಮತ್ತು ಕೆಟ್ಟ ಸರ್ಕಾರ ಎಂದು ಖಂಡಿಸಿದರು.

ಪ್ರತಿಭಟನೆಯಲ್ಲಿ ಜನತಾದಳ ಮುಖಂಡರುಗಳಾದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ, ಮಾಜಿ ಸಂಸದ ಸಿ.ನಾರಾಯಣಸ್ವಾಮಿ ವಕ್ತಾರರಾದ ವೈಎಸ್‌ವಿ ದತ್ತಾ ಮುಂತಾದವರು, ಸಿಪಿಐನ ಮುಖಂಡರಾದ ಎಂ.ಸಿ.ವೆಂಕಟರಾಮು, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಜಿ.ಸಿ. ಬಯ್ಯಾರೆಡ್ಡಿ, ಎಸ್.ವೈ. ಗುರು ಶಾಂತ್, ಎಸ್.ಪ್ರಸನ್ನಕುಮಾರ್, ಜಿಲ್ಲಾಕಾರ್ಯದರ್ಶಿ ಕೆ.ಪ್ರಕಾಶ್ ಮುಂತಾದವರು ಪಾಲ್ಗೊಂಡರು.

ಪ್ರತಿಭಟನಾ ಸಭೆಯ ನಂತರ ರಾಜಭವನಕ್ಕೆ ತೆರಳಲು ಯತ್ನಿಸಿದ ಮುಖಂಡರು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.



ಜಿ.ವಿ.ಶ್ರೀರಾಮರೆಡ್ಡಿಯವರು ಜನರನ್ನುದ್ದೇಶಿಸಿ....



ಮಾಜಿ ಪ್ರಧಾನಿ ದೇವೇಗೌಡರು ಮಾತನಾಡುತ್ತಿರುವುದು

ಸ್ವಾತಂತ್ರ್ಯ ಉದ್ಯಾನದ ಬಳಿ ಪ್ರತಿಭಟನಾ ಸಭೆ



ಬಂಧನಕ್ಕೆ ಒಳಗಾಗುತ್ತಿರುವ ಕಾರ್ಯಕರ್ತರು



ಭಾರತ ಮೂಲತಃ ವಲಸಿಗರ ದೇಶ - ಸುಪ್ರೀಂಕೋರ್ಟ್

ಪುಟ 16 ರಿಂದ

ಕೆಳಮಟ್ಟದಲ್ಲಿತ್ತು ಎಂದು ಈ ಸಂಶೋಧನೆ ತಿಳಿಸಿದೆ.

ಈ ಮುಂಚಿನ ಸಂಶೋಧನೆಯ ತಿಳುವಳಿಕೆ:

ಈ ಸಂಶೋಧನೆಯು ಇದಕ್ಕೂ ಮೊದಲಿನ ಅಧ್ಯಯನಕ್ಕೆ ಸವಾಲೆಸೆದಂತಾಗಿದೆ. ಏಕೆಂದರೆ, ಸುಮಾರು 70,000 ವರ್ಷಗಳ ಹಿಂದೆ ಆಫ್ರಿಕಾದಿಂದ ಮಾನವನ ಮೂಲ ಹೋಮೋಸೇಪಿಯನ್ನರು ತೆರಳಿ ಮೆಡಿಟರೇನಿಯನ್ ತಟದ ಉದ್ದಕ್ಕೂ ಉತ್ತರಾಭಿಮುಖವಾಗಿ ವಲಸೆ ಹೋಗಿದ್ದರು ಎಂದು ಈ ಮೊದಲು ತಿಳಿಯಲಾಗಿತ್ತು. ಹಾಗೂ 70,000 ವರ್ಷಗಳ ಹಿಂದೆ ಮಧ್ಯ ಏಷ್ಯಾವನ್ನು ತಲುಪಿದ ಮೇಲೆ ಆಧುನಿಕ ಮಾನವರ ಪೂರ್ವಜರು ಬಹುಬೇಗ ಯೂರೋಪ್ ಮತ್ತು ಏಷ್ಯಾ ಮೂಲಕ ಹರಡಿ ಕೊಂಡರು ಎನ್ನಲಾಗಿತ್ತು. ಅಲ್ಲದೆ ಆಫ್ರಿಕಾದಿಂದ ಈ ಮುಂಚೆಯೇ ವಲಸೆ ಹೋದ ಪರಿಣಾಮವಾಗಿ ಮನುಷ್ಯನ ಪೂರ್ವಜರಾದ ನಿಯಾಂಡ್ರತಲ್ ಮತ್ತು ಇತರೆ ಹೋಮಿನಿಡ್‌ಗಳು ಈಗಾಗಲೇ ಅಲ್ಲಿ ವಾಸಿಸುತ್ತಿದ್ದರು ಎನ್ನಲಾಗಿತ್ತು.



ಪ್ರಸ್ತುತ ಸಂಶೋಧನೆಗೆ ಆಧಾರವಾಗಿ ಕ್ರಿ.ಪೂ 1,25,000 ಕ್ಕೂ ಹಿಂದಿನ ಕಲ್ಲಿನ ಆಯುಧಗಳು ಜೆಬೆಲ್ ಫಯಾ ಎಂಬ ಉತ್ಖನನ ಸ್ಥಳದಲ್ಲಿ ದೊರೆತಿವೆ. ಅದೇ ಕಾಲಘಟ್ಟದಲ್ಲಿ, ಈಶಾನ್ಯ ಆಫ್ರಿಕಾದಲ್ಲಿ ದೊರೆತಿರುವ ಕಲ್ಲಿನ ಆಯುಧಗಳಿಗೆ ಇವು ಹೋಲಿಕೆಯಾಗುತ್ತವೆ ಮತ್ತು ಆ ಸಂದರ್ಭದಲ್ಲಿ ಅರೇಬಿಯಾ ಪ್ರದೇಶವು ಈಗಿನಂತೆ ಮರುಭೂಮಿಯಾಗಿರದೆ ತೇವವಾಗಿದ್ದು, ಹಸಿರು, ಸರೋವರಗಳು ಮತ್ತು ನದಿಗಳಿಂದ ಕಂಗೊಳಿಸುತ್ತಿತ್ತು ಎನ್ನಲಾಗಿದೆ.

ಲಂಡನ್ ವಿಶ್ವವಿದ್ಯಾಲಯದ ಸಿಮನ್ ಆರ್ಮಿಟೇಜ್ ಎಂಬ ವಿಜ್ಞಾನಿಯು ಹೇಳುವಂತೆ 'ನಮ್ಮಂತೆ ಇರುವ ಆಧುನಿಕ ಮನುಷ್ಯರು 2,00,000 ವರ್ಷಗಳ ಹಿಂದೆ ಆಫ್ರಿಕಾದಲ್ಲಿ ವಿಕಾಸಗೊಳ್ಳುತ್ತಾ ವಿಶ್ವದಾದ್ಯಂತ ಹರಡಿಹೋದರು'. ಈ ಹೊಸ ಪುರಾವೆಯಿಂದ ಮನುಷ್ಯನ ಪೂರ್ವಜರಾದ ಹೋಮೋಸೇಪಿಯನ್ನರು ಬಹಳ ಕಾಲ ತೆಗೆದುಕೊಂಡು ದಕ್ಷಿಣ ಏಷ್ಯಾ ಮೂಲಕ ಆಸ್ಟ್ರೇಲಿಯಾಗೆ ವಲಸೆ ಹೋಗಿದ್ದು, ಇಂದು ಅಲ್ಲಿರುವ ಮೂಲನಿವಾಸಿಗಳ ಪೂರ್ವಜರು ಸುಮಾರು 50,000 ವರ್ಷಗಳ ಹಿಂದೆ ಅಲ್ಲಿ ನೆಲೆಸಲಾರಂಭಿಸಿದರು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಆದರೆ ಕೆಲವು ವಿಜ್ಞಾನಿಗಳು, ಕೇವಲ ಒಂದು ಸ್ಥಳದ ಉತ್ಖನನ ಪುರಾವೆಗಳಿಂದ ತಕ್ಷಣವೇ ಈ ಅಭಿಪ್ರಾಯಕ್ಕೆ ಬರಲಾಗದು ಎಂದು ಹೇಳಿದ್ದಾರೆ.

ಭಾರತ ದೇಶ ಬಹುತೇಕ ವಲಸಿಗರ ದೇಶ: ಸುಪ್ರೀಂಕೋರ್ಟ್ ತೀರ್ಪು

ಕೋಮುವಾದಿ ಬಿಜೆಪಿ ಮತ್ತು ಸಂಘಪರಿವಾರಗಳು ಆರ್ಯರನ್ನು ಹೊರತುಪಡಿಸಿದರೆ ಇನ್ನುಳಿದ ಮುಸ್ಲಿಂ, ಕ್ರಿಶ್ಚಿಯನ್ ಇತರೆ ಎಲ್ಲರೂ ಭಾರತಕ್ಕೆ ಇತಿಹಾಸದುದ್ದಕ್ಕೂ ವಲಸೆ ಬಂದಿರುವವರು ಎಂಬ ಹುಸಿ ಪ್ರಚಾರಕ್ಕೆ ಮತ್ತೊಂದು ಹೊಡೆತ ಸುಪ್ರೀಂಕೋರ್ಟ್ ತೀರ್ಪಿನ ಮೂಲಕ ಹೊರಬಿದ್ದಿದೆ. ದ್ರಾವಿಡರು ಇಲ್ಲಿಯ ಮೂಲ ನಿವಾಸಿಗಳೆಂದು ಒಂದು ಕಾಲದಲ್ಲಿ ನಂಬಲಾಗಿತ್ತು. ಆದರೆ, ಕಳೆದ ತಿಂಗಳು ಪ್ರಕರಣವೊಂದರಲ್ಲಿ, ಆರ್ಯರಷ್ಟೆ ಅಲ್ಲ ದ್ರಾವಿಡರು ಕೂಡ ಆಫ್ರಿಕಾದಿಂದ ವಲಸೆ ಬಂದಿರುವವರು ಎಂದು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ಮಾರ್ಕಂಡೇಯ ಕಟ್ಜು ಮತ್ತು ಜ್ಞಾನ್ ಸುಧಾ ಮಿಶ್ರ ತೀರ್ಪು ನೀಡಿದ್ದಾರೆ.

ಯಾಕೆ ಕೂಲಿ ಹೆಚ್ಚಿಸಬೇಕು ?

ಪುಟ 2 ರಿಂದ

ಖಾತ್ರಿ ಯೋಜನೆಗಾಗಿ ಜಾರಿಯಾಗಿರುವ ಹಣ ರೂ. [illegible]600 ಕೋಟಿ. ಅದರಲ್ಲಿ ಇಲ್ಲಿಯವರೆಗೆ ರೂ.1,140 ಕೋಟಿ ಮಾತ್ರ ಖರ್ಚಾಗಿದೆ. ಕಳೆದ ವರ್ಷ ಇದೇ ಸಮಯಕ್ಕೆ **ರೂ.1,750 ಕೋಟಿ** ಖರ್ಚಾಗಿತ್ತು. ಯಾಕೆ ಹೀಗೆ ಆಗುತ್ತಿದೆ ಎಂದರೆ.....

ಕಳೆದ ವರ್ಷವನ್ನು 'ಖರ್ಚು ಮಾಡುವ ವರ್ಷ'ವೆಂದು ಕರೆದು ಕಾಂಟ್ರಾಕ್ಟುದಾರರಿಗೆ ಕಾಮಗಾರಿ ನೀಡಿ ಅಕ್ರಮಗಳನ್ನು ನಡೆಸಲಾಯಿತು. ಈ ವರ್ಷ 'ಗುಣಮಟ್ಟದ ವರ್ಷ' ಅಂತ ಕರೆದು ಯೋಜನೆಯನ್ನೇ ಜಾರಿ ಮಾಡಿದೆ ಹಣ ಖರ್ಚಾಗದೇ ಹಾಗೇ ಉಳಿದಿದೆ.

ಉದ್ಯೋಗ ಖಾತ್ರಿ : ಘೋಷಿತ ಆಶಯ ಆಕರ್ಷಕ ಆದರೆ ಕೊಡುವ ಕೂಲಿ.......?

ಉದ್ಯೋಗ ಖಾತ್ರಿ ಯೋಜನೆಯ ಘೋಷಿತ ಆಶಯ ಬಹಳ ಆಕರ್ಷಕವಾಗಿಯೇ ಇದೆ.

ಗ್ರಾಮೀಣ ಕೂಲಿಕಾರರ ನಿರುದ್ಯೋಗ ನಿವಾರಿಸಬೇಕು.... ಅವರಿಗೆ ಕನಿಷ್ಟ ಉದ್ಯೋಗದ ಖಾತ್ರಿಯನ್ನಾದರೂ ಒದಗಿಸಬೇಕು. ಕೂಲಿಕಾರರ ಬಡರೈತರು ದೂರದೂರುಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬೇಕು. ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಕೆಲಸ ಸಿಗುವಂತಾಗಬೇಕು. ಗ್ರಾಮೀಣಾಭಿವೃದ್ಧಿ ಸಾಧಿಸಬೇಕು....

ಬರೀ ಆಶಯ, ಘೋಷಣೆ ಆಕರ್ಷಕವಾಗಿದ್ದರೆ ಸಾಲದು. ಯೋಜನೆಯೂ ಅಲ್ಲಿ ಕೊಡುವ ಕೂಲಿಯೂ ಆಕರ್ಷಕವಾಗಿರಬೇಕು.

ಉದ್ಯೋಗ ಖಾತ್ರಿ ಕಾನೂನು ಏನಾದರೂ ಹೇಳಲಿ, ಜಾರಿಯಲ್ಲಿ ಇರುವುದೇನು? ಮೊದಲಿಗೆ ಸರ್ಕಾರಕ್ಕೆ ಅಧಿಕಾರಿ ವರ್ಗಕ್ಕೆ ಯೋಜನೆ ಜಾರಿ ಮಾಡಬೇಕೆಂಬ ಉದ್ದೇಶವೇ ಇದ್ದಂತೆ ಕಾಣುವುದಿಲ್ಲ. ಜನರೇ ಅರ್ಜಿ ಹಾಕಿ ಒತ್ತಾಯ - ಹೋರಾಟ ಮಾಡಿ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಮಾಡಬೇಕು.

ಗುದ್ದಾಡಿ ಜಾರಿ ಮಾಡಲಾದ ಕೂಲಿ ಕೆಲಸಕ್ಕೆ ಕಾನೂನಿನಂತೆ ಕೂಲಿ 15 ದಿನದೊಳಗೆ ಕೊಡುತ್ತಾರೆಯೇ (ಈಗ 1 ವಾರದೊಳಗೆ ಕೂಲಿ ಕೊಡಬೇಕೆಂದು ಕಾನೂನಿನಲ್ಲಿ ಬದಲಾವಣೆ ತರಲಾಗಿದೆ) ಇಲ್ಲ. ತಿಂಗಳು 2 ತಿಂಗಳಾದರೂ ಕೂಲಿ ಸಿಗದೆ ಮತ್ತು ಕಾರ್ಮಿಕರು ಹೋರಾಟದ ಬಾವುಟ ಎತ್ತಿ ಕೂಲಿ ಪಡೆಯಬೇಕು.



ಕೂಲಿ ಹೆಚ್ಚಳಕ್ಕಾಗಿ ಒತ್ತಾಯಿಸಿ ರ್‍ಯಾಲಿ - ಬೆಂಗಳೂರು: ಜನವರಿ 31, 2011

ಹೋಗಲಿ ಸಿಗುವ ಕೂಲಿಯಾದರೂ ಆಕರ್ಷಕವಾಗಿದೆಯೇ ಇಲ್ಲ. ದಿನಕ್ಕೆ 100 ರೂಪಾಯಿ (ಇದೀಗ ಕೂಲಿ 125 ಕ್ಕೆ ಹೆಚ್ಚಳವಾಗಿದೆ. ಸತತ ಹೋರಾಟಗಳ ಫಲವಾಗಿ) ಉದ್ಯೋಗ ಖಾತ್ರಿ ಬದಲಿಗೆ ಬೇರೆ ಕಡೆ ದುಡಿದರೆ ಇದಕ್ಕಿಂತ ಹೆಚ್ಚು ಕೂಲಿ ಸಿಗುತ್ತದೆ. ಇನ್ನೂ ಬೇಗಬೇಗನೆ ಕೂಲಿ ಸಿಗುತ್ತದೆ ಎಂದಾಗ ಕೂಲಿಕಾರರು ಬಡ ರೈತರು ದೂರದೂರುಗಳಿಗೆ ವಲಸೆ ಹೋಗುತ್ತಾರೆ. ಅಲ್ಲಿಗೆ ಯೋಜನೆಯ ಮೂಲ ಆಶಯ ಮಣ್ಣುಪಾಲಾದಂತೆಯೇ.

ಮಹಿಳೆಯರೇ ಹೆಚ್ಚು ಏಕೆ?

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈಗ ಕೆಲಸ ಮಾಡುತ್ತಿರುವವರಲ್ಲಿ ಶೇ.90 ಕ್ಕಿಂತ ಹೆಚ್ಚು ಜನರು ಮಹಿಳೆಯರು ಎನ್ನುತ್ತದೆ ಅಂಕಿ ಸಂಖ್ಯೆ. ಇದು ಯಾಕೆ ಹೀಗೆ? ಮನೆಯ ಪುರುಷರು ದೂರವಾದರೂ ಸರಿ ಅಂತ ಹೆಚ್ಚು ಕೂಲಿ ಸಿಗುವ ದೂರದೂರುಗಳಿಗೆ, ನಗರಗಳಿಗೆ ಹೋಗುತ್ತಾರೆ. ಮನೆಯ ಮಕ್ಕಳು ವಯಸ್ಸಾದವರ ಜವಾಬ್ದಾರಿ, ಕುಟುಂಬದ ಹಲವು ಹೊರೆಯನ್ನು ಹೊತ್ತುಕೊಂಡ ಮಹಿಳೆ ಹಾಗೆ ದೂರ ಹೋಗಲಾಗದೇ ಮನೆಯಲ್ಲೇ ಉಳಿದು ಗ್ರಾಮೀಣ ಉದ್ಯೋಗ ಖಾತ್ರಿಯ ಕಡಿಮೆ ಕೂಲಿಗೇ ದುಡಿಯುವಂತಾಗಿದೆ.

ಸುಡು ಸುಡು ಬೆಲೆಯೇರಿಕೆ ಆದರೆ ತುಟ್ಟಿಭತ್ಯೆ ಮಾತ್ರ ಇಲ್ಲ

ಉದ್ಯೋಗ ಖಾತ್ರಿ ಯೋಜನೆ ಆಕರ್ಷಕವಾಗದಿರಲು ಮತ್ತೊಂದು ಕಾರಣವೂ ಇದೆ. ಸರಕಾರಿ ನೌಕರರು ಮುಂತಾದ ವೇತನದಾರರಿಗೆ ಬೆಲೆ ಏರಿಕೆಯ ಆಘಾತದಿಂದ ರಕ್ಷಣೆ ಒದಗಿಸುವ ಸಲುವಾಗಿ ಶಾಸನಾತ್ಮಕವಾದ ತುಟ್ಟಿಭತ್ಯೆಯ ಸೌಕರ್ಯ ಇದೆ. ಅಂದರೆ ವಸ್ತು - ಸೇವೆಗಳ ಬೆಲೆ ಏರಿ ನಿಜ ವೇತನ ಕುಸಿದಾಗ ಅದನ್ನು ಸರಿದೂಗಿಸಲು ತುಟ್ಟಿಭತ್ಯೆಯನ್ನು ವೇತನಕ್ಕೆ ಸೇರಿಸಲಾಗುತ್ತದೆ. ಆದರೆ ಇಂತಹ ಸೌಲಭ್ಯ, ಉದ್ಯೋಗ ಖಾತ್ರಿ ಯೋಜನೆಯ ಕೂಲಿಕಾರರಿಗೆ ಈಗ ಇಲ್ಲ. ಆದರೆ ಅದು ಅಗತ್ಯವಾಗಿ ಸಿಗಬೇಕಾಗಿದೆ.

ಇದೀಗ ದಿನಗೂಲಿ 125 ರೂ.ಗೆ ಏರಿದ್ದರೂ ಸಹ ಅಗತ್ಯ ವಸ್ತುಗಳ ಭೀಕರ ಎನ್ನುವಂತಹ ಬೆಲೆ ಏರಿಕೆಯಿಂದಾಗಿ ಹೆಚ್ಚೇನು ಏರಿಕೆ ಆಗಿಯೇ ಇಲ್ಲ ಎನ್ನುವಂತಾಗಿಬಿಡುತ್ತಿದೆ.

ತುಟ್ಟಿಭತ್ಯೆಯನ್ನು ಬಳಕೆದಾರರ ಬೆಲೆ ಸೂಚ್ಯಾಂಕ (ಸಿಪಿಐ) ಆಧಾರದಲ್ಲಿ ನೀಡಲಾಗುತ್ತದೆ. ಕರ್ನಾಟಕದಲ್ಲಿ 2007 ರಲ್ಲಿ ಬಳಕೆದಾರರ ಬೆಲೆ ಸೂಚ್ಯಾಂಕವು 2967 ಪಾಯಿಂಟ್‌ಗಳಷ್ಟಿತ್ತು. ಇದು 2010 ರಲ್ಲಿ 3,944 ಪಾಯಿಂಟುಗಳಿಗೆ ತಲುಪಿದೆ. ಅಂದರೆ ಇಷ್ಟು ವರ್ಷದಲ್ಲಿ 977 ಪಾಯಿಂಟ್‌ಗಳಷ್ಟು ಏರಿಕೆ ದಾಖಲಾಗಿದೆ. ಪ್ರತಿ ಪಾಯಿಂಟ್ 3 ಪೈಸೆಯಂತೆ **ವಿಡಿಎ** ನೀಡಬೇಕು.

ಇದರಂತೆ ಈಗಿನ ಕೂಲಿಗೆ ದಿನವೊಂದಕ್ಕೆ 33.81 ಪೈಸೆ ತುಟ್ಟಿಭತ್ಯೆಯನ್ನು ಸರ್ಕಾರ ಸೇರಿಸಿ ನೀಡಬೇಕಾಗುತ್ತದೆ.

ಆದರೆ ಸರ್ಕಾರ ಈಗ ಮಾಡಲು ಹೊರಟಿರುವುದೇ ಬೇರೆ. ಬರೀ ಸ್ವಲ್ಪ ಕೂಲಿ ಹೆಚ್ಚಳದಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬೆಲೆ ಏರಿಕೆಯಾದಂತೆ ಕೂಲಿ ಹೆಚ್ಚಳದ ಪ್ರಯೋಜನ ಇಲ್ಲವಾಗುತ್ತಾ ಹೋಗುತ್ತದೆ. ಆದ್ದರಿಂದ ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ ಮುಂತಾದವುಗಳು ಈ ಧೋರಣೆಯನ್ನು ವಿರೋಧಿಸುತ್ತವೆ. ಕೂಲಿ ಹೆಚ್ಚಳದ ಜೊತೆಗೆ ಶಾಸನಾತ್ಮಕ ತುಟ್ಟಿಭತ್ಯೆ ಸೌಲಭ್ಯವನ್ನು ನೀಡಬೇಕೆಂದು ಆಗ್ರಹಿಸುತ್ತವೆ.

ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಹೆಚ್ಚಳಕ್ಕಾಗಿ ಒಂದೆಡೆ ಚಳುವಳಿ ನಡೆಸುತ್ತಲೇ ಕರ್ನಾಟಕ ಪ್ರಾಂತ ರೈತ ಸಂಘವು ನ್ಯಾಯಾಲಯದಲ್ಲಿ ಕೂಲಿಯ ಹೆಚ್ಚಳಕ್ಕಾಗಿ ಕಾನೂನು ಹೋರಾಟ ನಡೆಸಿತ್ತು. ಇದರ ಫಲವಾಗಿ 82 ರೂ. ಇದ್ದ ಕೂಲಿಯು ನ್ಯಾಯಾಲಯದ ನಿರ್ದೇಶನದಂತೆ 100 ರೂ.ಗೆ ಏರಿತು.

ಈ ಇದೇ ಕೂಲಿಯ ಪ್ರಶ್ನೆ ಹಾಗೂ ಕೂಲಿಗೆ ಶಾಸನಾತ್ಮಕ ತುಟ್ಟಿಭತ್ಯೆ ಸೇರ್ಪಡೆ ವಿಚಾರವು ಸುಪ್ರಿಂ ಕೋರ್ಟ್ ಮೆಟ್ಟಿಲೇರಿದೆ. ರೈತಸಂಘವು ಈ ಸುಪ್ರಿಂ ಕೋರ್ಟ್ ಪ್ರಕರಣದಲ್ಲಿ ಸಹ ತೊಡಗಿಸಿಕೊಂಡು ಬೇಡಿಕೆ ಈಡೇರಿಕೆಗೆ ಹೋರಾಟ ಮುಂದುವರಿಸಿದೆ.

ಯುಪಿಎ ದರ್ಬಾರ್...

ಪುಟ 13 ರಿಂದ

ಮಾಡಿಕೊಂಡಿಲ್ಲ, ಭ್ರಷ್ಟಾಚಾರದ ವಿರುದ್ಧ ವಿಶ್ವ ಸಂಸ್ಥೆ ಅಂಗೀಕರಿಸಿದ ಅಧಿನಿರ್ಣಯವನ್ನೂ ಭಾರತ ಸರಕಾರ ಇದುವರೆಗೆ ಊರ್ಜಿತಗೊಳಿಸಿಲ್ಲ ಎಂದು ಇನ್ನೊಬ್ಬ ವಕೀಲರು ಹೇಳಿದರು.

ಈ ನಡುವೆ ಹಣಕಾಸು ಮಂತ್ರಾಲಯ ತೆರಿಗೆ ವಂಚಕರಿಗೆ ಇನ್ನೊಂದು 'ಮಾಫಿ' ಸ್ಕೀಂ ಬಗ್ಗೆ ಯೋಚಿಸುತ್ತಿದೆ ಎಂದು ವರದಿಯಾಗಿದೆ. ಅಲ್ಲದೆ ಒಂದು ಅಧ್ಯಯನ ತಂಡವನ್ನು ನೇಮಿಸಿ ತೆರಿಗೆ ವಂಚಕರು 'ತಾವಾಗಿ ತೆರಿಗೆ ಪಾವತಿ ಮಾಡುವಂತೆ' ಏನು ಮಾಡಬೇಕು ಎಂದು ಸಲಹೆ ಕೇಳಿದೆಯಂತೆ. ಪಾಪ, 'ತೆರಿಗೆ ತೆರುವ ಖರ್ಚು' ಹೆಚ್ಚಾಗಿರುವುದೂ ತೆರಿಗೆ ವಂಚನೆಗೆ ಕಾರಣವಾಗಿರಬಹುದು ಎಂದು ಹಣಕಾಸು ಮಂತ್ರಾಲಯದ 'ಆತಂಕ'! ಸರ್ವೋಚ್ಚ ನ್ಯಾಯಾಲಯ ಹೇಳಿದಂತೆ ತೆರಿಗೆ ವಂಚನೆಯ ಪ್ರಶ್ನೆ ಬಿಟ್ಟು ಕಪ್ಪು ಹಣದ ಇತರ ಆಯಾಮಗಳ ಬಗ್ಗೆ ಸರಕಾರ ನಿಜವಾಗಿಯೂ ಯೋಚಿಸುತ್ತಿದೆಯೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

★

ರಕ್ಷಣಾ ವಲಯದಲ್ಲಿ ಎಫ್‌ಡಿಐ ಏರಿಕೆಗೆ ಒತ್ತಡ

ರಕ್ಷಣಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯ ಮೇಲಿನ ಮಿತಿಯನ್ನು 26 ಶೇ.ದಿಂದ 49ಶೇ.ಕ್ಕೆ ಏರಿಸಬೇಕು, ಖಾಸಗಿಯವರಿಗೆ ಹೆಚ್ಚಿನ ಪಾತ್ರವಿರಬೇಕು ಎಂಬುದು ಯುಪಿಎ-2 ಸರಕಾರದ ಹಣಕಾಸು, ಗ್ರಹ ಮತ್ತು ವಾಣಿಜ್ಯ ಮಂತ್ರಿಗಳ ಮಹದಾಸೆ. ವಾಣಿಜ್ಯ ಇಲಾಖೆಯಂತೂ ಈ ಕುರಿತು ಒಂದು ಸಂಪುಟ ಟಿಪ್ಪಣಿಯನ್ನು ತಯಾರಿಸಿಯೂ ಬಿಟ್ಟಿದೆಯಂತೆ. ಆದರೆ ರಕ್ಷಣಾ ಮಂತ್ರಿಗಳು ಈ ಬಗ್ಗೆ ಇನ್ನೂ ತಮ್ಮ ನಿರ್ಧಾರ ತಿಳಿಸಿಲ್ಲ ಎಂದು ಇವರಿಗೆಲ್ಲ ಬೇಸರ. ಹಣಕಾಸು ಮಂತ್ರಿಗಳು ಇತ್ತೀಚೆಗೆ ನಡೆದ ಸಭೆಯಲ್ಲಿ ಈ ಬಗ್ಗೆ ಜೋರಾಗಿಯೇ ಮಾತಾಡಿದರಂತೆ. ರಕ್ಷಣಾ ಮಂತ್ರಿಗಳು ತಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಬೇಗನೇ ತಿಳಿಸಬೇಕು ಎಂದು ತಾಕೀತು ಮಾಡಿದ್ದಾರಂತೆ.

ಇದಾದ ಮೇಲೆ ಒಂದು ಸಮಾರಂಭದಲ್ಲಿ ರಕ್ಷಣಾ ಮಂತ್ರಿಗಳನ್ನು ಪತ್ರಕರ್ತರು ಈ ಬಗ್ಗೆ ಕೇಳಿದಾಗ ಎಫ್‌ಡಿಐ ಮಿತಿ ಏರಿಕೆಗೆ ತಮ್ಮ ಇಲಾಖೆಯ ವಿರೋಧವಿದೆ ಎಂದು ಪುನರುಚ್ಚರಿಸಿದ್ದಾರೆ. ಆದರೆ ಈ ಬಗ್ಗೆ ಸರಕಾರ ಅಂತಿಮವಾಗಿ ನಿರ್ಧರಿಸಿಲ್ಲ ಎಂದೂ ಹೇಳಿದರು.

ಉದ್ಯಮರಂಗದಲ್ಲೂ ಈ ಬಗ್ಗೆ ಭಿನ್ನಾಭಿಪ್ರಯಗಳು ಇವೆಯಂತೆ. ಫಿಕಿ(ದೊಡ್ಡ ಉದ್ಯಮಿಗಳ ಅಖಿಲ ಭಾರತ ಒಕ್ಕೂಟ)ಯ ಅಧ್ಯಕ್ಷರು ಎಫಡಿಐ ಏರಿಕೆ ಬೇಕು ಎಂದರೆ, ಅದೇ ಫಿಕಿಯ ಮಹಾಕಾರ್ಯದರ್ಶಿ ಅಮಿತ್ ಮಿತ್ರ ಯಥಾಸ್ಥಿತಿ ಮುಂದುವರೆಯಲಿ ಎಂದಿದ್ದಾರೆ.

★

ವಿದೇಶಿ ವಿನಿಮಯ ಭಂಡಾರ ಕುಸಿಯುವ ಸಂಭವ ಇಲ್ಲದಿಲ್ಲ

ಹೀಗೆಂದು ಈಗ ಭಾರತದ ರಿಝರ್ವ್ ಬ್ಯಾಂಕ್ ಕೂಡ ಒಪ್ಪಿಕೊಂಡಿದೆ. ಭಾರತದ ವಿದೇಶಿ ವಿನಿಮಯ ಮೀಸಲು ಬಹುಪಾಲು ಸಾಲ ತಂದ ನಿಧಿಗಳಿಂದ ಕೂಡಿದೆ, ಅವು ಇದ್ದಕಿದ್ದಂತೆ ವಾಪಾಸು ಹರಿದು ಹೋಗುವ ಅಪಾಯ ಭಾರತಕ್ಕೆ ಹೆಚ್ಚು ಇದೆ ಎಂದು ಜಪಾನಿನ ಒಂದು ಸಭೆಯಲ್ಲಿ ರಿಝರ್ವ್ ಬ್ಯಾಂಕ್ ಗವರ್ನರ್ ಹೇಳಿದ್ದಾರೆ. ಭಾರತದ ಆರ್ಥಿಕ ವ್ಯವಸ್ಥೆ ಅರಗಿಸಿಕೊಳ್ಳಬಹುದಾದಕ್ಕಿಂತ ಹೆಚ್ಚಿನ ಬಂಡವಾಳ ಹರಿದು ಬರುತ್ತಿರುವುದರಿಂದ ವಿದೇಶಿ ವಿನಿಮಯ ಭಂಡಾರ ಹೆಚ್ಚಿದೆ.

ಫೆಬ್ರವರಿ 23 'ಪಾರ್ಲಿಮೆಂಟ್ ಚಲೋ'

ಬೆಲೆ ಏರಿಕೆ ವಿರುದ್ಧ, ಕಾರ್ಮಿಕ ಕಾನೂನು ಜಾರಿಗಾಗಿ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣೆ ಮತ್ತು ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ರಕ್ಷಣೆಗಾಗಿ ಫೆ. 23 ರಂದು 10 ಲಕ್ಷ ಕಾರ್ಮಿಕರ 'ಪಾರ್ಲಿಮೆಂಟ್ ಚಲೋ' ವನ್ನು ಕೇಂದ್ರ ಕಾರ್ಮಿಕ ಸಂಘಟನೆಗಳು ಸಂಘಟಿಸುತ್ತಿವೆ.

ಈ ಹೋರಾಟದಲ್ಲಿ ಕರ್ನಾಟಕದಿಂದ ಸಿಐಟಿಯು ಪರವಾಗಿ 5 ಸಾವಿರಕ್ಕಿಂತಲೂ ಅಧಿಕ ಕಾರ್ಮಿಕರು ಪಾಲ್ಗೊಳ್ಳುತ್ತಿದ್ದಾರೆ.

JANASHAKTHI KANNADA VARA PATRIKE FEB. 20, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

ಪಿ.ಮಹಮ್ಮದ್‌ರ ಕಾರ್ಟೂನ್ ಗಳ ಸಂಕಲನ 'ವ್ಯಂಗ್ಯ(ವಿ)ಚಿತ್ರ' ಬಿಡುಗಡೆ

"ವ್ಯಂಗ್ಯಚಿತ್ರಕಾರರು ಅನಧಿಕೃತ ವಿರೋಧ ಪಕ್ಷದಂತೆ" – ನ್ಯಾ. ಸಂತೋಷ ಹೆಗಡೆ

ಪಿ.ಮಹಮದ್ ಎಂದರೆ ಯಾರು ಎಂದು ಒಂದಷ್ಟು ಪತ್ರಿಕೆ ಓದುವ, ಒಂದಷ್ಟು ರಾಜಕೀಯದಲ್ಲಿ ಆಸಕ್ತಿ ಹೊಂದಿರುವ ಯಾರಿಗೂ ಹೇಳಬೇಕಾದ ಅಗತ್ಯವೇ ಇಲ್ಲ.

ಪಿ.ಮಹಮದ್ ...ಅಂದಾಕ್ಷಣ ಎಷ್ಟೋ ಜನಕ್ಕೆ ಅವರ ಮುಖ ನೆನಪಿಗೆ ಬರದೇ ಇರಬಹುದು. ಆದರೆ ಆ ಜಾಗದಲ್ಲಿ ತಮ್ಮನ್ನು ಗಾಢವಾಗಿ ಸೆಳೆದ, ತಮ್ಮ ಮನದಲ್ಲಿ ಆಳವಾಗಿ ಅಚ್ಚೊತ್ತಿದ್ದ... ಮಹಮದ್ ಅವರ ಕಾರ್ಟೂನ್ ಖಂಡಿತ ನೆನಪಿಗೆ ಬಂದೇ ಬರುತ್ತದೆ.

ಪ್ರಖರ-ಹರಿತ ವ್ಯಂಗ್ಯ ಚಿತ್ರಗಳಿಂದ ನಾಡಿನಾದ್ಯಂತ ಖ್ಯಾತವಾಗಿರುವ ಪಿ.ಮಹಮದ್‌ರವರ 'ವ್ಯಂಗ್ಯ(ವಿ)ಚಿತ್ರ ಸಂಕಲನ'ದ ಬಿಡುಗಡೆ ಸಮಾರಂಭವು ಫೆಬ್ರವರಿ 10, 2011ರಂದು ಬೆಂಗಳೂರಿನ ಎಸ್‌ಸಿಎಂ ಸಭಾಂಗಣದಲ್ಲಿ ನಡೆಯಿತು.

ಕರ್ನಾಟಕದ ಲೋಕಾಯುಕ್ತರಾದ ನ್ಯಾ: ಸಂತೋಷಹೆಗಡೆಯುವರು ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಒಬ್ಬ ಉತ್ತಮ ವ್ಯಂಗ್ಯ ಚಿತ್ರಕಾರನಾಗಲು ಉತ್ತಮ ಕಲೆ ಮಾತ್ರವಲ್ಲ, ಸಾಕಷ್ಟು ಜ್ಞಾನ ಅಗತ್ಯ. ರಾಜಕೀಯ, ಸಾಮಾಜಿಕ, ಆರ್ಥಿಕ ವಿಚಾರಗಳ ಕುರಿತು ಆಳವಾದ ತಿಳುವಳಿಕೆ ಬೇಕು. ಅಂತಹ ಉತ್ತಮವಾದ ಜ್ಞಾನ ಪಿ.ಮಹಮದ್‌ರವರಿಗೆ ಇದೆ ಎಂದು ಪ್ರಶಂಸಿದರು. ವ್ಯಂಗ್ಯಚಿತ್ರಕಾರರು ಚುನಾಯಿತರಲ್ಲದಿರಬಹುದು, ಅವರ ಸ್ಥಾನ ಅಧಿಕೃತ ಅಲ್ಲದಿರಬಹುದು, ಆದರೆ ವಿರೋಧ ಪಕ್ಷದ ಸದಸ್ಯರಿದ್ದಂತೆ ಎಂದೂ ಹೆಗ್ಡೆ ಹೇಳಿದರು.



ಕರ್ನಾಟಕ ರಾಜ್ಯದಲ್ಲಿ ಕಳೆದ ವಿಧಾನ ಚುನಾವಣೆಯ ನಂತರದಲ್ಲಿ ಬಹುಮತವಿಲ್ಲದ ಸಂದರ್ಭದಲ್ಲಿ ಬಿಜೆಪಿ ನಡೆಸಿದ ಆಪರೇಷನ್ ಕಮಲ ಸನ್ನಿವೇಶವನ್ನು ನೆನಪಿಸಿಕೊಂಡ ಸಂತೋಷ ಹೆಗಡೆಯವರು ಆ ಸಂದರ್ಭದಲ್ಲಿ ಗಣಿ ಅದಿರನ್ನು ಹೊತ್ತು ತಂದು ಸುರಿಯುವಂತೆ, ರೆಡ್ಡಿ ಸಹೋದರರು ಬಿಜೆಪಿಗಾಗಿ ಶಾಸಕರನ್ನು 'ಡಂಪರ್' ಗಳಲ್ಲಿ ಹೊತ್ತು ತಂದು ಸುರಿಯುತ್ತಾ 'ಸಾಕಾ ಇನ್ನಷ್ಟು ಬೇಕಾ' ಎಂದು ಯಡಿಯೂರಪ್ಪನವರನ್ನು ಕೇಳುತ್ತಿರುವ ಖ್ಯಾತ ವ್ಯಂಗ್ಯ ಚಿತ್ರ ಅಂದಿನ ರಾಜಕೀಯ ಸಂದರ್ಭದ ಅತ್ಯಂತ ಪರಿಣಾಮಕಾರಿಯಾದ ವ್ಯಂಗ್ಯ ಎಂದು ಅಭಿನಂದಿಸಿದರು. ಮತ್ತೊಬ್ಬ ಖ್ಯಾತ ವ್ಯಂಗ್ಯಚಿತ್ರಕಾರರಾದ ವಿ.ಜಿ.ನರೇಂದ್ರ ಮಾತನಾಡಿ ಪಿ.ಮಹಮದ್ ಒಬ್ಬ ವಿರೋಧ ಪಕ್ಷದ ನಾಯಕ ಸ್ಥಾನದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಯಾವುದೇ ಮುಜುಗರ ಮುಲಾಜುಗಳಿಲ್ಲದೆ ಯಾವುದೇ ಇಸಂಗಳೊಂದಿಗೆ ರಾಜಿ ಮಾಡಿಕೊಳ್ಳದೇ ವ್ಯಂಗ್ಯ ಚಿತ್ರ ರಚಿಸುತ್ತಿದ್ದಾರೆಂದರು.



ಮಾಧ್ಯಮಗಳು ಜನರಿಂದ ದೂರವಾಗುತ್ತಾ ವ್ಯಕ್ತಿ ನಿಷ್ಠ, ಪಕ್ಷ ನಿಷ್ಠವಾಗುತ್ತಾ ಹೋಗುತ್ತಿವೆ ವ್ಯಂಗ್ಯಚಿತ್ರಕಾರರಿಗೆ ವ್ಯಕ್ತಿನಿಷ್ಠೆ, ಪಕ್ಷ ನಿಷ್ಠೆ ಇಲ್ಲ, ಸತ್ಯದ ಹುಡುಕಾಟ ಮುಖ್ಯ ಎಂದು ಸಮಯ ದೂರದರ್ಶನ ವಾಹಿನಿಯ ಶಶಿಧರ್‌ಭಟ್ ಹೇಳಿದರು. ಜಗತ್ತಿನ ಎಲ್ಲ ಸರ್ವಾಧಿಕಾರಿಗಳೂ ನಗುವಿನ ವಿರೋಧಿಗಳಾಗಿರುತ್ತಾರೆ, ಯಡಿಯೂರಪ್ಪನವರನ್ನು ಸೇರಿ ಎಂದೂ ಭಟ್ ಹೇಳಿದರು.

ಖ್ಯಾತ ನಿರ್ದೇಶಕರಾದ ಬಿ.ಸುರೇಶರವರು ಮಾತನಾಡಿ ಪುಸ್ತಕ ಪ್ರಕಾಶನವು 'ಪ್ರಕಾಶನೋದ್ಯಮ'ವಾಗಿ ಹೋಗಿರುವ ಸಂದರ್ಭದಲ್ಲಿ ಪುಸ್ತಕವನ್ನು ಒಂದು ಸಂಸ್ಕೃತಿಯಾಗಿ ಹೊರತರುತ್ತಿರುವ, ಬೆಳೆಸುತ್ತಿರುವ 'ಚಿಂತನ ಪುಸ್ತಕ'ದ ಪ್ರಯತ್ನ ಯಶಸ್ವಿಯಾಗಲಿ, ಆರ್ಥಿಕವಾಗಿಯೂ ಲಾಭ ತರಲಿ ಎಂದು ಅಭಿನಂದಿಸಿ ಹಾರೈಸಿದರು.

ವ್ಯಂಗ್ಯಚಿತ್ರಗಳು ಹುಟ್ಟಿದ್ದೆ ಪ್ರತಿಭಟನೆಯ ಕಲೆಯಾಗಿ, ಕಾರ್ಟೂನ್‌ಗಳು ವ್ಯವಸ್ಥೆ ವಿರುದ್ಧ - ಜನರಪರ ಇರಬೇಕು. ಜನರ ಅಸಮಾಧಾನ ಸಿಟ್ಟನ್ನು ಗ್ರಹಿಸಿಕೊಂಡು ಅದಕ್ಕೆ ಮೂರ್ತರೂಪ ಕೊಟ್ಟಾಗ ಅದು ಯಶಸ್ವಿಯಾಗುತ್ತದೆ ಎಂದು ಪಿ.ಮಹಮದ್ ಮಾತನಾಡುತ್ತಾ ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ವ್ಯಂಗ್ಯ ಚಿತ್ರ ಕಲಾವಿದರಾದ ಪ್ರಕಾಶ್‌ಶೆಟ್ಟಿಯುವರು ಲೋಕಾಯುಕ್ತ ನ್ಯಾ.ಸಂತೋಷ ಹೆಗಡೆಯುವರು ಎದುರಿಸಬೇಕಾಗಿ ಬಂದಿರುವ ಪರಿಸ್ಥಿತಿಯ ಕುರಿತು ತಾವೊಂದು ವ್ಯಂಗ್ಯ ಚಿತ್ರವನ್ನು ಸ್ಥಳದಲ್ಲೇ ರಚಿಸಿದರು. ಆ ನಂತರ ಅದನ್ನು ಹೆಗಡೆಯವರಿಗೆ ನೀಡಿದರು.

ಸಮಾರಂಭದಲ್ಲಿ ಪ್ರಸ್ತಾವಿಕ ಮಾತುಗಳನ್ನು ಚಿಂತನ ಪುಸ್ತಕದ ನಿರ್ದೇಶಕರಾದ ಎನ್.ಕೆ.ವಸಂತರಾಜ್ ಆಡಿದರು. ಎನ್.ಪ್ರಭಾ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಜಯರಾಮ್ ವಂದಿಸಿದರು. ವ್ಯಂಗ್ಯ ಚಿತ್ರಕಾರರು ಸೇರಿದಂತೆ ವಿವಿಧ ವಿಭಾಗಗಳ ಜನರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

○ ಆರ್.ರಾಮಕೃಷ್ಣ

ಆಫ್ರಿಕಾದಿಂದ ಅರೇಬಿಯಾ ದಾಟಿ ಭಾರತಕ್ಕೆ ಬಂದ ಮಾನವ

ಭಾರತ ಮೂಲತಃ ವಲಸಿಗರ ದೇಶ - ಸುಪ್ರೀಂಕೋರ್ಟ್



ಮನುಷ್ಯನನ್ನು ದೇವರು ಸೃಷ್ಟಿಸಿದ ಕತೆಯನ್ನು ಇಸ್ಲಾಂ, ಹಿಂದೂ ಪುರಾಣಗಳು, ಬೈಬಲ್ ಗ್ರಂಥಗಳು ಬಗೆ ಬಗೆಯಾಗಿ ನಮಗೆ ತಿಳಿಸುತ್ತಲೇ ಬಂದಿವೆ. ಆದರೆ, 150 ವರ್ಷಗಳ ಹಿಂದೆಯೇ ಚಾರ್ಲ್ಸ್ ಡಾರ್ವಿನ್ ಎಂಬ ಮಹೋನ್ನತ ವಿಜ್ಞಾನಿಯು ಮನುಷ್ಯ ಇತರೆ ಜೀವಿಗಳ ಜೊತೆ ಅದ್ಹೇಗೆ ವಿಕಾಸ ಹೊಂದುತ್ತಾ ಇಂದಿನ ಬುದ್ಧಿವಂತ ಮನುಷ್ಯನಾಗಿ ರೂಪುಗೊಂಡಿದ್ದಾನೆ ಎಂಬುದರ ಕುರಿತು ಪುರಾವೆ ಸಹಿತ ಸಾಬೀತು ಪಡಿಸಿ ಎಲ್ಲ ಧರ್ಮಗಳ ಮೂಢನಂಬಿಕೆಯ ಅಡಿಪಾಯಕ್ಕೆ ಪೆಟ್ಟು ನೀಡಿದರು.



ಅಂದಿನಿಂದ ಇಲ್ಲಿಯವರೆಗೆ ಜೀವಿಗಳ ವಿಕಾಸ ಕುರಿತು ಜರುಗುತ್ತಿರುವ ಸಂಶೋಧನೆಗಳು ಈ ನಂಬಿಕೆಯನ್ನು ಇನ್ನಷ್ಟು ಬಲಗೊಳಿಸುತ್ತಿವೆಯಷ್ಟೆ.

ಇತ್ತೀಚಿನ ಅಂತರಾಷ್ಟ್ರೀಯ ಸಂಶೋಧನಾ ತಂಡದ ಅಧ್ಯಯನದ ಪ್ರಕಾರ ಆಧುನಿಕ ಯೋರೋಪಿಯನ್ನರು ಮತ್ತು ಏಷ್ಯನ್ನರ ಪೂರ್ವಜರು ಕೇವಲ 50,000 ವರ್ಷಗಳ ಹಿಂದೆ ಆಫ್ರಿಕಾದಿಂದ ವಲಸೆ ಬಂದಿದ್ದಾರೆ ಎಂದು ತಿಳಿಸಿದೆ. ಇದರ ಪ್ರಕಾರ ಶಾರ್ಜಾದಲ್ಲಿರುವ ಜೆಬೆಲ್ ಫಯಾ ಎಂಬ ಸ್ಥಳವನ್ನು 1,25,000 ವರ್ಷಗಳ ಹಿಂದೆ ಆಧುನಿಕ ಮಾನವರು ಆಕ್ರಮಿಸಿಕೊಂಡಿದ್ದರು. ಅವರು ಕೆಂಪು ಸಮುದ್ರದ ಮೂಲಕ ಅರೇಬಿಯಾದೊಳಗೆ



ಪ್ರವೇಶಿಸಿದರು. ಆ ಸಮಯದಲ್ಲಿ ಕೆಂಪು ಸಮುದ್ರವು ಕೆಲವೇ ಕಿ.ಮೀನಷ್ಟು ಅಗಲವಿದ್ದು, ಸಮುದ್ರ ಮಟ್ಟವು ಇಂದಿಗಿಂತಲೂ 100 ಮೀಟರ್‌ನಷ್ಟು

ಪುಟ 14 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH